ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 36 ಆಗಸ್ಟ್ 31-ಸೆಪ್ಟೆಂಬರ್6, 1998 ರೂ. 2.00



ಬೆಲೆಯೇರಿಕೆಯ ಬೆಂಕಿಗೆ ಸಕ್ಕರೆ ಲೈಸೆನ್ಸ್ ರದ್ಧತಿಯ ತುಪ್ಪ!

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಟೀಕೆ

ವಾಜಪೇಯಿ ಸರಕಾರ ದೇಶದ ಜನರ ಮೇಲೆ ಮತ್ತೊಂದು 'ಉದಾರೀಕರಣ'ದ ಹೊರೆ ಹೇರಿದೆ. ಸಕ್ಕರೆ ಉದ್ದಿಮೆಯಲ್ಲಿನ ಲೈಸೆನ್ಸ್ ವ್ಯವಸ್ಥೆಯನ್ನು ರದ್ದು ಮಾಡಿ ಖಾಸಗಿ ಸಕ್ಕರೆ ಉದ್ದಿಮೆದಾರರ ಲೂಟಿಗೆ ದಾರಿ ಮಾಡಿಕೊಟ್ಟಿದೆ. ಅದೇ ವೇಳೆಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಮತ್ತೊಮ್ಮೆ ಭಾರತದ ಪ್ರತಿಷ್ಠೆಗೆ ಭಾರೀ ಕುಂದು ತಂದಿದೆ. ಭಯೋತ್ಪಾದಕತೆಯನ್ನು ಎದುರಿಸುವ ಹೆಸರಿನಲ್ಲಿ ಅಮೇರಿಕನ್ ಆಳರಸರು ಸೂಡಾನ್, ಅಫಘಾನಿಸ್ತಾನದ ಮೇಲೆ ಕ್ಷಿಪಣಿ ಧಾಳಿ ನಡೆಸಿದ್ದನ್ನು ನೇರವಾಗಿ ಖಂಡಿಸುವ ಧೈರ್ಯ ತೋರದೆ, ಗಡಿಯಾಚೆಯಿಂದ ಭಯೋತ್ಪಾದಕತೆಯ ಪರಿಣಾಮ ಈಗಲಾದರೂ ಅಮೇರಿಕಾದ ಅನುಭವಕ್ಕೆ ಬಂದಿದೆ ಎಂದು ಹೇಳಿ ತನ್ನ ಬೆನ್ನು ತಟ್ಟಿಕೊಳ್ಳಲು ಪ್ರಯತ್ನಿಸಿತು. ಆದರೆ ಅಮೇರಿಕಾ ಈ 'ಹಕ್ಕು' ತನಗೆ ಮಾತ್ರವಿದೆ, ಕಾಶ್ಮೀರದಲ್ಲಿ ಅದನ್ನು ಪ್ರಯೋಗಿಸಲು ಹೋಗಬೇಡಿ ಎಂದು ಉದ್ಧಟತನದಿಂದ ಹೇಳಿ, ಅಡ್ವಾಣಿ ಮತ್ತಿತರರ ನಿಲುಮೆಯ ಪೊಳ್ಳುತನ ಬಯಲಾಗಿದೆ. ಭಾರತೀಯರಿಗೆ ಆದ ಈ ಅವಮಾನವನ್ನು ಸಹಿಸಿಕೊಂಡೂ ಪ್ರಧಾನ ಮಂತ್ರಿಗಳ ವಿಶೇಷ ದೂತ ಜಸ್ವಂತ್‌ಸಿಂಗ್ ಅಮೇರಿಕನ್ ಪ್ರತಿನಿಧಿಗಳೊಂದಿಗೆ ಸಿಟಿಬಿಟಿ ಕುರಿತು ಗುಪ್ತ ಮಾತುಕತೆಗಳನ್ನು ಮುಂದುವರೆಸಿದ್ದಾರೆ.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಿ.ಜೆ.ಪಿ. ಸರಕಾರದ ಇತ್ತೀಚಿನ ಈ ಎರಡೂ ಜನ-ವಿರೋಧಿ, ದೇಶ-ವಿರೋಧಿ ನಿಲುಮೆಗಳನ್ನು ಒಂದು ಪತ್ರಿಕಾ ಹೇಳಿಕೆಯಲ್ಲಿ ಬಲವಾಗಿ ಖಂಡಿಸಿದೆ. ಆಗಸ್ಟ್ ೨೦ ಹಾಗೂ ೨೧ ರಂದು ನವದೆಹಲಿಯಲ್ಲಿ ಸಭೆ ಸೇರಿದ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ದ ಕೇಂದ್ರ ಸಮಿತಿ ಸಭೆಯ ನಂತರ ನೀಡಿದ ಪತ್ರಿಕಾ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ.

ಅಸ್ಥಿರತೆ ಹದಗೆಡುತ್ತಿದೆ

ಆಳಗೊಳ್ಳುತ್ತಿರುವ ರಾಜಕೀಯ ಅಸ್ಥಿರತೆ ಹಾಗೂ ಜನಸಾಮಾನ್ಯರ ಬದುಕಿನ ಮೇಲೆ ದುಷ್ಟ ಆಕ್ರಮಣಗಳು - ಇದು ಬಿಜೆಪಿಯ ಐದು ತಿಂಗಳ ಆಡಳಿತದ ಮುಖ್ಯ ಲಕ್ಷಣವಾಗಿದೆ. ಸಕ್ಕರೆಗೆ ಲೈಸೆನ್ಸ್ ರದ್ಧತಿಯಿಂದ ನಾಗಾಲೋಟ ಹೂಡುತ್ತಿರುವ ಬೆಲೆಗಳ ಏರಿಕೆ, ಇನ್ನಷ್ಟು ಮೇಲಕ್ಕೇರುತ್ತದೆ. ಇನ್ನು ಮುಂದೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ನ್ಯಾಯಬೆಲೆಗಳಲ್ಲಿ ಸಕ್ಕರೆ ಸಿಗದು. ಇದು ಬೇರೆಲ್ಲಾ ಅಗತ್ಯ ಸರಕುಗಳ ಬೆಲೆಗಳನ್ನೂ ಹೆಚ್ಚಿಸಲಿದೆ.

ದೇಶಾದ್ಯಂತ ಸಂಘಟಿಸಲಾಗುತ್ತಿರುವ ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ಜನಗಳಿಂದ ಸಿಪಿಐ(ಎಂ)ಗೆ ಉತ್ಸಾಹದ ಸ್ಪಂದನ ದೊರೆಯುತ್ತಿದೆ. ಈ ಪ್ರತಿಭಟನಾ ಕಾರ್ಯಗಳ ಚರಮಬಿಂದು ಎಂದರೆ ಸೆಪ್ಟೆಂಬರ್ 16 ರ ಬೃಹತ್ ರ್‍ಯಾಲಿ. ಈ ರ್‍ಯಾಲಿಯ ಸಿದ್ಧತೆಗಳನ್ನು ಅಂತಿಮಗೊಳಿಸಿದ ಕೇಂದ್ರ ಸಮಿತಿ ದೊಡ್ಡ ಸಂಖ್ಯೆಯಲ್ಲಿ ಈ ರ್‍ಯಾಲಿಯಲ್ಲಿ ಭಾಗವಹಿಸುವಂತೆ ಜನಗಳಿಗೆ ಕರೆ ನೀಡಿದೆ.

ಸಾಮ್ರಾಜ್ಯಶಾಹಿಗೆ ಬಿಜೆಪಿ ಶರಣಾಗತಿ

ಅಮೆರಿಕನ್ ಸಾಮ್ರಾಜ್ಯಶಾಹಿ ಸೂಡಾನ್ ಮತ್ತು ಅಫಘಾನಿಸ್ತಾನದ ಮೇಲೆ ನಡೆಸಿದ ನಗ್ನ ಮಿಲಿಟರಿ ಧಾಳಿಯನ್ನು ಬಿಜೆಪಿ ನೇತೃತ್ವದ ಸರಕಾರ ಅನುಮೋದಿಸಿರುವುದನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಬಲವಾಗಿ ಖಂಡಿಸಿತು. ಸ್ವತಂತ್ರ ದೇಶಗಳ ಸಾರ್ವಭೌಮತೆಯನ್ನು ಉಲ್ಲಂಘಿಸುವ ಎಲ್ಲಾ ಸಾಮ್ರಾಜ್ಯಶಾಹಿ ಮಿಲಿಟರಿ ಹಸ್ತಕ್ಷೇಪಗಳನ್ನು ಕಳೆದ ಐವತ್ತು ವರ್ಷಗಳಿಂದಲೂ ಭಾರತ ದೃಢವಾಗಿ ವಿರೋಧಿಸಿಕೊಂಡು ಬಂದಿದೆ. ಬಿಜೆಪಿ ನೇತೃತ್ವದ ಸರಕಾರ ಭಾರತೀಯ ಜನತೆಯ ಅಪಾರ ಸಾಮ್ರಾಜ್ಯಶಾಹಿ-ವಿರೋಧಿ ಭಾವನೆಗಳನ್ನು ಉಲ್ಲಂಘಿಸಿ ತಾನು ಅಮೆರಿಕನ್ ಸಾಮ್ರಾಜ್ಯ ಶಾಹಿಯ ಹಿತಾಸಕ್ತಿಗಳನ್ನು ಎತ್ತಿಹಿಡಿಯುವ ಸರಕಾರ ಎಂದು ಸಂಪೂರ್ಣವಾಗಿ, ಆಮೂಲಾಗ್ರವಾಗಿ ಬಯಲು ಮಾಡಿಕೊಂಡಿದೆ.

ಶ್ರೀಕೃಷ್ಣ ಆಯೋಗದ ವರದಿ ಜಾರಿಯಾಗಬೇಕು

ಶ್ರೀಕೃಷ್ಣ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಬೇಕು ಹಾಗೂ ಬಾಬ್ರಿ ಮಸೀದಿ ಧ್ವಂಸದ ನಂತರ ಮುಂಬೈಯನ್ನು ತಲ್ಲಣಗೊಳಿಸಿದ ಅತ್ಯಂತ ಹೀನ ಕೋಮು ಗಲಭೆಗಳಿಗೆ ಕುಮ್ಮಕ್ಕು ನೀಡಿದವರೆಂದು ಆಪಾದಿತರಾದ ಎಲ್ಲರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಪಡಿಸಿದೆ. ಮಹಾರಾಷ್ಟ್ರ ಮತ್ತು ಕೇಂದ್ರ ಸರ್ಕಾರ ಈ ವರದಿಯನ್ನು ಅನುಷ್ಠಾನಗೊಳಿಸುವಂತೆ ಒತ್ತಡ ತರಲು ಅಖಿಲ ಭಾರತ ಮಟ್ಟದ ಪ್ರತಿಭಟನಾ ಕಾರ್ಯಾಚರಣೆಗಳು ನಡೆಯುತ್ತಿವೆ. ಆಯೋಗದ ವರದಿಯನ್ನು ಬಹಿರಂಗವಾಗಿಯೇ ತಿರಸ್ಕರಿಸಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರದ ನಿರ್ಣಯವನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಖಂಡಿಸಿದೆ. ಒಂದು ತನಿಖಾ ಆಯೋಗದ ವರದಿಯನ್ನು ಈ ರೀತಿ ಸಾರಾಸಗಟಾಗಿ ತಿರಸ್ಕರಿಸಿರುವುದು ಸ್ವತಂತ್ರ ಭಾರತದಲ್ಲಿ ಇದೇ ಮೊದಲು.

ನಮ್ಮ ಜಾತ್ಯಾತೀತ ಪ್ರಜಾಪ್ರಭುತ್ವ ವಾದೀ ಅಡಿಗಲ್ಲನ್ನು ಬುಡಮೇಲು ಮಾಡುವ ಇಂತಹ ಸರ್ವಾಧಿಕಾರ ಶಾಹಿ ಕ್ರಮಗಳನ್ನು ಭಾರತದ ಜನ ಸಹಿಸುವುದಿಲ್ಲ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಬಿಜೆಪಿ ಸರಕಾರಕ್ಕೆ ಎಚ್ಚರಿಕೆ ನೀಡಿದೆ.

ನೈಸರ್ಗಿಕ ವಿಕೋಪಗಳು

ಭೂಕುಸಿತದಿಂದ 200 ಕ್ಕೂ ಹೆಚ್ಚು ಜನಗಳ ಸಾವಿನ ಬಗ್ಗೆ ಸಿಪಿಐ(ಎಂ) ಕೇಂದ್ರ ಸಮಿತಿ ತನ್ನ ಹಾರ್ದಿಕ ಶೋಕವನ್ನು ವ್ಯಕ್ತಪಡಿಸಿತು. ಕೈಲಾಸ ಮಾನಸ ಸರೋವರಕ್ಕೆ ಹೋಗುತ್ತಿದ್ದ ಯಾತ್ರಿಗಳು ಈ ಅಭೂತಪೂರ್ವ ಭೂಕುಸಿತಗಳಿಗೆ ಬಲಿಯಾಗಿದ್ದಾರೆ.

ಅಸ್ಸಾಂ ಮತ್ತು ಬಿಹಾರದಲ್ಲಿ ಪ್ರವಾಹದಿಂದ ಆಗಿರುವ ಅಪಾರ ಸಾವು-ನೋವುಗಳ ಬಗ್ಗೆ ದುಃಖ ವ್ಯಕ್ತಪಡಿಸಿರುವ ಕೇಂದ್ರ ಸಮಿತಿ ಈ ಪರಿಸ್ಥಿತಿಯನ್ನು ಎದುರಿಸಲು ರಾಜ್ಯ ಸರಕಾರಗಳಿಗೆ ತಕ್ಷಣ ಪರಿಹಾರ ಒದಗಿಸಬೇಕು ಎಂದು ಕೇಂದ್ರ ಸರಕಾರಕ್ಕೆ ಕರೆ ನೀಡಿದೆ.

ತ್ರಿಪುರಾ ಸನ್ನಿವೇಶ

ತ್ರಿಪುರಾದಲ್ಲಿ ಉಗ್ರಗಾಮಿ ಗುಂಪುಗಳ ಚಟುವಟಿಕೆಗಳು ತೀವ್ರಗೊಳ್ಳುತ್ತಿರುವ ಬಗ್ಗೆ ಕೇಂದ್ರ ಸಮಿತಿ ಆತಂಕ ವ್ಯಕ್ತಪಡಿಸಿದೆ. ಅಲ್ಲಿ ಉಗ್ರಗಾಮಿಗಳು ಅಪಹರಣ, ಸುಲಿಗೆ ಹಾಗೂ ಕೊಲೆಗಳನ್ನು ನಡೆಸುತ್ತಿದ್ದಾರೆ. ಇದು ಸಿಪಿಐ(ಎಂ) ಮತ್ತು ಎಡ ನೇತೃತ್ವದ ಸರಕಾರ ನಿರಂತರವಾಗಿ ಬುಡಕಟ್ಟು-ಬುಡಕಟ್ಟೇತರ ಐಕ್ಯತೆಯನ್ನು ಪೋಷಿಸಿ, ರಕ್ಷಿಸುತ್ತಿರುವ ಒಂದು ರಾಜ್ಯದಲ್ಲಿ ಜನಾಂಗಗಳ ನಡುವೆ ಸೆಳೆತಗಳನ್ನು ಸೃಷ್ಟಿಸುವ ಒಂದು ಪಜ್ಞಾಪೂರ್ವಕ ಪ್ರಯತ್ನ. ರಾಜ್ಯ ಸರಕಾರ ಮತ್ತೆ-ಮತ್ತೆ ಹೆಚ್ಚು ಭದ್ರತಾ ಪಡೆಗಳನ್ನು ಒದಗಿಸಬೇಕೆಂದು ಅರಿಕೆ ಮಾಡಿಕೊಂಡರೂ ಕೇಂದ್ರ ಸರಕಾರ ಅದಕ್ಕೆ ಸ್ಪಂದಿಸದಿರುವುದು ದುರದೃಷ್ಟಕರ. ಅದರ ಬದಲು, ಎರಡು ಬಟಾಲಿಯನ್‌ಗಳನ್ನು ರಾಜ್ಯದಿಂದ ಹಿಂದಕ್ಕೆ ಕರೆಸಿಕೊಳ್ಳಲಾಗಿದೆ. ತ್ರಿಪುರಾದ ಮುಖ್ಯಮಂತ್ರಿಗಳು ದಿಲ್ಲಿಗೆ ಭೇಟಿ ನೀಡಿ ತಕ್ಷಣ ಹೆಚ್ಚಿನ ಪಡೆಗಳನ್ನು ಕಳಿಸಬೇಕು ಎಂದು ಕೇಳಿಕೊಂಡರೂ ಇದುವರೆಗೆ ಇದಕ್ಕೆ ಸ್ಪಂದಿಸಿಲ್ಲ.

ಇದನ್ನು ಇನ್ನಷ್ಟು ವಿಳಂಬಗೊಳಿಸದೆ ಈ ಸೂಕ್ಷ್ಮ ಗಡಿ ರಾಜ್ಯದಲ್ಲಿ ಹಿಂಸಾತ್ಮಕ ಚಟುವಟಿಕೆಗಳನ್ನು ಎದುರಿಸಲು ಅಗತ್ಯವಾದ ಹೆಚ್ಚಿನ ಪಡೆಗಳನ್ನು ತಕ್ಷಣ ಕಳಿಸಬೇಕು ಎಂದು ಕೇಂದ್ರ ಸರಕಾರವನ್ನು ಕೇಂದ್ರ ಸಮಿತಿ ಕೇಳಿದೆ.

ಸಂಘಟನಾ ವಿಷಯಗಳು

ಸಿಪಿಐ(ಎಂ) ಕೇಂದ್ರ ಸಮಿತಿ ಕೇರಳದಲ್ಲಿ ಪಕ್ಷದೊಳಗಿನ ಸನ್ನಿವೇಶವನ್ನು ಚರ್ಚಿಸಿ, ಸಮಸ್ಯೆಗಳನ್ನು ಬಗೆಹರಿಸಲು ಒಂದು ನಿರ್ಣಯವನ್ನು ಕೈಗೊಂಡಿತು. 'ಸಿಪಿಐ(ಎಂ) ಉಳಿಸಿ ವೇದಿಕೆ' ಯ ಹೆಸರಲ್ಲಿ ಕೆಲವು ವ್ಯಕ್ತಿಗಳು ನಡೆಸಿರುವ ಚಟುವಟಿಕೆಗಳನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿತು. ಸಿಪಿಐ(ಎಂ)ನ ಕೇರಳ ಘಟಕ ಹಿಂದೆಯೂ, ಈಗಲೂ ದೇಶದಲ್ಲಿ ಅತಿದೊಡ್ಡ ಘಟಕವಾದ್ದರಿಂದ ಸಿಪಿಐ(ಎಂ) ನ್ನು ಒಂದು ಅಖಿಲ ಭಾರತ ಶಕ್ತಿಯಾಗಿ ಬೆಳೆಸುವಲ್ಲಿ ಒಂದು ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ. ಪಕ್ಷದೊಳಗಿನ ಸಮಸ್ಯೆಗಳು ಬೇಗನೇ ಪರಿಹಾರವಾಗುತ್ತವೆ ಎಂಬ ವಿಶ್ವಾಸವನ್ನು ಕೇಂದ್ರ ಸಮಿತಿ ವ್ಯಕ್ತಪಡಿಸಿದೆ. ○

ಕರ್ನಾಟಕದಲ್ಲೂ ಪ್ರತಿಭಟನೆಯ ಕಹಳೆ ಮೊಳಗಲಿ

ಐದು ತಿಂಗಳುಗಳು ಕಳೆದಿದೆಯಷ್ಟೇ. ಅಷ್ಟರಲ್ಲಿಯೇ ದೇಶದ ರಾಜಕೀಯದಲ್ಲಿ, ಜನಗಳ ಬದುಕಿನಲ್ಲಿ ಗಮನಾರ್ಹ ಸುಧಾರಣೆಗಳನ್ನು ನಿರೀಕ್ಷಿಸಿದವರಿಗೆ ಸಂಪೂರ್ಣ ಭ್ರಮನಿರಸನವಾಗಿದೆ. ಆಗಸ್ಟ್ 15ರಂದು ಕೆಂಪು ಕೋಟೆಯಲ್ಲಿ ಪ್ರಧಾನ ಮಂತ್ರಿಗಳ ತಡವರಿಕೆ-ಎಡವರಿಕೆಗಳ ನಡುವಿನ ನೀರಸ ಭಾಷಣದ ನಂತರ ಬಿ.ಜೆ.ಪಿ.ಗೆ ಮತ ನೀಡಿದವರಲ್ಲೂ ಯಾವ ನಿರೀಕ್ಷೆಯೂ ಉಳಿದಿಲ್ಲ. 1991ರಿಂದ ಆರಂಭವಾದ ಜನಸಾಮಾನ್ಯರ ಬದುಕಿನ ಮೇಲಿನ ಸತತ ಹಲ್ಲೆಗಳು, ಆಕ್ರಮಣಗಳು ನಿಲ್ಲುವ ಬದಲು ಇನ್ನಷ್ಟು ತೀವ್ರಗೊಂಡಿವೆ, ತೀಕ್ಷ್ಣಗೊಂಡಿವೆ. ಸದಾ ಬದುಕುಳಿಯಲು ಏದುಸಿರು ಬಿಡುತ್ತಿರುವ ಸರಕಾರ ಕಾಂಗ್ರೆಸ್ 1991ರಲ್ಲಿ ಆರಂಭಿಸಿದ ಆರ್ಥಿಕ ವಿನಾಶದ ಪ್ರಕ್ರಿಯೆಯನ್ನು ಬೇಗನೇ ಪೂರ್ಣಗೊಳಿಸಲಿಕ್ಕಾಗಿಯೇ ಉಸಿರು ಹಿಡಿದುಕೊಂಡಂತಿದೆ.

ವಾಸ್ತವವಾಗಿ ಈ ಹೊಸ ಸರಕಾರದ ನಿಜ ಬಣ್ಣ ಬಯಲಾಗಲು ಐದು ತಿಂಗಳೂ ಬೇಕಾಗಲಿಲ್ಲ. ಮೊದಲ ನೂರು ದಿನಗಳೊಳಗೇ ಎಡ ಪಕ್ಷಗಳು ನೀಡಿದ ಎಚ್ಚರಿಕೆ ನಿಜವಾಯಿತು. ನೂರೇ ದಿನಗಳಲ್ಲಿ ಹಣದುಬ್ಬರ ದರ ದ್ವಿಗುಣಗೊಂಡಿತು. ತರಕಾರಿ, ಬೇಳೆ, ಖಾದ್ಯ ಎಣ್ಣೆಗಳ ಬೆಲೆ ನಾಲ್ಕು ಪಟ್ಟಾಯಿತು. ಆದರೆ ಸರಕಾರ ಏನೂ ಮಾಡಲಿಲ್ಲ. ಲಾಭಕೋರ ವ್ಯಾಪಾರಿಗಳೇ ತಮ್ಮ ಪ್ರಮುಖ ಸಾಮಾಜಿಕ ನೆಲೆ ಎಂಬುದನ್ನು ಬಿ.ಜೆ.ಪಿ. ಈ ಮೂಲಕ ಎಲ್ಲರಿಗೂ ತೋರಿಸಿಕೊಟ್ಟಿತು. ನಾವೇನು ಮಾಡುವುದು, ಪ್ರಕೃತಿಯನ್ನು ದೂರಿ ಎಂದರು ಪ್ರಧಾನಿ ಮಂತ್ರಿಗಳು. ಸೆಪ್ಟಂಬರ್‌ವರೆಗೆ ಕಾಯಿರಿ, ಎಲ್ಲವೂ ತಾನೇ ತಾನಾಗಿ ಸರಿಯಾಗುತ್ತದೆ ಎನ್ನುತ್ತಿದ್ದಾರೆ ಈ ಹಿಂದೆ ದೇಶದ ಚಿನ್ನವನ್ನು ಅಡವಿಟ್ಟ ಹಣಕಾಸು ಮಂತ್ರಿಗಳು.

ಈ ನಡುವೆ ಒಂದಾದ ಮೇಲೊಂದರಂತೆ 'ಉದಾರೀಕರಣ'ದ ಕ್ರಮಗಳಿಗೆ ಮಾತ್ರ ನಿಲುಗಡೆಯೇ ಇಲ್ಲ. ಕಳೆದ ಎಂಟು ವರ್ಷಗಳಲ್ಲಿ ಉದಾರೀಕರಣವಾದಿಗಳ ಮಾತುಗಳೆಲ್ಲಾ ಟೊಳ್ಳು ಎಂದು ಸಾಬೀತಾದರೂ, ದೇಶದ ಆರ್ಥಿಕದ ಹಾಗೂ ಜನ ಸಾಮಾನ್ಯರ ನಿರಂತರ ಲೂಟಿಯಷ್ಟೇ ಈ ಉದಾರೀಕರಣ, ಜಾಗತೀಕರಣಗಳ ಫಲ ಎಂದು ಸ್ಪಷ್ಟವಾದರೂ ಈ ವಿನಾಶಕಾರೀ ನೀತಿಗಳ ಬಗ್ಗೆ ದೇಶದಲ್ಲಿ ವಿಶಾಲವಾದ ಒಮ್ಮತ ಇದೆಯೆಂದು ಹೇಳುತ್ತಾ ಒಂದಿಲ್ಲೊಂದು ನೆವ ಮುಂದೊಡ್ಡುತ್ತಾ ದೇಶದ ಸ್ವಾವಲಂಬೀ ಆರ್ಥಿಕವನ್ನು ಹಾಳುಗೆಡವಲು ಎಲ್ಲಾ ಕ್ರಮಗಳನ್ನು ಈ ಸರಕಾರ ಕೈಗೊಳ್ಳುತ್ತಿದೆ. 'ಸ್ವದೇಶಿ' ಎಂಬುದು ಹೊಸ ಆರ್ಥಿಕ ನೀತಿಗಳ ವಿರುದ್ಧ ಜನಸಾಮಾನ್ಯರ ಆಕ್ರೋಶದ ಹಿನ್ನೆಲೆಯಲ್ಲಿ ತಮ್ಮ ಬಲಪಂಥೀಯ ನೀತಿಗಳನ್ನು ಮರೆಮಾಚಲು ಹೂಡಿದ ಉಪಾಯ ಎಂಬ ಬಗ್ಗೆ ಈಗ ದುಡಿಯುವ ಜನರಲ್ಲಿ ಯಾರಿಗೂ ಸಂಶಯವುಳಿದಿಲ್ಲ.

ವಿರೋಧ ಪಕ್ಷವಾಗಿದ್ದಾಗ ಗ್ಯಾಟ್ ಒಪ್ಪಂದವನ್ನು ವಿರೋಧಿಸಿದ್ದ, ವಿಮಾ ಕ್ಷೇತ್ರದಲ್ಲಿ ವಿದೇಶಿಯರಿಗೆ ಅವಕಾಶ ಕೊಡಲು ವಿರೋಧಿಸಿದ್ದ, ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ದೊಡ್ಡದಾಗಿ ಮಾತನಾಡುತ್ತಿದ್ದ ಬಿ.ಜೆ.ಪಿ.ಯ ಸರಕಾರ ಈಗ ತದ್ವಿರುದ್ಧವಾಗಿ ವರ್ತಿಸುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳಿಗೆ ಪೆಟ್ರೋಲಿಯಂ, ಗಣಿಗಾರಿಕೆ, ಉಕ್ಕು ಹಾಗೂ ವಿದ್ಯುತ್ ವಲಯಗಳಲ್ಲಿ ಅತ್ಯಂತ ಲಾಭಕರ ಯೋಜನೆಗಳಿಗೆ ಅತ್ಯುತ್ಸಾಹದಿಂದ ಮಂಜೂರಾತಿ ನೀಡಿದೆ. 340 ಸರಕುಗಳ ಮೇಲಿದ್ದ ಆಮದು ಮಿತಿಗಳನ್ನೆಲ್ಲಾ ತೆಗೆದು ಹಾಕಿದೆ. ಇನ್ನೂ ಇಂತಹ ಕ್ರಮಗಳ ಸಾಲು-ಸಾಲು.

ಈ ವಿಫಲತೆಗಳನ್ನು ಮುಚ್ಚಿಕೊಳ್ಳಲು, ಜನಗಳ ಗಮನವನ್ನು ಬೇರೆಡೆಗೆ ಸೆಳೆಯಲು ಪೋಖ್ರಾನ್ ಸ್ಫೋಟ ನಡೆಸಿ ರಾಷ್ಟ್ರಾಂಧತೆಯನ್ನು ಬಡಿದೆಬ್ಬಿಸುವ ಪ್ರಯತ್ನವನ್ನು ಬಿ.ಜೆ.ಪಿ. ಸರಕಾರ ನಡೆಸಿತು. ಆದರೆ ದೊಡ್ಡ ಪತ್ರಿಕೆಗಳು ಎಷ್ಟೇ ಬೊಬ್ಬೆ ಹೊಡೆದರೂ ದುಡಿಯುವ ಜನಗಳನ್ನು ದಾರಿ ತಪ್ಪಿಸಲು ಅವರಿಗಾಗಲಿಲ್ಲ. ಇದು ಆರ್ಥಿಕ ರಂಗದಲ್ಲಿ ಕಾಂಗ್ರೆಸ್‌ಗಿಂತ ಏನೇನೂ ಭಿನ್ನವಲ್ಲದ, ಸಾಮಾಜಿಕ ರಂಗದಲ್ಲಿ ಅದಕ್ಕಿಂತಲೂ ಹೆಚ್ಚು ಅಪಾಯಕಾರಿಯಾದ, ಆಳುವ ವರ್ಗಗಳ ಹಿತಾಸಕ್ತಿಗಳನ್ನಷ್ಟೇ ಎತ್ತಿ ಹಿಡಿಯುವ ಸರಕಾರ ಎಂಬುದನ್ನು ಮರೆಮಾಚಲಾಗಲಿಲ್ಲ.

ನವದೆಹಲಿಯಲ್ಲಿ ಆಗಸ್ಟ್ 12ರಂದು ನಡೆದ ಬೃಹತ್ ಸಮಾವೇಶವೇ ಇದಕ್ಕೆ ಸಾಕ್ಷಿ. ಅಲ್ಲಿ ವ್ಯಕ್ತಗೊಂಡ ವಿವಿಧ ಜನವಿಭಾಗಗಳ ಆಕ್ರೋಶ ದುಡಿಯುವ ಜನ ಈ ಸರಕಾರದ ಜನ-ವಿರೋಧಿ ಬಲಪಂಥೀಯ ಸ್ವರೂಪವನ್ನು, ಕೋಮುವಾದಿ ದುಷ್ಟತನವನ್ನು ಹೆಚ್ಚೆಚ್ಚು ಅರಿಯಲಾರಂಭಿಸಿದ್ದಾರೆ ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸಿಕೊಟ್ಟಿತು. ಈಗ ಬೆಂಗಳೂರಿನಲ್ಲೂ ಇಂತಹ ಒಂದು ರಾಜ್ಯ ಮಟ್ಟದ ಸಮಾವೇಶಕ್ಕೆ 30ಕ್ಕೂ ಹೆಚ್ಚು ಕಾರ್ಮಿಕರ, ನೌಕರರ, ರೈತರ, ಕೃಷಿಕೂಲಿಕಾರರ, ವಿದ್ಯಾರ್ಥಿಗಳ, ಯುವಜನ, ಮಹಿಳೆಯರ ಹಾಗೂ ಇತರ ಜನಗಳ ಸಂಘಟನೆಗಳು ಭರದ ಸಿದ್ಧತೆ ನಡೆಸಿವೆ. ಸೆಪ್ಟಂಬರ್ 1ರಂದು ನಡೆಯಲಿರುವ ಈ ಸಮಾವೇಶ ರಾಜ್ಯದ ವಿವಿಧ ಜನ ವಿಭಾಗಗಳ ನೋವುಗಳಿಗೆ ದನಿ ನೀಡಿ ಅವುಗಳ ಪರಿಹಾರಕ್ಕಾಗಿ ರಾಜ್ಯದಲ್ಲೂ ಹೋರಾಟದ ಕಾರ್ಯಕ್ರಮವನ್ನು ರೂಪಿಸುತ್ತದೆ ಎಂಬುದು ಎಲ್ಲಾ ಪ್ರಜಾಪ್ರಭುತ್ವವಾದಿಗಳ ನಿರೀಕ್ಷೆ.

ದೇಶವನ್ನು ಬಿಕ್ಕಟ್ಟಿನ ಅಂಚಿಗೆ ತಳ್ಳಿರುವವರು.............. 4



ಇತಿಹಾಸದ ಪುಟಗಳಿಂದ

ರಾಷ್ಟ್ರಧ್ವಜ ರೂಪುಗೊಂಡ ಬಗೆ....



1906 ಭಾರತದ ಇತಿಹಾಸ ಹಲವಾರು ಘಟನಾವಳಿಗಳನ್ನು ಕಂಡ ವರ್ಷ. ಆ ವರ್ಷ ಭಾರತ ರಾಷ್ಟ್ರೀಯ ಕಾಂಗ್ರೆಸ್ ದೇಶದ ಜನತೆಗೆ ರಾಷ್ಟ್ರೀಯ ಚಿಹ್ನೆಯನ್ನು ನೀಡಿತು. ಅನಂತರ ಅದು ಕಾಂಗ್ರೆಸ್ ಚಿಹ್ನೆಯಾಗಿ ಅಂಗೀಕಾರವಾಯಿತು. ಭಾರತದ ಭೀಷ್ಮ ಪಿತಾಮಹ ಎನಿಸಿಕೊಂಡಿದ್ದ ದಾದಾಭಾಯಿ ನವರೋಜಿ ವೇದಿಕೆಯ ಮೇಲೆ ಧ್ವಜವನ್ನು ಹಾರಿಸಿದ್ದರು. ರಾಜಕೀಯ ಚೌಕಾಶಿಯ ಕಾಂಗ್ರೆಸ್‌ನ ಈ ಹಿಂದಿನ ನೀತಿಯನ್ನು ಕೈಬಿಡಲಾಗಿದೆ ಎಂದವರು ಘೋಷಿಸಿದರು.

ಪಕ್ಷ ಮತ್ತು ಜನತೆ ಇನ್ನುಮುಂದೆ ಸ್ವಯಂ ಸರಕಾರ ಅಥವಾ ಸ್ವರಾಜ್ಯಕ್ಕಾಗಿ ಹೋರಾಡುವರು, ಅದೊಂದೇ ಭಾರತದ ರಾಜಕೀಯ ಗುರಿ ಎಂದು ಕಾಂಗ್ರೆಸ್‌ನ ಹೊಸ ಅಧ್ಯಕ್ಷರು ಹೇಳಿದರು.

ಕಾಂಗ್ರೆಸ್ ನೀತಿಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗುತ್ತಿದ್ದ ಸಮಯದಲ್ಲಿ ಕಾಂಗ್ರೆಸ್ ಆರೋಹಣಮಾಡಿದ ಆ ರಾಷ್ಟ್ರಧ್ವಜವನ್ನು ರೂಪಿಸಿದವರು ಬಂಗಾಳದ ಮಹಾನ್ ಕ್ರಾಂತಿಕಾರಿ ಹೇಮಚಂದ್ರ ಕನುಂಗೊ. ಪ್ರೊಫೆಸರ್ ಸ್ಯಮಿತ್ ಸರ್ಕಾರ್ ಈ ಕತೆಯನ್ನು ಹೇಳಿದ್ದಾರೆ. ಪ್ರೊ. ಸರ್ಕಾರ್ ಅವರ 'ಬಂಗಾಳದಲ್ಲಿ ಸ್ವದೇಶಿ ಚಳವಳಿ' ಕೃತಿಯಲ್ಲಿ ದೇಶದ ಜನರ ಒಗ್ಗಟ್ಟು ಹಾಗೂ ಸಂಕಲ್ಪವನ್ನು ಪ್ರತಿನಿಧಿಸುವ ರಾಷ್ಟ್ರಧ್ವಜ ರೂಪಿತವಾದ ಸನ್ನಿವೇಶಗಳು ಬಂಗಾಳದ ಕ್ರಾಂತಿಕಾರಿಗಳು ಅದನ್ನು ಜನಪ್ರಿಯಗೊಳಿಸಿದ್ದು, ಕಾಂಗ್ರೆಸ್ ಹಾಗೂ ಇಡಿಯಾಗಿ ದೇಶದ ಜನತೆ ಅದನ್ನು ಅಂಗೀಕರಿಸಿದ್ದು ಮೊದಲಾದ ಅಂಶಗಳ ಸವಿವರವಾದ ಮಾಹಿತಿಗಳಿವೆ.

ಬಂಗಾಳವನ್ನು ವಿಭಜಿಸುವ ಲಾರ್ಡ್‌ಕರ್ಜನ್ ಅವರ ಪ್ರಕಟಣೆ (1905) ಯನ್ನು ದೇಶಕ್ಕೆ ಎಸಗಿದ ಅವಮಾನ, ಅದರಲ್ಲೂ ದೇಶದ ತಥಾಕಥಿತ 'ಭದ್ರಲೋಕ್'ದ ಮಧ್ಯಮವರ್ಗದ ಬುದ್ಧಿಜೀವಿಗಳಿಗೆ ಅವಮಾನ ಎಂದು ಪರಿಗಣಿಸಲಾಯಿತೆನ್ನುವುದು ಎಲ್ಲರಿಗೂ ಗೊತ್ತಿದೆ. ವಿಭಜನೆ ಪ್ರಸ್ತಾವಕ್ಕೆ ಈ ಬುದ್ಧಿ ಜೀವಿ ವರ್ಗ ತಕ್ಷಣವೇ ಪ್ರತಿರೋಧ ವ್ಯಕ್ತಪಡಿಸಿತು. ಸ್ವದೇಶಿ, ಸ್ವರಾಜ್ ಘೋಷಣೆ ನೀಡಿ ವಿದೇಶಿ ವಸ್ತುಗಳು ಹಾಗೂ ವಸಾಹತುಶಾಹಿ ಸಂಸ್ಥೆಗಳು ಮತ್ತು ಶಿಕ್ಷಣದ ಬಹಿಷ್ಕಾರಕ್ಕೆ ಕರೆ ನೀಡಿತು. ಆದರೆ ಇದರ ಕಾರ್ಯಾಚರಣೆ ವೇಳೆ ಸ್ವರಾಜ್ಯವಾದಿಗಳು, ಹೆಚ್ಚಾಗಿ ಮಧ್ಯಮವರ್ಗದ ಹಿಂದೂಗಳು ಸಂಪ್ರದಾಯವಾದಿ ಹಿಂದೂ ಪುನರುತ್ಥಾನವಾದಿ ಆವೇಶವನ್ನು ಪ್ರದರ್ಶಿಸಿದರು. ಇದನ್ನು ಮುಸ್ಲಿಮರು ಇಷ್ಟಪಡಲಿಲ್ಲ. ಶಿವಾಜಿ ಉತ್ಸವ ಮತ್ತು ರಾಣಾ ಪ್ರತಾಪ ಮೊದಲಾದವರಲ್ಲಿ ರಾಷ್ಟ್ರೀಯ ಹೀರೋಗಳನ್ನು ಹುಡುಕುವ ಈ ವಿಭಾಗದವರ ಪ್ರವೃತ್ತಿಯಿಂದಾಗಿ ಮುಸ್ಲಿಮರ ಭಾವನೆಗಳಿಗೆ ಘಾಸಿಯಾಯಿತು. ಸಹಜವಾಗಿಯೇ ಅವರಲ್ಲಿ ಹೆಚ್ಚಿನವರು ಆಂದೋಲನದಿಂದ ದೂರಸರಿದರು.

ಹೀಗಾಗಿ ಕೋಮುವಾದಿ ನಿಲುವಿಗೆ ತಡೆ ಹಾಕಿ ಹಿಂದೂ ಹಾಗೂ ಮುಸ್ಲಿಮರ ಒಟ್ಟಾರೆಯಾಗಿ ದೇಶದ ಜನತೆಯ ಸರ್ವೇಸಾಮಾನ್ಯ ಗುರಿಯನ್ನು ರೂಪಿಸುವುದು ಅಗತ್ಯ ಎಂದು ಬಲವಾಗಿ ಅಭಿಪ್ರಾಯ ಪಡಲಾಯಿತು. ಜನತೆಯ ಏಕತೆ ಹಾಗೂ ಸೌಹಾರ್ದವನ್ನು ಪ್ರತಿನಿಧಿಸುವ ಒಂದು ರಾಷ್ಟ್ರೀಯ ಧ್ವಜವೇ ಬಹುಶಃ ಇದಕ್ಕೆ ಸೂಕ್ತ ಸಾಧನ.

ತಮ್ಮ ಕಾಲದಲ್ಲಿ ಅತ್ಯಂತ ಜಾತ್ಯಾತೀತವಾದಿ ಹಾಗೂ ಉದಾರವಾದಿಯಾಗಿದ್ದ ಕೃಷ್ಣಕುಮಾರ ಮಿತ್ರ ಅವರಿಗೆ ಮೊದಲು ಈ ಉಪಾಯ ಹೊಳೆಯಿತು. ಈ ವಿಚಾರದಲ್ಲಿ ಮುನ್ನುಗ್ಗಿದ ಅವರು ಈ ದಿಸೆಯಲ್ಲಿ ಏನಾದರೂ ಮಾಡುವಂತೆ ತನ್ನ ಸಮಕಾಲೀನ ಸಮಾನ ಮನಸ್ಕರ ಮನವೊಲಿಸಿದರು. ಈ ದಿಸೆಯಲ್ಲಿ ಅನೇಕ ಪ್ರಯತ್ನಗಳು ನಡೆದವು.

ದೇಶಭ್ರಷ್ಟ ಕ್ರಾಂತಿಕಾರಿ ಹೇಮಚಂದ್ರ ಕನುಂಗೊ ಪ್ಯಾರಿಸಿನಲ್ಲಿದ್ದ ರಷ್ಯಾದ ಭೂಗತ ಕ್ರಾಂತಿಕಾರಿಗಳಿಂದ ಬಾಂಬ್ ತಯಾರಿಕೆ ಮತ್ತು ಕ್ರಾಂತಿಕಾರಿ ತಂತ್ರಗಳನ್ನು ಕಲಿಯುತ್ತಿದ್ದರು. ಅವರು ಧ್ವಜದ ಕಲೆ ಹಾಗೂ ವಿನ್ಯಾಸವನ್ನು ರೂಪಿಸಿದರು. 1906 ರ ಆಗಸ್ಟ್ 7 ರಂದು ನಡೆದ ಬಹಿಷ್ಕಾರ ದಿನಾಚರಣೆ ಸಂದರ್ಭದಲ್ಲಿ ಆ್ಯಂಟಿ ಸರ್ಕ್ಯುಲರ್ ಸೊಸೈಟಿಯ ಸ್ವಯಂಸೇವಕರು ಹಿರಿಯ ಕಾಂಗ್ರೆಸ್ ನಾಯಕ ಸುರೇಂದ್ರ ನಾಥ ಬ್ಯಾನರ್ಜಿ ಅವರಿಗೆ ಒಂದು ರಾಷ್ಟ್ರೀಯ ಧ್ವಜವನ್ನು ಒಪ್ಪಿಸಿದರು. ಅದು ಕೆಂಪು, ಹಾಸಿರು ಮತ್ತು ಹಳದಿ ಬಣ್ಣ ಹೊಂದಿತ್ತು. ಅದರಲ್ಲಿದ್ದ ಅರಳಿದ ತಾವರೆಯ ಎಂಟು ಎಸಳುಗಳು ಭಾರತ ಅಂದಿನ ಪ್ರಾಂತ್ಯಗಳನ್ನು ಸೂರ್ಯ ಮತ್ತು ಚಂದ್ರ ಅನುಕ್ರಮವಾಗಿ ಹಿಂದೂ ಹಾಗೂ ಮುಸ್ಲಿಮರನ್ನು ಪ್ರತಿನಿಧಿಸುತ್ತಿದ್ದವು. ಬಾವುಟದ ಮಧ್ಯಭಾಗದಲ್ಲಿ ದೇವನಾಗರಿ ಲಿಪಿಯಲ್ಲಿ 'ವಂದೇ ಮಾತರಂ' ಬರೆಯಲಾಗಿತ್ತು.

ಬ್ಯಾನರ್ಜಿಯವರಿಗೆ ನೀಡಲಾದ ಬಾವುಟವನ್ನು ಬಹುಶಃ ಹೇಮಚಂದ್ರ ಕನುಂಗೊ ಆಗ ವಿದೇಶದಲ್ಲಿದ್ದ ಇಬ್ಬರು ಭಾರತೀಯ ಕ್ರಾಂತಿಕಾರಿಗಳಾದ ಮೇಡಂ ಭಿಕಾಜಿ ಕಾಮಾ ಮತ್ತು ಸರ್ದಾರಸಿಂಗ್ ರಾವೋಜಿ ರಾಣಾ ಅವರಿಗೂ ಕೊಟ್ಟಿದ್ದರು. ಈ ಇಬ್ಬರೂ ಫ್ರೆಂಚ್ ಸೋಷಲಿಸ್ಟ್ ಪಕ್ಷವನ್ನು ಸೇರಿದ್ದರು. ಹಾಗೂ ಆ ಪಕ್ಷದ ಪ್ರತಿನಿಧಿಗಳಾಗಿ, 1907 ರ ಆಗಸ್ಟ್‌ನಲ್ಲಿ ಸ್ಟುಟ್‌ಗರ್ಟ್‌ನಲ್ಲಿ ನಡೆದ ಅಂತರಾಷ್ಟ್ರೀಯ ಸಮಾಜವಾದಿ ಮಹಾಧಿವೇಶನದಲ್ಲಿ ಪಾಲ್ಗೊಂಡಿದ್ದರು. ಆ ಸಮೇಳನದಲ್ಲೇ ಮೇಡಂ ಕಾಮಾ ಭಾರತದ ಸ್ವಾತಂತ್ರ್ಯದ ಸಂಕೇತವಾಗಿ ಭಾರತದ ತ್ರಿವರ್ಣ ರಾಷ್ಟ್ರಧ್ವಜವನ್ನು ಹಾರಿಸಿದರು. 1906 ರಲ್ಲಿ ಕಾಂಗ್ರೆಸ್‌ನ ಕಲ್ಕತ್ತ ಅಧಿವೇಶನದಲ್ಲಿ ದಾದಾಭಾಯಿ ನವರೋಜಿ ಹಾರಿಸಿದ್ದ ಧ್ವಜವನ್ನು ಅದು ಹೋಲುವಂತಿತ್ತು.

ಈ ರೀತಿಯಾಗಿ, ಜಗತ್ತಿನೆಲ್ಲೆಡೆ ಬಂಡವಾಳಶಾಹಿ ಜನತಾಂತ್ರಿಕ ಕ್ರಾಂತಿಗಳ ಚಿಹ್ನೆಯೆಂದು ಪರಿಗಣಿತವಾದ ತ್ರಿವರ್ಣ ಭಾರತದ ರಾಷ್ಟ್ರೀಯ ಆಂದೋಲನವನ್ನು ಪ್ರವೇಶಿಸಿತು. ಅಂತರಾಷ್ಟ್ರೀಯ ಸಮಾವೇಶವೊಂದರಲ್ಲಿ ಅದು ಪ್ರದರ್ಶಿತಗೊಂಡಿದ್ದರಿಂದ ತಕ್ಷಣವೇ ಅದು ಜಗತ್ತಿನ ಜನರಿಗೆ ಪರಿಚಿತವಾಯಿತು. ಜಾಗತಿಕ ಗೌರವಕ್ಕೂ ಪಾತ್ರವಾಗು ವಂತಾಯಿತು.


ಆಂಟಿಸರ್ಕ್ಯುಲರ್ ಸೊಸೈಟಿಯ ಧ್ವಜದ ಮೇಲೆ ವಿಮೋಚನೆ, ಸಮಾನತೆ ಹಾಗೂ ಭ್ರಾತೃತ್ವದ ಘೋಷಣೆ ಇತ್ತು. ಇಂಥ ಘೋಷಣೆಗಳು ಇಲ್ಲದಿದ್ದರೆ ಬ್ರಿಟಿಷ್‌ರಾಜರ ವಿರುದ್ಧದ ಹೋರಾಟದಲ್ಲಿ ತೊಡಗಿದ ಇತರ ಜನತೆಯೂ ಭಾರತದ ರಾಷ್ಟ್ರೀಯ ಧ್ವಜದಿಂದ ಸ್ಫೂರ್ತಿ ಪಡೆಯುತ್ತಿದ್ದರೋ ಇಲ್ಲವೋ.

ದಾದಾಭಾಯಿ ನವರೋಜಿ 1906 ರಲ್ಲಿ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನದಲ್ಲಿ ಮೊದಲ ಬಾರಿಗೆ ಈ ಧ್ವಜವನ್ನು ಹಾರಿಸಿದಾಗ ಭಾರತದ ಸ್ವಾತಂತ್ರ್ಯ ಪ್ರೇರಿತ ಜನತೆಯನ್ನು ಪ್ರತಿನಿಧಿಸುವ ಈ ಚಿಹ್ನೆ ಯುರೋಪಿನ ಇತರೆಡೆಗಳಲ್ಲಿ ಸ್ವಾತಂತ್ರಕ್ಕಾಗಿ ಜೀವತೆತ್ತ ಜನರ ಸಂಕೇತವೂ ಆದೀತು ಎಂದು ಭಾವಿಸಿರಲಿಕ್ಕಿಲ್ಲ.

ಮೂಲ ಲೇಖನ: ಲಾಡ್ಲಿಮೋಹನರಾಯ್ ಚೌಧರಿ

ಅನು; ವಿಶ್ವ

ನಿಲ್ಲು ರೂಪಾಯಿಯೆ ನಿಲ್ಲು!



ಜಿ.ಎಸ್.ಮಣಿ

ರೂಪಾಯಿ ಬೀಳುತ್ತಲೇ ಇದ್ದುದರಿಂದ ಭಾರತೀಯ ರಿಸರ್ವ್ ಬ್ಯಾಂಕ್ ಈಗ ಈ ಕೂಗನ್ನು ಹಾಕಿದೆ. ರೂಪಾಯಿ ಎಲ್ಲಿದೆಯೊ ಅಲ್ಲೇ ನಿಲ್ಲಬೇಕು ಇಲ್ಲವಾದರೆ ಮೇಲಕ್ಕೇರ ಬೇಕು. ರೂಪಾಯಿ ತನ್ನ ಮಟ್ಟವನ್ನು ತಾನು ಕಂಡು ಕೊಳ್ಳಲಿ ರೂಪಾಯಿಯ ಬೆಲೆ ಇಳಿದರೆ ರಫ್ತು ಹೆಚ್ಚುತ್ತದೆ ಎಂದೆಲ್ಲ ಹೇಳುತ್ತಿದ್ದ ಮಾತುಗಳು ಸದ್ಯಕ್ಕಂತೂ ಬಂದಾಗಿದೆ. ರೂಪಾಯಿ ತ್ರಿಶಂಕು ಸ್ವರ್ಗದಲ್ಲಿ ನಿಂತಿದೆ.

ರೂಪಾಯಿಯ ಬೆಲೆ ಕುಸಿತದ ಗಂಭೀರ ಪರಿಣಾಮಗಳ ಬಗ್ಗೆ ಸರ್ಕಾರಕ್ಕೆ ಹೆದರಿಕೆಯಾಗಿರುವುದಂತೂ ಇದೀಗ ಸ್ಪಷ್ಟ. ಆದ್ದರಿಂದಲೇ ಭಾರತೀಯ ರಿಸರ್ವ್ ಬ್ಯಾಂಕ್ ಇದನ್ನು ತಡೆಯಲು ಹಲವು ಕ್ರಮಗಳನ್ನು ಕೈಗೊಂಡಿರುವುದು. ಈ ಕೆಳಗಿನ ಕ್ರಮಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಘೋಷಿಸಿದೆ. ನಗದು ಶಿಲ್ಕು ಅನುಪಾತವನ್ನು ಈಗಿನ ಶೇ. 10ರಿಂದ ಶೇ. 11ಕ್ಕೆ ಏರಿಸಿರುವುದು- ಇದು ಆಗಸ್ಟ್ 29 ರಿಂದ ಜಾರಿಗೆ ಬರುತ್ತದೆ. ಈ ಕ್ರಮದಿಂದ ಸುಮಾರು 5000 ಕೋಟಿ ರೂಪಾಯಿಗಳು ವ್ಯವಸ್ಥೆಯಿಂದ ಹೊರಗೆ ಹೋಗುತ್ತದೆ. ಅಂದರೆ ಹಣದ ಪೂರೈಕೆ ಕಡಿಮೆ ಆಗುತ್ತದೆ.

ಪುನಃ ಖರೀದಿ (ರಿಪೊ) ದರವನ್ನು ಶೇ 5 ರಿಂದ ಶೇ 8ಕ್ಕೆ ಏರಿಸಲಾಗಿದೆ. ಇದು ವಿದೇಶೀ ಹಣದ ವ್ಯವಹಾರಕ್ಕೆ ಸ್ವಲ್ಪ ಹಿಡಿತ ಹಾಕುತ್ತದೆ. ವಿದೇಶಿ ನೇರ ಹೂಡಿಕೆದಾರರಿಗೆ ಭವಿಷ್ಯದ ವ್ಯವಹಾರಗಳ ಭದ್ರತೆ ಒದಗಿಸ ಲಾಗಿದೆ. ವಿದೇಶಿ ವ್ಯವಹಾರಗಳಲ್ಲಿ ಹಲವು ತರಹದ ರಿಯಾಯಿತಿಗಳನ್ನು ಘೋಷಿಸಲಾಗಿದೆ.

ಈಗ ಈ ಎಲ್ಲ ಕ್ರಮಗಳಿಂದ ವ್ಯವಸ್ಥೆಯಲ್ಲಿ ಹರಿಯುತ್ತಿದ್ದ ರೂಪಾಯಿಗಳ ಪ್ರಮಾಣ ಕಡಿಮೆಯಾಗಿ ಅದರ ಬೆಲೆ ಸ್ಥಿರಗೊಳ್ಳುತ್ತದೆ ಎಂಬುದೇ ಭಾರತೀಯ ರಿಸರ್ವ್ ಬ್ಯಾಂಕಿನ ನಿರೀಕ್ಷೆ. ಇದರ ಜೊತೆಗೆ ಬಡ್ಡಿದರಗಳಲ್ಲಿ ಹೆಚ್ಚಳ ಆಗಬಹುದು. ಬಡ್ಡಿ ದರ ಹೆಚ್ಚಾದರೆ ವಿದೇಶೀ ವಿನಿಮಯ ಹೆಚ್ಚಿನ ಪ್ರಮಾಣದಲ್ಲಿ ದೇಶದೊಳಗೆ ಹರಿದು ಬರಬಹುದೆಂಬುದು ಒಂದು ನಿರೀಕ್ಷೆ.

ಏನೇ ಇರಲಿ ರೂಪಾಯಿಯ ಬೆಲೆ ಮಾತ್ರ ಕುಸಿಯುತ್ತಲೇ ಹೋಗಿದ್ದು ಡಾಲರಿಗೆ 43.53 ರೂ ಗಳಷ್ಟರ ದಾಖಲೆ ಕುಸಿತವನ್ನು ಅದು ಕಂಡಿದೆ. ದೇಶದ ಆರ್ಥಿಕವನ್ನು ಅತ್ಯುತ್ತಮವಾಗಿ ನಿರ್ವಹಿಸು ತ್ತಿರುವುದರ ಲಕ್ಷಣ ಇದು ಎಂದು ಬಿಜೆಪಿಯ ಕೇಂದ್ರ ಸರ್ಕಾರ ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಳ್ಳ ಬೇಕು ಅಷ್ಟೇ.

ಮುನ್ನುಗ್ಗುವ ಬದಲು ಹಿನ್ನುಗ್ಗಿದ ಬಾಂಡ್

ಆರ್ಥಿಕ ನಿರ್ಬಂಧಗಳ ಪರಿಣಾಮಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿ ಭಾರತೀಯ ಸ್ಟೇಟ್ ಬ್ಯಾಂಕ್ ರಿಸರ್ಜಂಟ್ ಇಂಡಿಯಾ ಬಾಂಡ್ ಎಂಬ ಬಾಂಡನ್ನು ವಿದೇಶಗಳಲ್ಲಿ ನೀಡಿ ವಿದೇಶೀ ವಿನಿಮಯ ಸಂಗ್ರಹಿಸುವ ಯೋಜನೆ ಹಾಕಿ ಕೊಂಡಿತ್ತು. ಅಣ್ವಸ್ತ್ರ ಪರೀಕ್ಷೆ ನಡೆಸಿದ ಕಾರಣ ಅಮೇರಿಕ ಈ ಬಾಂಡಿಗೂ ನಿರ್ಬಂಧ ಹೇರಿತ್ತು. ಆದರೂ ಈ ಬಾಂಡಿಗೆ ಭಾರೀ ಪ್ರತಿಕ್ರಿಯೆ ಇದೆ ಎಂದು ಸರ್ಕಾರ ಮತ್ತು ಭಾರತೀಯ ಸ್ಟೇಟ್ ಬ್ಯಾಂಕುಗಳು ಹೇಳುತ್ತಲೇ ಬಂದಿದ್ದವು. ಈ ಬಾಂಡ್‌ನ ನೀಡಿಕೆ ಆಗಸ್ಟ್ 17 ಕ್ಕೆ ಮುಗಿಯಬೇಕಾಗಿತ್ತು. ಆದರೆ ಪ್ರತಿಕ್ರಿಯೆ ಬಹಳ ನಿರಾಶದಾಯಕವಾದದ್ದರಿಂದ ಭಾರತೀಯ ರಿಸರ್ವ್‌ಬ್ಯಾಂಕ್ ನೀಡಿಕೆ ಅವಧಿಯನ್ನು ಇನ್ನು ಒಂದು ವಾರ ಅಂದರೆಆಗಸ್ಟ್ 24 ರ ವರೆಗೆ ವಿಸ್ತರಿಸಿದೆ.

ವಿದೇಶಗಳಲ್ಲಿ ಈ ಬಾಂಡಿಗೆ ಭಾರೀ ಬೇಡಿಕೆ ಇರುವುದರಿಂದ ಹೂಡಿಕೆದಾರರಿಗೆ ಅನುಕೂಲವಾಗಲಿ ಎಂದು ಅವಧಿಯನ್ನು ವಿಸ್ತರಿಸಲಾಗಿದೆ ಎಂದು ಹೇಳಲಾಗುತ್ತಿದ್ದರೂ ಈ ಬಾಂಡಿಗೆ ಬಂದಿರುವ ಪ್ರತಿಕ್ರಿಯೆಯೇ ತೀರ ನಿರಾಶಾದಾಯಕ ವಾದದ್ದು ಎಂಬುದು ಈಗಂತೂ ಸ್ಪಷ್ಟವಾಗಿ ಹೋಗಿದೆ.

ಮತ್ತೆ ಆಮದು ಉದಾರೀಕರಣ

ಈಗಾಗಲೇ ರಫ್ತಿನ ಕುಸಿತದಿಂದ ದೇಶ ಮುಗ್ಗಟ್ಟನ್ನು ಎದುರಿಸುತ್ತಲಿದೆ. ರಫ್ತು ಹೆಚ್ಚಿಸುವ ಕ್ರಮಗಳನ್ನು ಸರ್ಕಾರ ಘೋಷಿಸುತ್ತಲೇ ಇದೆ. ಆದರೆ ಅದರಿಂದ ರಫ್ತು ಹೆಚ್ಚಾಗುತ್ತಿಲ್ಲ. ಇದರ ಜೊತೆಗೇ ಆಮದು ಹೆಚ್ಚಾಗಿರುವುದರಿಂದ ವಿದೇಶೀ ವಿನಿಮಯದ ಶಿಲ್ಕು ಕರಗಿಹೋಗುತ್ತಿದೆ.

ಆದರೆ ವಿಶ್ವವ್ಯಾಪಾರ ಸಂಸ್ಥೆಗೆ ಸರ್ಕಾರ ನೀಡಿರುವ ಭರವಸೆಗಳನ್ನು ಉಳಿಸಿಕೊಳ್ಳುವ ಸಲುವಾಗಿ ಸರ್ಕಾರ ಮತ್ತೆ ಆಮದನ್ನು ಉದಾರೀಕರಿಸಿದೆ. ಸುಮಾರು 148 ಸರಕುಗಳ ಆಮದನ್ನು ಉದಾರೀಕರಿಸಿ ಕೊಳ್ಳಲಾಗಿದೆ.

ಈ ಸರಕುಗಳ ಪಟ್ಟಿಯಲ್ಲಿ ಹಲವು ಕೃಷಿ ಉತ್ಪನ್ನಗಳು ಸೇರಿವೆ. ಬಳಕೆ ವಸ್ತುಗಳಾದ ಅತ್ತರುಗಳು, ಶೇವಿಂಗ್ ಸಾಬೂನುಗಳು, ಕೈಚೀಲಗಳು, ಗಣಕ ಯಂತ್ರಗಳು, ಟೇಪ್‌ರೆಕಾರ್ಡ್‌ಗಳು, ಅಡುಗೆಸ್ಟೌವ್‌ಗಳುಇತ್ಯಾದಿಗಳು ಸೇರಿವೆ.

ಈ ಎಲ್ಲ ಸರಕುಗಳ ಆಮದಿನ ಮೇಲೆ ಇಲ್ಲಿಯವರೆಗೆ ನಿರ್ಬಂಧಗಳನ್ನು ಹೇರಲಾಗಿತ್ತು. ಈಗ ಈ ನಿರ್ಬಂಧಗಳನ್ನು ತೆರೆದಿರುವುದರಿಂದ ಆಮದು ಹೆಚ್ಚಾಗು ವುದರ ಜೊತೆಗೆ ದೇಶೀ ಉದ್ದಿಮೆಗಳೂ ಇದರಿಂದಾಗಿ ಮಾರುಕಟ್ಟೆ ಕಡಿಮೆಯಾಗಿ ನರಳಲಿವೆ.

ಇತ್ತೀಚೆಗೆ ಅಭಿವೃದ್ಧಿ ಹೊಂದಿದ ದೇಶಗಳು ಭಾರತದ ಮೇಲೆ ಪ್ರಮಾಣಾತ್ಮಕ ನಿರ್ಬಂಧಗಳನ್ನು ಹೇರುವ ಬೆದರಿಕೆಯನ್ನು ಒಡ್ಡಿದ್ದವು.

ಈಗ ಮತ್ತೆ ಆಮದು ಉದಾರೀಕರಿಸಿರುವುದರಿಂದ ದೇಶದ ಆರ್ಥಿಕ ಇನ್ನೂ ಹದಗೆಡಲಿದೆಯೇ ಹೊರತು ಸುಧಾರಿಸುವುದಂತೂ ಇಲ್ಲ.

ಸಕ್ಕರೆ ಉದ್ದಿಮೆ ಕಹಿಯಾಗಲಿದೆಯೆ?

ಸಕ್ಕರೆ ಉದ್ದಿಮೆಯನ್ನೇ ಸರ್ಕಾರ ಉದಾರೀಕರಿಸಿದೆ. ಈಗ ಎರಡು ಸಕ್ಕರೆ ಕಾರ್ಖಾನೆಗಳ ನಡುವೆ 15 ಕಿಲೋ ಮೀಟರ್ ಅಂತರವಿದ್ದರೆ ಸಾಕು. ಅಂದರೆ ಒಂದು ಸಕ್ಕರೆ ಕಾರ್ಖಾನೆಯಿದ್ದರೆ ಅದರಿಂದ 15 ಕಿ.ಮೀ ದೂರದಲ್ಲಿ ಇನ್ನೊಂದು ಸಕ್ಕರೆ ಕಾರ್ಖಾನೆ ಸ್ಥಾಪಿಸಬಹುದು. ಸಕ್ಕರೆ ಉದ್ದಿಮೆ ಒಂದು ಮುಖ್ಯವಾದ ಉದ್ದಿಮೆ. ಮದ್ಯದ ತಯಾರಿಕೆಗೆ ಬೇಕಾಗುವ ಕಚ್ಚಾ ಸಾಮಗ್ರಿಯನ್ನು ಒದಗಿಸುವುದರಿಂದಾಗಿ ಈ ಉದ್ದಿಮೆಗೆ ಇನ್ನೂ ಹೆಚ್ಚಿನ ಪ್ರಾಮುಖ್ಯತೆ-ಇರಲಿ.

ಈಗ ಸಕ್ಕರೆ ಉದ್ದಿಮೆಗೆ ಲೈಸೆನ್ಸ್ ಬೇಡವೆಂಬ ನಿಯಮವನ್ನು ಜಾರಿಗೆ ತಂದಿರುವುದರಿಂದ ಉದ್ದಿಮೆಗೆ ಒತ್ತು ಸಿಗುತ್ತದೆ ಎಂದು ಸರ್ಕಾರ ಮತ್ತು ಬಂಡವಾಳಿಗರು ಹೇಳುತ್ತಾರೆ. ಆದರ ಬದಲಿಗೆ ಈಗಾಗಲೇ ಈ ಉದ್ದಿಮೆಯಲ್ಲಿ ಹೆಚ್ಚಿನ ಸಾಮರ್ಥ್ಯ ಇರುವುದರಿಂದ ಹೆಚ್ಚೆಚ್ಚು ಉದ್ದಿಮೆಗಳು ರೋಗಗ್ರಸ್ತವಾಗಲಿವೆ ಎಂಬುದು ತಜ್ಞರ ನಿರೀಕ್ಷೆ.

ಸಹಕಾರಿ ಸಕ್ಕರೆ ಕಾರ್ಖಾನೆಗಳಿರುವ ಕಡೆಯಲ್ಲಿಯೂ ಖಾಸಗಿ ಕಾರ್ಖಾನೆಗಳು ಹುಟ್ಟಿಕೊಳ್ಳುವುದರಿಂದ ತೊಂದರೆಗಳು ಉದ್ಭವವಾಗಲಿವೆ.

ಸಕ್ಕರೆ ಉದ್ಯಮವೇ ಕಹಿಯಾಗುವ ಸಾಧ್ಯತೆ ಈಗ ಹೆಚ್ಚಾಗಿದೆ.

ಈಗ ಅವರದೇ ಎಚ್ಚರಿಕೆ

ಕೇಂದ್ರದ ಬಿಜೆಪಿ ಸರ್ಕಾರ ಆರ್ಥಿಕದ ವಿಷಯದಲ್ಲಿ ವಿಫಲವಾಗಿದೆ. ಎಂಬ ಬಗ್ಗೆ ಬಿಜೆಪಿಯೇ ಒಪ್ಪಿಕೊಂಡಿದೆ. ಬಿಜೆಪಿ ರೂಪಾಯಿಯ ಅಪಮೌಲ್ಯೀಕರಣದ ಬಗೆಗೆ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. ಹಣಕಾಸು ಮಾರುಕಟ್ಟೆಯಲ್ಲಿನ ಏರಿಳಿತ ಮತ್ತು ರೂಪಾಯಿಯ ಬೆಲೆಯಲ್ಲಿನ ಕುಸಿತದ ಬಗ್ಗೆ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯೇ ಆತಂಕ ವ್ಯಕ್ತಪಡಿಸಿದೆ.

ಸರ್ಕಾರ ಹಲವು ಸುಂಕಗಳನ್ನು ಪುನಃ ಹೇರಬೇಕು. ಮತ್ತು ಆಮೂಲಕ ದೇಶೀ ಉದ್ದಿಮೆಗಳನ್ನು ರಕ್ಷಿಸಬೇಕು ಎಂದಿದೆ ಅದು. ಎಲ್ಲಕ್ಕೂ ಮುಖ್ಯವಾಗಿ ಟೀಕೆ ಬಂದಿದ್ದು ಬೆಲೆ ಏರಿಕೆ ತಡೆಯುವುದರಲ್ಲಿ ಸರ್ಕಾರದ ವೈಫಲ್ಯ. ಈ ವೈಫಲ್ಯದಿಂದಾಗಿಯೇ ಬಿಜೆಪಿಯ ಮಿತ್ರಪಕ್ಷಗಳು ಕಟು ಟೀಕೆ ಮಾಡುವುದು ಸಾಧ್ಯವಾಗಿದೆ. ಆದರೆ ಇಂತಹ ಟೀಕೆಗಳು ಒಳಗಿನಿಂದಲೇ ಬಂದರೂ ಅದು ಒಟ್ಟಾರೆ ಜಾಗತಿಕ ದೃಷ್ಟಿ ಕೋನದಿಂದ ಬಂದಂತಹ ದ್ದಲ್ಲ. ದೇಶದ ಸಮಸ್ಯೆಗಳ ಬಗೆಗಿನ ಸರಿಯಾದ ಅರಿವೇ ಇಲ್ಲದಿರುವುದರಿಂದ ಮತ್ತು ಆ ಸಮಸ್ಯೆಗಳನ್ನು ಪರಿಹರಿಸುವ ಬಗೆಗೆ ನೈಜ ಕಾಳಜಿ ಇಲ್ಲದೇ ಇರುವುದರಿಂದ ಈ ಪರಿಸ್ಥಿತಿ ಉಂಟಾಗಿದೆ ಎಂಬುದು ಸ್ಪಷ್ಟ. ಈ ಪರಿಸ್ಥಿತಿಯನ್ನು ಬಿಜೆಪಿಯ ಸರ್ಕಾರ ಖಂಡಿತವಾಗಿ ಸುಧಾರಿಸಲಾರದು ಎಂಬುದು ಅದರ ಈವರೆಗಿನ ಕಾರ್ಯವೈಖರಿಯಿಂದಲೇ ಗೊತ್ತಾಗಿಹೋಗಿದೆ.

ಅಬಕಾರಿ ಸುಂಕ ಕಡಿತ

ಕೇಂದ್ರದ ಬಿಜೆಪಿ ಸರ್ಕಾರ ಆರ್ಥಿಕ ಬೆಳವಣಿಗೆ ಸಾಧಿಸಲು ಏನೆಲ್ಲ ಪ್ರಯತ್ನಗಳನ್ನು ಮಾಡುತ್ತಿದೆಯೆಂದರೆ ಒಂದು ದೊಡ್ಡ ಪಟ್ಟಿಯನ್ನೇ ನೀಡಬೇಕಾದೀತು. ಆದರೆ ಸರಿಯಾದ ಸೈದ್ಧಾಂತಿಕ ಚೌಕಟ್ಟು ಮತ್ತು ಆರ್ಥಿಕ ಸಮಸ್ಯೆಗಳ ಬಗೆಗೆ ಸ್ಪಷ್ಟವಾದ ದೃಷ್ಟಿಕೋನವೇ ಇಲ್ಲದೆ ಹೋದರೆ ಏನಾಗುತ್ತದೊ ಅದೇ ಈಗ ಆಗುತ್ತಿರುವುದು.

ಹಲವು ಕ್ರಮಗಳ ಪೈಕಿ ಈಗ ಅಬಕಾರಿ ಸುಂಕ ಕಡಿತವು ಸೇರಿಕೊಂಡಿದೆ. ಬಂಡವಾಳಿಗರ ಒತ್ತಡಕ್ಕೆ ಮಣಿದು ಕೇಂದ್ರ ಹಣಕಾಸು ಮಂತ್ರಿಗಳು ಕೇಂದ್ರ ಅಬಕಾರಿ ಸುಂಕದ ದರಗಳನ್ನು ಸರಳೀಕರಿಸಿ ಕಡಿಮೆ ಮಾಡಿದ್ದಾರೆ. ಹಂತ ಹಂತವಾಗಿ ಬರೀ ಮೂರೇ ದರಗಳನ್ನು ವಿಧಿಸುವುದಾಗಿ ಅವರು ಹೇಳಿದ್ದಾರೆ.

ಆದರೆ ಈ ಎಲ್ಲ ಕ್ರಮಗಳಿಂದಲೂ ಸರ್ಕಾರದ ಕಂದಾಯ ಸಂಗ್ರಹಣೆ ಬಜೆಟ್ಟಿನಲ್ಲಿ ನಿರೀಕ್ಷಿಸಿದ್ದಕ್ಕಿಂತ ಕಡಿಮೆಯೇ ಇರುತ್ತದೆ. ಎಂದು ನಿರೀಕ್ಷಿಸಲಾಗಿದೆ.

ಕರ್ನಾಟಕದಲ್ಲಿ ಕಳೆದವಾರ

ಆಗಸ್ಟ್ 21

- ಬಡವರ 'ಭಾಗ್ಯಜ್ಯೋತಿ'ಗೆ ಚ್ಯುತಿ, ಶುಲ್ಕ ಏರಿಕೆ.
- ಎಂಜಿನಿಯರುಗಳ ಬೇಡಿಕೆ ಪರಿಶೀಲನೆಗೆ ಸಂಪುಟ ಉಪಸಮಿತಿ ರಚನೆ
- ಖ್ಯಾತ ಸಾಹಿತಿ-ಗುರು ತ.ಸು.ಶಾಮರಾವ್ ಇನ್ನಿಲ್ಲ.

ಆಗಸ್ಟ್ 22

- ದ.ಕನ್ನಡ, ಶಿವಮೊಗ್ಗ, ಮೈಸೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಖಾಸಗಿ ಬಸ್ ಮುಷ್ಕರ.
- ಆಲಮಟ್ಟಿ : ಸುಪ್ರೀಂ ಕೋರ್ಟಿಗೆ ರಾಜ್ಯದ ಸಮಜಾಯಿಷಿ ಹೇಳಿಕೆ ಸಲ್ಲಿಕೆ.
- ಆಫಘಾನಿಸ್ತಾನ ಮತ್ತು ಸೂಡಾನ್ ಮೇಲೆ ಅಮೇರಿಕದ ಕ್ಷಿಪಣಿ ದಾಳಿ ಹಿನ್ನೆಲೆಯಲ್ಲಿ ಗುಲ್ಬರ್ಗದಲ್ಲಿ ಕಟ್ಟೆಚ್ಚರ.

ಆಗಸ್ಟ್ 23

- ರಾಜ್ಯ ರಸ್ತೆಗಳ ಸುಧಾರಣೆಗೆ ನಬಾರ್ಡ್‌ನಿಂದ 300 ಕೋಟಿ ರೂ. ನೆರವು.
- ರಾಜ್ಯದ 18 ಜಿಲ್ಲೆಗಳಲ್ಲಿ ಮಳೆಯ ಕೊರತೆ.
- 48 ಕೆ.ಎಸ್.ಎಸ್. ಅಧಿಕಾರಿಗಳ ವರ್ಗಾವಣೆ.
- ಸುಳ್ಯ ಲಾಕಪ್ ಸಾವು ಎಸ್.ಐ. ಸಸ್ಪೆಂಡ್

ಆಗಸ್ಟ್ 24

- ಮುಖ್ಯಮಂತ್ರಿ ಕಾರ್ಯದರ್ಶಿ ಕಚೇರಿಯಲ್ಲಿ ಸಚಿವ ಶಾಸಕರ ಧರಣಿ
- ಭೂವಿವಾದ:ಗುಲ್ಬರ್ಗದ ಲಾಡ್ಲಾಪುರ ಗ್ರಾಮಸ್ಥರ ಮೇಲೆ ಲಾಠಿ ಪ್ರಹಾರ, ಗಾಳಿಯಲ್ಲಿ ಗುಂಡು, ದಿಗ್ಬಂಧನ
- ಪಾಲಿಟೆಕ್ನಿಕ್ ಶಿಕ್ಷಕರಿಗೆ ಮಧ್ಯಂತರ ಪರಿಹಾರ.
- ಸ್ಟಾಂಪ್ ಶುಲ್ಕ ಏರಿಕೆಗೆ ರಾಜ್ಯ ಹೈಕೋರ್ಟ್ ತಡೆ.

ಆಗಸ್ಟ್ 26

- ಆಸ್ತಿ ವಿವರ ತಿಳಿಸಲು ಹಲವು ಸಚಿವ-ಶಾಸಕರ ನಕಾರ.
- ಮುಸ್ಲಿಂ ವಿದ್ಯಾಸಂಸ್ಥೆಗಳಿಗೆ ಎರಡು ವೈದ್ಯಕೀಯ ಕಾಲೇಜಿಗೆ ಅನುಮತಿ ಕೋರಿ ಕೇಂದ್ರಕ್ಕೆ ರಾಜ್ಯದ ಶಿಫಾರಸು.
- ಕಪಾರ್ಟ್ ಯೋಜನೆ ವಂಚನೆ ರಾಜ್ಯದ 22 ಸಂಸ್ಥೆಗಳು ಕಪ್ಪು ಪಟ್ಟಿಗೆ.

ಆಗಸ್ಟ್ 27

- ಬೆಂಗಳೂರಿನಲ್ಲಿ ಅಂತರ ರಾಷ್ಟ್ರೀಯ 'ಪ್ರಗತಿ ಮೈದಾನ' ಸ್ಥಾಪನೆ ಎಂದು ಮುಖ್ಯಮಂತ್ರಿ.
- ರೈತರಿಗೆ ನೆರವಾಗಲು 'ಬೆಲೆ ಸ್ಥಿರತೆ ನಿಧಿ' ಸ್ಥಾಪನೆ.
- ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ನಾಗರೀಕ ಸೌಲಭ್ಯ ಕಲ್ಪಿಸುವಂತೆ ಹೈಕೋರ್ಟ್ ಆದೇಶ.

ಕಾರ್ಮಿಕ ಚಳುವಳಿಯ ಚೇತನ ಕಾಮ್ರೇಡ್ ಸೂರಿಗೆ 75 ರ ಅಭಿನಂದನೆ



ಆಗಸ್ಟ್ 27 ರಂದು ನಗರದ ಕಾರ್ಮಿಕ ವರ್ಗದಲ್ಲಿ ಸಡಗರ, ಸಂಭ್ರಮ. ರಾಜ್ಯದ ಕಾರ್ಮಿಕ ವರ್ಗಕ್ಕೆ ಒಂದು ಗೌರವಯುತ ಸ್ಥಾನ ಕಲ್ಪಿಸಲು ಶ್ರಮಿಸಿದ, ಹಾಗೂ ನಿರಂತರವಾಗಿ ಶೋಷಣೆಗೊಳಗಾದ ಶ್ರಮಿಕ ವರ್ಗಕ್ಕಾಗಿ ತಮ್ಮ ಜೀವನವನ್ನು ಮುಡುಪಿಟ್ಟ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಕಾರ್ಮಿಕರ ನೇತಾರ ಕಾಮ್ರೇಡ್ ಎಸ್.ಸೂರ್ಯ ನಾರಾಯಣ ರಾವ್ ಆಗಸ್ಟ್ 24 ರಂದು 75ನೇ ಸಂವತ್ಸರಕ್ಕೆ ಅಡಿಯಿಟ್ಟ ಸಂದರ್ಭದಲ್ಲಿ ಮೈಕೋ ಕಾರ್ಮಿಕರು ಪುರಭವನದಲ್ಲಿ ತಮ್ಮ ನೇತಾರನಿಗೆ ಅಭಿನಂದನಾ ಸಮಾರಂಭ ಏರ್ಪಡಿಸಿದ್ದರು.

ಕಾರ್ಮಿಕ ವರ್ಗದಲ್ಲಿ ಹೋರಾಟ ಮನೋಭಾವ ಕುಂಠಿತಗೊಂಡಿರುವುದಕ್ಕೆ ಆತಂಕ ವ್ಯಕ್ತಪಡಿಸಿದ ವಿಧಾನ ಸಭಾಧ್ಯಕ್ಷ ರಮೇಶ್ ಕುಮಾರ್, ಇಂದಿನ ಕಳಪೆ ಜೀವನ, ಮಾನಸಿಕ ತೊಳಲಾಟ, ಸಿದ್ಧಾಂತ ರಹಿತ ಹೊಂದಾಣಿಕೆ ನಡುವೆ ತಮ್ಮ ಇಡೀ ಜೀವನವನ್ನು ತುಳಿತಕ್ಕೊಳಗಾದ ಹಾಗೂ ಕೆಳಸ್ತರದ ವರ್ಗಗಳ ಏಳ್ಗೆಗಾಗಿ ಮುಡಿಪಿಟ್ಟು ಶ್ರಮಿಸುತ್ತಿರುವ ಸೂರಿಯವರನ್ನು ಅಭಿನಂದಿಸಿದರು.

ಇಂದು ತಮ್ಮ ಸ್ವಂತ ಏಳ್ಗೆಗಾಗಿ ಹೋರಾಟಗಳನ್ನು ಹುಟ್ಟಿಹಾಕಿಕೊಳ್ಳುವವರ ಮಧ್ಯೆ ತಾವು ನಂಬಿದ ಸಮಾಜವಾದದ ಸಿದ್ಧಾಂತಕ್ಕಾಗಿ, ರಾಜ್ಯದ ಅಸಂಖ್ಯಾತ ಕಾರ್ಮಿಕ ವರ್ಗದ ಸಂಕಷ್ಟಗಳ ಪರಿಹಾರಕ್ಕಾಗಿ ಸದಾ ಹೋರಾಟ ನಡೆಸಿದವರು ಸೂರಿ ಎಂದು ರಮೇಶ್ ಕುಮಾರ್ ಪ್ರಶಂಸಿಸಿದರು.

ಇಂದಿನ 25-30 ರ ನೀತಿಗೆಟ್ಟ, ಭ್ರಷ್ಟ, ಅಪ್ರಾಮಾಣಿಕರಿಗಿಂತಲೂ ಇಂದಿಗೂ ನೀವೇ ಯುವಕರು ಎಂದ ವಿಧಾನ ಸಭಾಧ್ಯಕ್ಷರು ಇಲ್ಲಿಂದ ಹೊರಹೋದ ಸಾಮ್ರಾಜ್ಯ ಶಾಹಿಗಳು ಬಹುರಾಷ್ಟ್ರೀಯ ಕಂಪನಿಗಳ ಮೂಲಕ ಮತ್ತೆ ಮರಳುತ್ತಿರುವುದಕ್ಕೆ ತೀವ್ರ ಆತಂಕ ವ್ಯಕ್ತಪಡಿಸಿದರು. ತಮ್ಮ ಮುಂದಿನ ದಾರಿ ಮಸುಕಾಗಿದೆ. ನಿಮ್ಮ ಅನುಭವ ಮತ್ತು ದೃಢತೆ ಜೊತೆಗೆ ಮಾರ್ಗದರ್ಶನ ನೀಡಿ ಎಂದರು.

ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಬೆಂಗಳೂರಿನ ಮಾಜಿ ಮೇಯರ್ ಜೆ.ಲಿಂಗಯ್ಯ ಮಾತನಾಡಿ ಕೂಲಿಕಾರರು ಎಂದೇ ಕರೆಯಲ್ಪಡುತ್ತಿದ್ದ ಕಾರ್ಮಿಕ ವರ್ಗಕ್ಕೆ ಒಂದು ಗೌರವಯುತ ಸ್ಥಾನ ಕಲ್ಪಿಸಿದ ಕಾರ್ಮಿಕ ಮುಖಂಡರಲ್ಲಿ ಸೂರ್ಯನಾರಾಯಣ ರಾವ್ ಒಬ್ಬ ಪ್ರಮುಖರೆಂದರು. ಸ್ವಾತಂತ್ರ್ಯ ನಂತರ ಅಧಿಕಾರಕ್ಕೆ ಎಲ್ಲರು ಆಸೆಪಟ್ಟರೆ ಸೂರಿ ಹಳೇ ಮೈಸೂರು ಪ್ರಾಂತ್ಯದಲ್ಲಿ ಕಾರ್ಮಿಕರ ಸಂಕಷ್ಟಗಳ ಪರಿಹಾರಕ್ಕಾಗಿ ಮತ್ತೆ ಹೋರಾಟ ಪ್ರಾರಂಭಿಸಿದರೆಂದು ಅಭಿನಂದಿಸಿದರು.

ಸ್ವಾತಂತ್ರ್ಯಾನಂತರದ ಕರ್ನಾಟಕದಲ್ಲಿ ನಡೆದ ಎಲ್ಲಾ ಚಳುವಳಿಗಳಲ್ಲಿಯೂ ಸೂರಿ ಪಾಲ್ಗೊಂಡು ಮಾರ್ಗದರ್ಶನ ನೀಡಿದ್ದಾರೆಂದ ಶಾಸಕರಾದ ಜಿ.ವಿ.ಶ್ರೀರಾಮ ರೆಡ್ಡಿ ಕೇವಲ ಕಾರ್ಮಿಕರ ಪರವಾಗಿಯಲ್ಲದೆ ರೈತ, ವಿದ್ಯಾರ್ಥಿ-ಯುವಜನತೆ, ಮಹಿಳಾ ಚಳುವಳಿಗೂ ಮಾರ್ಗದರ್ಶನ ನೀಡಿ ಅವರಲ್ಲಿ ಪ್ರತಿಭಟನೆಯ ಮನೋಭಾವ ಜೀವಂತವಾಗಿರಲು ಸಹಕರಿಸಿದ್ದಾರೆಂದು ಅಭಿನಂದಿಸಿದರು.

ಸೂರಿಯವರ ಚಳುವಳಿಯ ಬದುಕಿನ ಹಿನ್ನೋಟ ಪರಿಚಯಿಸಿದ ಏಐಟಿಯುಸಿ ಮುಖಂಡರಾದ ಎಂ.ಸಿ.ನರಸಿಂಹನ್ ಕಾರ್ಮಿಕ ವರ್ಗದಲ್ಲಿ ಮಾತ್ರ ಇಂದಿಗೂ ನಿಷ್ಠೆ, ಶ್ರದ್ಧೆ, ಪ್ರಾಮಾಣಿಕತೆ ಇದ್ದು ಅದಕ್ಕಾಗಿಯೇ ತಾವು ನಂಬಿದ ಸಿದ್ಧಾಂತಕ್ಕಾಗಿ 75ನೇ ವಯಸ್ಸಿನಲ್ಲಿಯೂ ಸೂರಿ ಕಾರ್ಮಿಕರ ಮಧ್ಯೆ ಸಕ್ರಿಯರಾಗಿ ದುಡಿಯುತ್ತಿದ್ದಾರೆಂದ ಅವರು ಸಿಪಿಐ ಮತ್ತು ಸಿಪಿಐ(ಎಂ)ಗಳು ಒಗ್ಗೂಡಿ ಕಾರ್ಮಿಕರ ಐಕ್ಯತೆ ಎತ್ತಿ ಹಿಡಿಯುವುದರ ಅವಶ್ಯಕತೆ ಇದೆಯೆಂದರು.

ಸಮಾಜವಾದಿ ಸಿದ್ಧಾಂತದ ಪಾಠಶಾಲೆಗಳಾಗಿ ಕಾರ್ಮಿಕ ಸಂಘಟನೆಗಳು ಕೆಲಸ ಮಾಡಬೇಕಾಗಿದೆ ಎಂದ ಡಾ. ಜಿ.ರಾಮಕೃಷ್ಣ ಅಧ್ಯಯನ, ಚಿಂತನೆ, ಕ್ರಿಯೆ ಮತ್ತು ಸಂಘಟನೆಗಳ ಜೊತೆ ನೇರ ಮಾರ್ಗದರ್ಶನ ಮತ್ತು ದಿಟ್ಟತನವೇ ಇಂದಿಗೂ ಕಾರ್ಮಿಕರ ಮಧ್ಯೆ ಸೂರಿಯ ಜನಪ್ರಿಯತೆಗೆ ಕಾರಣವೆಂದರು.

ಸಂಕಷ್ಟಕ್ಕೊಳಗಾದವರಿಗೆ ಧೈರ್ಯ ತುಂಬುವುದರ ಮೂಲಕ ಅವರನ್ನು ಸಂಘಟಿಸುವಲ್ಲಿನ ಅವರ ಪಾತ್ರವನ್ನು ವಿಜೆಕೆನಾಯರ್ ಶ್ಲಾಘಿಸಿದರು.

ಸೂರಿ ಒಬ್ಬ ವ್ಯಕ್ತಿಯಲ್ಲ, ಒಂದು ಸಂಸ್ಥೆ. ಅವರ ವಿದ್ಯಾರ್ಥಿ ಜೀವನದಲ್ಲಿ ಸ್ವಾತಂತ್ರ್ಯಕ್ಕಾಗಿ ಕ್ವಿಟ್ ಇಂಡಿಯಾ ಚಳುವಳಿಯ ಮುಖಾಂತರ ದೇಶಕ್ಕಾಗಿ ಸಮರ್ಪಿಸಿಕೊಂಡರು. ಪದವಿ, ಅಧಿಕಾರಕ್ಕಾಗಿ ಎಂದೂ ಅಂಗಲಾಚದೆ ಸಾಮಾಜಿಕ ಚಿಂತನೆ, ರಾಜಕೀಯ ಸಿದ್ಧಾಂತಕ್ಕಾಗಿ ಮೀಸಲಾದ ವ್ಯಕ್ತಿ. ಇಂದೂ ಸೂರಿ 'ಸ್ಫೂರ್ತಿಪುರುಷ' ಎಂದು ಪ್ರಾಸ್ತವಿಕ ಭಾಷಣದಲ್ಲಿ ಬಣ್ಣಿಸಿದ ನಾಗಮೋಹನ ದಾಸ್, ಅವರ ಮಾರ್ಗದರ್ಶನ ಪಡೆದು ಹತ್ತಾರು ಸೂರಿಗಳು ಕಾರ್ಮಿಕರ ಮಧ್ಯೆ ಹುಟ್ಟಿ ಬರಲಿ ಎಂದರು.

ಕರ್ನಾಟಕದಲ್ಲಿ ಪ್ರಜಾಪ್ರಭುತ್ವ ಬೆಳವಣಿಗೆಯ ಚಳುವಳಿ ಹಾಗೂ ಇನ್ನೂ ಸಂಕಷ್ಟದಲ್ಲಿರುವ ಅಸಂಖ್ಯಾತ ಕಾರ್ಮಿಕರ ಪರವಾಗಿ ಹೋರಾಡುವುದರ ಮುಖಾಂತರ ತನ್ನ ಜೀವನದ ಇನ್ನುಳಿದ ಹಾದಿಯನ್ನು ಸವೆಸುವುದಾಗಿ ಅಭಿನಂದನೆ ಸ್ವೀಕರಿಸಿ ಸೂರಿ ಮಾತನಾಡಿದರು.

ಜಾತಿ, ಧರ್ಮ, ಸ್ವಜನಪಕ್ಷಪಾತ ಬೇರೂರಿರುವ ಸಂದರ್ಭದಲ್ಲಿ ನಮ್ಮ ಮುಂದಿನ ದಾರಿ ಸಮಾಜವಾದವೇ ಆಗಿದೆ ಎಂದ ಸ್ವಾತಂತ್ರ್ಯಹೋರಾಟಗಾರರೂ ಆದ ಸೂರಿ ಸ್ವಾತಂತ್ರ್ಯ ಸ್ವರ್ಣ ಜಯಂತಿ ಸಂದರ್ಭದಲ್ಲಿ ಕೋಮುವಾದಿಗಳು ದೇಶದ ಅಧಿಕಾರ ಚುಕ್ಕಾಣಿ ಹಿಡಿದಿರುವುದಕ್ಕೆ ತೀವ್ರ ಆತಂಕ ವ್ಯಕ್ತಪಡಿಸಿದರು. ಶೋಷಣೆ ರಹಿತ ಸಮಾಜ ಕಾರ್ಮಿಕ ವರ್ಗದಿಂದಲೇ ಸಾಧ್ಯವೆಂದು ತಮ್ಮ ದೃಢತೆ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಪಿ.ರಾಮಚಂದ್ರ ರಾವ್ ಈ ಸಮಾರಂಭ ಕೇವಲ ಹುಟ್ಟುಹಬ್ಬವಲ್ಲ, ಇದಕ್ಕೆ ರಾಜಕೀಯ, ಸಾಮಾಜಿಕ ಆಯಾಮವಿದೆ, ಇದು ಕೇವಲ ಸೂರಿಯವರಿಗೆ ಮಾತ್ರವಲ್ಲ ಕರ್ನಾಟಕದ ಕಾರ್ಮಿಕ ಚಳುವಳಿಗೆ ನೀಡುತ್ತಿರುವ ಅಭಿನಂದನಾ ಸಮಾರಂಭವೆಂದರು.

ಕಿಕ್ಕಿರಿದಿದ್ದ ಸಮಾರಂಭದಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳ ನೂರಾರು ಮುಖಂಡರು ಪುಷ್ಪಹಾರದ ಮುಖಾಂತರ ಕಾರ್ಮಿಕ ಮುಖಂಡನಿಗೆ ಅಭಿನಂದಿಸಿದರು. ವೇದಿಕೆಯಲ್ಲಿ ಲೀಲಾ ಸೂರ್ಯ ನಾರಾಯಣರಾವ್ ಉಪಸ್ಥಿತರಿದ್ದರು. ರಾಜಗೋಪಾಲ್ ತಂಡದವರಿಂದ ಸಿತಾರ್ ವಾದನ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ತಿರುನಾವಕ್ಕರಸು ಕಾರ್ಯಕ್ರಮ ನಿರೂಪಿಸಿದರೆ ಟಿ.ಶಿವಶಂಕರ್ ಸ್ವಾಗತಿಸಿ ವಂದಿಸಿದರು.

ರಕ್ತದಾನ ಶಿಬಿರ: ಇದೇ ಸಂದರ್ಭದಲ್ಲಿ ನೂರಾರು ಕಾರ್ಮಿಕರು ರಕ್ತದಾನ ಮಾಡಿ ನೂರಾರು ರೋಗಿಗಳಿಗೆ ನೆರವಾದರು.

ವರದಿ; **ಎಂ.ಜಯರಾಮು**

ಉಡುಪಿಯಲ್ಲಿ ತರಬೇತಿ ಶಿಬಿರ

ಸಿಪಿಐ(ಎಂ) ಕಾರ್ಯಕರ್ತರಿಗೆ ಉಡುಪಿಯಲ್ಲಿ ಆಗಸ್ಟ್ 1 ಮತ್ತು 2 ರಂದು ಎರಡು ದಿನಗಳ ತರಬೇತಿ ಶಿಬಿರ ನಡೆಯಿತು. ತರಗತಿಗೆ ವಿಷಯಗಳಾಗಿ , 1. ಇಂದಿನ ರಾಜಕೀಯ ಪರಿಸ್ಥಿತಿ ಮತ್ತು ಪಕ್ಷದ ಕಾರ್ಯಕ್ರಮ, 2. ಕಮ್ಯುನಿಸ್ಟ್ ಪ್ರಣಾಳಿಕೆ ಅಂದು-ಇಂದು, 3. ಫ್ಯಾಸಿಸಂ, ಕೋಮುವಾದ, ಪ್ರಜಾಪ್ರಭುತ್ವ ಚಳವಳಿ, 4. ಪಕ್ಷದ ಶಾಖೆಗಳು, ಸಮಿತಿಗಳು ಹೇಗೆ ಕೆಲಸ ಮಾಡಬೇಕು, 5. ಸಾಮೂಹಿಕ ಸಂಘಟನೆಗಳಲ್ಲಿ ಪಕ್ಷ ಕಟ್ಟುವುದು ಈ ವಿಷಯಗಳ ಮೇಲೆ ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಕಾಂ. ಸಿ.ನಂಜುಂಡಪ್ಪ, ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಕೆ.ಆರ್.ಶ್ರೀಯಾನ್, ದ.ಕ.ಜಿಲ್ಲಾ ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾಂ. ಬಿ.ಮಾಧವ ಇವರು ತರಗತಿಗಳನ್ನು ನಡೆಸಿದರು. ಉಡುಪಿ ತಾಲೂಕಿನ 60 ಮಂದಿ ಪಕ್ಷದ ಮುಖ್ಯ ಕಾರ್ಯಕರ್ತರು ಈ ಎರಡು ದಿನಗಳ ತರಗತಿಯಲ್ಲಿ ಪಾಲ್ಗೊಂಡು ಚರ್ಚೆಯಲ್ಲಿ ಭಾಗವಹಿಸಿದರು.

ಈ ತರಗತಿಯಲ್ಲಿ ಭಾಗವಹಿಸಿದ ಎಲ್ಲಾ ಕಾರ್ಯಕರ್ತರಿಗೆ ಮತ್ತು ತರಗತಿಯನ್ನು ನಡೆಸಿದ ಪಕ್ಷದ ಮುಂದಾಳುಗಳಿಗೆ ಸಿಪಿಐ(ಎಂ) ಉಡುಪಿ ತಾಲೂಕು ಸಮಿತಿ ಕಾರ್ಯದರ್ಶಿ ಕಾ. ಪಿ.ವಿಶ್ವನಾಥ ರೈ ವಂದನಾರ್ಪಣೆ ಸಲ್ಲಿಸಿದರು.

ಮಂತ್ರಿಗಳ ಜನವಿರೋಧಿ ನಿಲುವಿಗೆ ಪ್ರತಿಭಟನೆ

'ಗ್ರಾಮೀಣ ಶಾಲೆಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕುಂಠಿತವಾಗಿದೆ. ಕಮ್ಮಿ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಮುಚ್ಚಲು ಸರಕಾರ ತೀರ್ಮಾನಿಸಿದೆ' ಎಂದು ಮಾನ್ಯ ಮಂತ್ರಿಗಳಾದ ಶ್ರೀ ಎಂ.ಸಿ.ನಾಣಯ್ಯ ಹೇಳಿರುವುದು ಜನವಿರೋಧಿ ನೀತಿ ಎಂದು ಸಿಪಿಐ (ಎಂ) ವಿರಾಜಪೇಟೆ ಶಾಖೆ ಖಂಡಿಸಿದೆ.

ಸರಕಾರಿ ಶಾಲೆಗಳಲ್ಲಿ ಇಂದು ಕನಿಷ್ಟ ಸೌಕರ್ಯಗಳು ಇಲ್ಲ. ಅಧ್ಯಾಪಕರುಗಳು ಸರಿಯಾಗಿಲ್ಲ. ಇರುವಲ್ಲಿ ಸರಿಯಾಗಿ ಪಾಠ ಮಾಡುತ್ತಿಲ್ಲ. ಈ ಕೊರತೆಗಳನ್ನು ನೀಗಿಸಲು ಸರಕಾರ ಯಾವ ಕ್ರಮವನ್ನೂ ಕೈಗೊಳ್ಳುತ್ತಿಲ್ಲ. ಇದರಿಂದ ಬಡ, ಮಧ್ಯಮ ವಿಭಾಗಗಳ ತಂದೆ ತಾಯಿಯರು ಅನಿವಾರ್ಯವಾಗಿ ತಮ್ಮ ಇಚ್ಛೆಗೆ ವಿರೋಧವಾಗಿ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವ್ಯಾಪಾರಿ ಮಳಿಗೆಗಳಾಗಿರುವ ಖಾಸಗಿ ಶಾಲೆಗಳಿಗೆ ಶರಣಾಗಬೇಕಾಗಿ ಬಂದಿದೆ.

ಸರಕಾರಿ ಶಾಲೆಗಳಲ್ಲಿರುವ ಕೊರತೆಗಳನ್ನು ನೀಗಿಸಿ ಉನ್ನತಮಟ್ಟದ ವಿದ್ಯಾಭ್ಯಾಸ ಕಡಿಮೆ ದರದಲ್ಲಿ ವಿದ್ಯಾರ್ಥಿಗಳಿಗೆ ಸಿಗುವಂತೆ ಮಾಡುವುದು ಸರಕಾರದ ಕರ್ತವ್ಯವಾಗಿದೆ.

ಈ ತಮ್ಮ ಕರ್ತವ್ಯದತ್ತ ಸ್ವವಿಮರ್ಶಾತ್ಮಕವಾಗಿ ಚಿಂತಿಸಿ ಕೊರತೆಗಳನ್ನು ನೀಗಿಸಿ ಬಡ-ಮಧ್ಯಮ ವಿಭಾಗಗಳ ವಿದ್ಯಾರ್ಥಿಗಳಿಗೂ ವಿದ್ಯಾಭ್ಯಾಸ ಸಿಗುವಂತೆ ಅವರ ಪೂರ್ಣ ವಿಕಾಸಕ್ಕೆ ಸಹಕಾರಿಯಾದ ರೀತಿಯಲ್ಲಿ ಶಾಲೆಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ ಬದಲಾಗಿ ಆ ಶಾಲೆಗಳನ್ನು ಮುಚ್ಚುವದಾಗಿ ಸರಕಾರದ ವಕ್ತಾರರಾಗಿ ಮಾನ್ಯ ಮಂತ್ರಿಗಳು ಹೇಳಿರುವುದು ಅವರ ಸರಕಾರದ ಜನದ್ರೋಹಿ ನಿಲುವಿಗೆ ಸಾಕ್ಷಿಯಾಗಿದೆ ಎಂದು ಶಾಖೆ ಖಂಡಿಸಿದೆ.

ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು, ವಿದ್ಯಾರ್ಥಿಗಳನ್ನು ಖಾಸಗಿ ಶಾಲೆಗಳತ್ತ ದೂಡಿ, ಖಾಸಗಿ ವ್ಯಾಪಾರಿಗಳ ಕೈಯಲ್ಲಿ ವಿದ್ಯಾರ್ಥಿಗಳನ್ನು ಬಲಿಪಶುಗಳನ್ನಾಗಿ ಮಾಡಲು ತನ್ಮೂಲಕ ವಿದ್ಯಾಭ್ಯಾಸ ಹಣವಂತರ ಮಕ್ಕಳಿಗಷ್ಟೆ ಮೀಸಲಾಗುವಂತೆ ಮಾಡಲಾಗುತ್ತಿದೆ ಎಂದು ಅದು ಆಪಾದಿಸಿದೆ.

ಬೆಂಗಳೂರಿನಲ್ಲಿ ಡಿವೈಎಫ್ಐನಿಂದ ಸ್ವಾತಂತ್ರ್ಯ ಸಂರಕ್ಷಣಾ ದಿನಾಚರಣೆ

ಬೆಂಗಳೂರು ಜಿಲ್ಲೆಯ ಅನೇಕ ಕಡೆಗಳಲ್ಲಿ ಡಿವೈಎಫ್ಐ ಸ್ವಾತಂತ್ರ್ಯ ದಿನದ 51ನೇ ವಾರ್ಷಿಕೋತ್ಸವವನ್ನು ವೈವಿಧ್ಯಮಯವಾಗಿ ಆಚರಿಸಿದೆ. ಶ್ರೀರಾಮಪುರದ ಲಕ್ಷ್ಮಿ ನಾರಾಯಣಪುರ ಚೌಕದಲ್ಲಿ ಉಚಿತವಾಗಿ ಮಿಂಟೋ ಆಸ್ಪತ್ರೆ ತಜ್ಞ ವೈದ್ಯರಿಂದ ನೇತ್ರ ಪರೀಕ್ಷೆ ಮತ್ತು ನೇತ್ರದಾನ ನಡೆಸಲಾಯಿತು. ಸುಮಾರು 50 ಜನ ಮಹಿಳೆಯರು ನೇತ್ರದಾನ ಮಾಡಿದ್ದಾರೆ. ಈ ಸಮಾರಂಭ ದಲ್ಲಿ ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್ ಭಾಗವಹಿಸಿ ಮಾತನಾಡಿದರು. ಖ್ಯಾತ ವಕೀಲರಾದ ವೆಂಕಟೇಶಗೌಡರು ಉದ್ಘಾಟನೆ ನೆರವೇರಿಸಿದರು. ಅಧ್ಯಕ್ಷತೆಯನ್ನು ಡಿವೈಎಫ್ಐ ಜಿಲ್ಲಾ ಅಧ್ಯಕ್ಷ ಗೋಪಾಲಕೃಷ್ಣ ವಹಿಸಿದ್ದರು. ತಜ್ಞ ವೈದ್ಯರುಗಳಾದ ಡಾ. ನಾಡಗೌಡ, ಡಾ. ಪರಮೇಶ್ವರ ಮಾತನಾಡಿದರು. ಧ್ವಜಾರೋಹಣವನ್ನು ಕಾಂ|| ಪಿ.ಕೆ.ಸುಬ್ರಮಣಿ(ಸಿಐಟಿಯು ಮುಖಂಡರು) ನೆರವೇರಿಸಿದರು. ಸಂಜೆ ಶಾಲಾ ಮಕ್ಕಳಿಂದ ನೃತ್ಯ ಪ್ರದರ್ಶನ ಮತ್ತು ಹಿರೋಶಿಮಾ - ನಾಗಸಾಕಿ ಬಗ್ಗೆ 'ಸಾಕ್ಷ್ಯ ಚಿತ್ರ' ಪ್ರದರ್ಶನ ಏರ್ಪಡಿಸಿತ್ತು. ಬಿಜಿವಿಎಸ್‌ನ ಬಸವರಾಜ್ ಈ ಕಾರ್ಯಕ್ರಮ ನಡೆಸಿಕೊಟ್ಟರು. ನಿರೂಪಣೆಯನ್ನು ವಿಜಯ್‌ಕುಮಾರ್ (ಎಲ್ಐಸಿ) ನಡೆಸಿದರು. ಘಟಕದ ಅಧ್ಯಕ್ಷ ಗೋಪಾಲ ಸ್ವಾಗತಿಸಿ, ಕಾರ್ಯದರ್ಶಿ ರವಿಕುಮಾರ್ ವಂದಿಸಿದರು.

ದೇವರಚಿಕ್ಕನಹಳ್ಳಿಯಲ್ಲಿ ಧ್ವಜಾರೋಹಣ, ಸಿ.ಬಿ.ಗೇಟ್‌ನಲ್ಲಿ ಮಕ್ಕಳಿಗೆ ಕ್ರೀಡೆ, ತಿಲಕನಗರದಲ್ಲಿ ನಿಧಾನ ಸೈಕಲ್ ಸ್ಪರ್ಧೆ, ಶಾಲಾ ಮಕ್ಕಳಿಗೆ 'ಡ್ರಾಯಿಂಗ್' ಪಂದ್ಯಾವಳಿ, ಕ್ರಿಕೆಟ್, ಬಾಲಾಜಿನಗರದಲ್ಲಿ ಮಡಿಕೆ ಒಡೆಯುವ ಕಾರ್ಯಕ್ರಮ, ಕಬ್ಬಡ್ಡಿ, ಕಲಾಸಿಪಾಳ್ಯಂ- ಕೇರಂ ಸ್ಪರ್ಧೆಗಳು ನಡೆದವು. ಈ ಕಾರ್ಯಕ್ರಮಗಳಲ್ಲಿ ಡಿವೈಎಫ್ಐನ ಜಿಲ್ಲಾ ಕಾರ್ಯದರ್ಶಿ ಲಕ್ಷ್ಮಣ್ ಕುಮಾರ್, ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಪ್ರಕಾಶ್.ಕೆ, ಡಿವೈಎಫ್ಐ ಜಿಲ್ಲಾ ಸಮಿತಿ ಸದಸ್ಯ ಕಾ. ರಾಮಕೃಷ್ಣ, ಉಪಾಧ್ಯಕ್ಷರಾದ ರವಿಚಂದ್ರನ್ ಭಾಗವಹಿಸಿ ಮಾತನಾಡಿದರು.

ಅಗ್ರಹಾರ ದಾಸರಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಚರ್ಚಾಸ್ಪರ್ಧೆ ನಡೆಸಲಾಯಿತು. ಈ ಅಂತರಶಾಲಾ ಮಕ್ಕಳ ಸ್ಪರ್ಧೆಯಲ್ಲಿ ವಿಜ್ಞಾನದಿಂದ ಮನುಕುಲಕ್ಕೆ ಹಾನಿಕಾರಕವೇ? ಎಂಬುದು ವಿಷಯವಾಗಿತ್ತು. ಸ್ವಾತಂತ್ರ್ಯ ಯೋಧರ ಬಗ್ಗೆ ಭಾಷಣ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಜನಪದ ಗೀತೆಗಳ ಸ್ಪರ್ಧೆ ನಡೆಯಿತು. ಈ ಮಕ್ಕಳಿಗೆ ಆಗಸ್ಟ್ 15 ರಂದು ನಡೆದ ಸಮಾರಂಭದಲ್ಲಿ ಡಿವೈಎಫ್ಐ ಅಧ್ಯಕ್ಷರಾದ ಗೋಪಾಲಕೃಷ್ಣ, ಬಾಲಕೃಷ್ಣ ಶೆಟ್ಟಿಯವರು ಭಾಗವಹಿಸಿ ಬಹುಮಾನ ನೀಡಿದರು.

ಹಾರೋಹಳ್ಳಿ: ಹೆಚ್.ಎಸ್. ಮಲ್ಲೇಶ್ ಅಧ್ಯಕ್ಷರಾಗಿರುವ ಹಾಗೂ ಕನಕರಾಜ್ ಕಾರ್ಯದರ್ಶಿಯಾಗಿರುವ ಹೊಸದಾಗಿ ಆರಂಭಗೊಂಡ ಡಿವೈಎಫ್ಐನ ಹಾರೋಹಳ್ಳಿ ಘಟಕ ಏರ್ಪಡಿಸಿದ್ದ ಸ್ವಾತಂತ್ರ್ಯ ದಿನಾಚರಣೆಯ ಸಮಾರಂಭದಲ್ಲಿ ಬಹುಮಾನ ವಿತರಣೆ, ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ದೇಶವನ್ನು ಬಿಕ್ಕಟ್ಟಿನ ಅಂಚಿಗೆ ತಳ್ಳಿರುವವರು...

ಸ್ವಾತಂತ್ರ್ಯದ ಸ್ವರ್ಣಜಯಂತಿ ಆಚರಣೆ ಮುಕ್ತಾಯಗೊಂಡಿದೆ. ಒಂದು ವರ್ಷದ ಹಿಂದೆ ಯಾವರೀತಿಯಲ್ಲಿ ಅದನ್ನು ಆಚರಿಸಬೇಕೆಂದು ದೇಶ ಪಣ ತೊಟ್ಟಿತ್ತೋ ಆ ರೀತಿಯಲ್ಲಿ ಅದು ಮುಕ್ತಾಯಗೊಳ್ಳಲಿಲ್ಲ. ಏಕೆ? ಈ ವರ್ಷದ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯವರ ಈ ಲೇಖನದಲ್ಲಿ ನೋಡಿ.

ಹರ್ಕಿಷನ್ ಸಿಂಗ್ ಸುರ್ಜಿತ್

'ದೇಶದಲ್ಲಿ ನಿರಾಶಾವಾದದ ಪ್ರವೃತ್ತಿಯನ್ನು ನಾನು ಕೆಲವೊಮ್ಮೆ ಕಾಣುತ್ತೇನೆ' - ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಪ್ರಧಾನಿ ಎ.ಬಿ. ವಾಜಪೇಯಿ ಹೀಗೆಂದು ಹೇಳಿದರು. ನಿಜ ಹೇಳಬೇಕೆಂದರೆ ವಾಜಪೇಯಿಯವರ ಈ ಭಾಷಣವೇ ದೇಶದ ಜನರಲ್ಲಿ ನಿರಾಶಾವಾದದ, ಅಷ್ಟೇ ಏಕೆ, ಸಿನಿಕತನದ ಭಾವನೆಯನ್ನೇ ಹುಟ್ಟು ಹಾಕಿದೆ ಎನ್ನಬೇಕು.

ಅದಕ್ಕೆ ಕಾರಣವಿದೆ. ಆ ಭಾಷಣ ಪದಗಳ ಕಂತೆಯಾಗಿತ್ತೇ ಹೊರತು ನಿರ್ದಿಷ್ಟವಾದ ಅಂಶವೇನೂ ಅದರಲ್ಲಿರಲಿಲ್ಲ. ಜನತೆಗೆ ಹುಸಿ ಸಾಂತ್ವನವಷ್ಟೇ ಅದರಲಿದ್ದುದು. ನಿಜವಾಗಿ ಬೇಕಾಗಿರುವುದು ದೃಢವಾದ ಕ್ರಮಗಳು.

ಹಾಂ ! ಅಂದ ಹಾಗೆ ಪ್ರಧಾನಿ ಆಶ್ವಾಸನೆಗಳೇನನ್ನು ಕೊಡಲಿಲ್ಲ ಎಂದೇನೂ ಇಲ್ಲ. ಅದೂ ಭಾಷಣದಲ್ಲಿತ್ತು. ಆದರೆ ಬಿ.ಜೆ.ಪಿ. ನೇತೃತ್ವದ ಸರಕಾರದ ಕಳೆದ ಐದು ತಿಂಗಳ ದಾಖಲೆಯನ್ನು ನೋಡಿದರೆ ತಾನು ಕೊಟ್ಟ ಯಾವುದೇ ಭರವಸೆಗಳನ್ನು ಗೌರವಿಸಲು ಅದು ಸಮರ್ಥ ಎಂದು ಕಾಣಿಸುವುದಿಲ್ಲ. (ರಾಜಕೀಯ ಇಚ್ಛಾಶಕ್ತಿಯೆಂಬುದೇನಾದರೂ ಸರಕಾರಕ್ಕೆ ಇದ್ದರೆ ಅದರ ಸುಳಿವನ್ನು ಅರಿಯಲು ಈ ಐದು ತಿಂಗಳು ಅಲ್ಪ ಕಾಲಾವಧಿಯೇನೂ ಅಲ್ಲ) ಅಧಿಕಾರಕ್ಕೆ ಬಂದ ದಿನದಿಂದಲೂ ಗಾದಿಯನ್ನು ಉಳಿಸಿಕೊಳ್ಳುವುದೇ ಮೊದಲ ಆದ್ಯತೆಯಾಗಿರುವ ಸರಕಾರದಿಂದ ಆಶ್ವಾಸನೆ ಈಡೇರಿಸುವ ನಿರೀಕ್ಷೆಯನ್ನು ಜನ ಮಾಡಲಾರರು ಎನ್ನುವುದೂ ಕಟು ವಾಸ್ತವ.

ಸಂಕಲ್ಪ ಹುಸಿಯಾಯಿತು

ದೇಶದ ಸ್ವಾತಂತ್ರ್ಯದ ಸ್ವರ್ಣ ಜಯಂತಿ ವರ್ಷವನ್ನು 1997 ಆಗಸ್ಟ್ 15 ರಿಂದ ಆಚರಿಸಲು ಜನರು ಹಾಗೂ ಅವರ ರಾಜಕೀಯ ಪ್ರತಿನಿಧಿಗಳು ನಿರ್ಧರಿಸಿದಾಗ ಈ ರೀತಿ ಆದೀತೆಂಬ ಕಲ್ಪನೆಯಿರಲಿಲ್ಲ. ಇದು ಮಾಮೂಲಿ ಆಚರಣೆ ಆಗಬಾರದೆಂದು ಆಗ ಸಂಕಲ್ಪ ಮಾಡಲಾಗಿತ್ತು. ಬದಲಿಗೆ ಇದನ್ನು ಆತ್ಮಾವಲೋಕನ ಹಾಗೂ ಪೂರ್ವಾವಲೋಕನಕ್ಕಾಗಿ ಬಳಸಿಕೊಳ್ಳಬೇಕು ಎಂದು ನಿರ್ಧಾರವಾಗಿತ್ತು.

ನಮ್ಮ ಸಾಧನೆಗಳು-ವೈಫಲ್ಯಗಳು, ನಮ್ಮ ಬಲ-ದೌರ್ಬಲ್ಯಗಳನ್ನು ಪರಿಶೀಲಿಸಿ ಮುಂದಿರುವ ಸವಾಲುಗಳನ್ನು ಹಾಗೂ ಅವುಗಳನ್ನು ಸಾಧಿಸುವ ಮಾರ್ಗಗಳನ್ನು ನಿರ್ಧರಿಸಲು, ಗಾಂಧೀಜಿ ದರಿದ್ರ ನಾರಾಯಣ ಎಂದು ಕರೆದ ಜನಸಾಮಾನ್ಯರಿಗೆ ಅದನ್ನು ತಲುಪಿಸುವ ಮಾರ್ಗೋಪಾಯಗಳ ಕುರಿತು ಚಿಂತಿಸಬೇಕೆಂಬುದು ಆ ನಿರ್ಧಾರದ ಸಾರವಾಗಿತ್ತು.

ಇದನ್ನು ಗಮನದಲ್ಲಿಟ್ಟುಕೊಂಡೇ ವಿಶಾಲ ತಳಹದಿಯ ರಾಷ್ಟ್ರೀಯ ಸಮಿತಿಯೊಂದನ್ನು ರಚಿಸಲಾಗಿತ್ತು. ನಮ್ಮ ಸ್ವಾತಂತ್ರ್ಯದ ಸೇನಾನಿಗಳ ತ್ಯಾಗ ಬಲಿದಾನ ಹಾಗೂ ಕಟ್ಟಕಡೆಯ ಮನುಷ್ಯನೂ ಸುಖದಿಂದ ಬಾಳಬೇಕೆಂಬ ಅವರ ಪರಿಕಲ್ಪನೆಯನ್ನು ಪ್ರತಿಬಿಂಬಿಸುವ ವಿವರವಾದ ಕಾರ್ಯಕ್ರಮವನ್ನು ಸಮಿತಿ ರೂಪಿಸಿತ್ತು. ಜನತೆಗೆ ಸಂದೇಶ ತಲುಪಿಸಲು ಲಭ್ಯವಾದ ಎಲ್ಲಾ ಮಾಧ್ಯಮಗಳನ್ನು ಬಳಸಿಕೊಳ್ಳಬೇಕೆಂದು ನಿರ್ಧರಿಸಿತ್ತು. ರಾಷ್ಟ್ರೀಯ ಪುನರ್ ನಿರ್ಮಾಣಕಾರ್ಯದಲ್ಲಿ ತತ್ಪರವಾಗುವಂತೆ ಯುವ ಜನಾಂಗಕ್ಕೆ ಸ್ಫೂರ್ತಿ ತುಂಬುವ ನಿಟ್ಟಿನಲ್ಲಿ ಅವರಿಗೆ ಸ್ವಾತಂತ್ರ್ಯದ ಸ್ವರ್ಣ ಜಯಂತಿಯ ಸಂದೇಶವನ್ನು ಸಾರಬೇಕೆಂದು ಕಳೆದ ವರ್ಷ ಆಗಸ್ಟ್ 14-15ರ ಮಧ್ಯರಾತ್ರಿ ನಡೆದ ಸಂಸತ್ತಿನ ವಿಶೇಷ ಅಧಿವೇಶನ ಸಂಕಲ್ಪ ಮಾಡಿತ್ತು.

ಆದರೆ, 17 ಪಕ್ಷಗಳ ಕೂಟದ ಊರುಗೋಲಿನಿಂದ ಭಾರತೀಯ ಜನತಾಪಕ್ಷ ಅಧಿಕಾರಕ್ಕೆ ಬಂದ ಮೇಲೆ ಅದು ಮೌನವಾಗಿ, ಆದರೆ ಅಷ್ಟೇ ಪರಿಣಾಮಕಾರಿಯಾಗಿ ಇಡೀ ಕಾರ್ಯಕ್ರಮವನ್ನು ಸಾಯಿಸಿ ಬಿಟ್ಟಿತು! ಸ್ವಾತಂತ್ರ್ಯ ಸಂಗ್ರಾಮದಿಂದಲೇ ಮಾರುದ್ದ ದೂರವುಳಿದ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್.ಎಸ್.ಎಸ್.)ದ ಬಾಲಂಗೋಚಿಯಾಗಿರುವ ಒಂದು ಪಕ್ಷದಿಂದ ಯಾರಾದರೂ ಇನ್ನೇನನ್ನು ನಿರೀಕ್ಷಿಸಬಹುದು. ಅಲ್ಲವೇ?

ಇದಕ್ಕೆ ಇನ್ನೂ ಒಂದು ಕಾರಣವಿದೆ. ಬ್ರಿಟಿಷ್ ಆಡಳಿತದ ದಿನಗಳಲ್ಲಿ ನಮ್ಮ ಜನತೆಯ ಬಹುದೊಡ್ಡ ಭಾಗ ಸ್ವಾತಂತ್ರ್ಯವೆಂದರೆ ರಾಜಕೀಯ ಮಾತ್ರವಲ್ಲ

ಜಾತ್ಯಾತೀತತೆಯ ಮೌಲ್ಯಗಳಿಗೆ ಬದ್ಧರಾಗಿರುವುದಾಗಿ ದೊಡ್ಡ ದನಿಯಲ್ಲಿ ಮಾತನಾಡಿದ ಪ್ರಧಾನಿ, ಶ್ರೀಕೃಷ್ಣ ಆಯೋಗದ ವರದಿ ಬಗ್ಗೆಯಾಗಲೀ ಮುಂಬಯಿ ಗಲಭೆಗಳ ತಪ್ಪಿತಸ್ಥರನ್ನು ಬಂಧಿಸುವ ಅನಿವಾರ್ಯತೆ ಬಗ್ಗೆಯಾಗಲೀ ಮಾತನಾಡದಿರುವುದು ಯಾಕೆಂದು ಅರ್ಥವಾಗುವಂಥದ್ದೇ.

ಸಾಮಾಜಿಕ ಹಾಗೂ ಆರ್ಥಿಕ ಸ್ವಾತಂತ್ರ್ಯ ಎಂಬ ಪರಿಕಲ್ಪನೆಯನ್ನು ಹೊಂದಿತ್ತು. ಈ ಪರಿಕಲ್ಪನೆಯನ್ನು ಎತ್ತಿತೋರಿಸಲು ಸ್ವರ್ಣಜಯಂತಿ ಸಮಾರಂಭಗಳನ್ನು ರೂಪಿಸಲಾಗಿತ್ತು. ಆದರೆ, ಶೋಷಕ ವರ್ಗಗಳ ಸೇವೆ ಮಾಡುವುದೇ ಹಾಗೂ ಭಾರತೀಯ ಜನತೆಯ ಸಾಮಾಜಿಕ ಆರ್ಥಿಕ ವಿಮೋಚನೆಗೆ ಅಡ್ಡಿ ಮಾಡುವುದೇ ಮೂಲ ಗುರಿ ಆಗಿರುವ ಬಲಪಂಥೀಯ ಪ್ರತಿಗಾಮಿ ಪಕ್ಷವೊಂದಕ್ಕೆ ಈ ಯೋಚನೆಯೇ ಅಪಥ್ಯವಾಗಿದೆ.

ಈ ವರ್ಷ ಆಗಸ್ಟ್ 15ರಂದು ನಡೆಸಲು ಉದ್ದೇಶಿಸಿದ್ದ ಸಂಸತ್ತಿನ ವಿಶೇಷ ಅಧಿವೇಶನವನ್ನು ರದ್ದು ಪಡಿಸಿದ್ದರಿಂದಲೂ ಬಿ.ಜೆ.ಪಿ.ಯ ಧೋರಣೆ ಏನೆಂಬುದು ಗೊತ್ತಾಗುತ್ತದೆ. ವಾಸ್ತವವಾಗಿ ಸಂಸತ್ ಸದಸ್ಯರು ಈ ಅಧಿವೇಶನಕ್ಕಾಗಿ ದೆಹಲಿ ತಲುಪಿದ್ದರು. ಈ ಅಧಿವೇಶನದ ಬದಲು ರಾಷ್ಟ್ರಪತಿಯವರು ಸಣ್ಣ ಸಭೆಯಲ್ಲಿ ಮಾತನಾಡುವಂಥ ಕಾರ್ಯಕ್ರಮವನ್ನು ನಡೆಸಲಾಯಿತು.

ಬಿ.ಜೆ.ಪಿ.ಯ ಈ ಧೋರಣೆಯಿಂದಾಗಿ ಜನರಲ್ಲಿ ಆತ್ಮವಿಶ್ವಾಸ ತುಂಬುವ ರಾಷ್ಟ್ರೀಯ ಸಮಿತಿಯ ಗುರಿಗೆ ದೊಡ್ಡ ಹಿನ್ನಡೆಯಾಗಿದೆ.

ಹದಗೆಡುತ್ತಿರುವ ಜನರ ಪರಿಸ್ಥಿತಿ

ಈ ನಡುವೆ, ಬಿ.ಜೆ.ಪಿ. ಪರಿಸ್ಥಿತಿ ಬೆಂಕಿಯಿಂದ ಬಾಣಲೆಗೆ ಬಿದ್ದಂತಾಗಿದೆ. ಅಧಿಕಾರಕ್ಕೆ ಬಂದಂದಿನಿಂದ ಜನತೆಯ ಪ್ರತೀಕಾರ ಮನೋಭಾವದೊಂದಿಗೆ ಅದು ಅನುಸರಿಸುತ್ತಿರುವ ತಥಾಕಥಿತ ಉದಾರೀಕರಣ ನೀತಿ ಜನರಿಗೆ ಸಂಕಷ್ಟಗಳನ್ನು ತಂದೊಡ್ಡಿದೆ. 'ನಮ್ಮ ಉದಾರೀಕರಣದ ಲಾಭವನ್ನು ಪಡೆಯಲು ಇತರರಿಗೆ ಅವಕಾಶ ನೀಡುವುದಿಲ್ಲ' ಎಂದು ಪ್ರಧಾನಿ ನೀಡಿದ ಏಕೈಕ ಆಶ್ವಾಸನೆ. ಇಲ್ಲಿ ಬಳಸಲಾದ 'ನಮ್ಮ ಉದಾರೀಕರಣ' ಪದ ವಿಶೇಷವಾಗಿ ಅರ್ಥಪೂರ್ಣವಾದದ್ದು; ಅದು ಬಿ.ಜೆ.ಪಿ.ಯ ಆಲೋಚನಾ ಲಹರಿಗೆ ಹಿಡಿದ ಕನ್ನಡಿಯಾಗಿದೆ.

ಆದರೆ 'ಅವರ' ಉದಾರೀಕರಣ ದೇಶವನ್ನು ಹಾಗೂ ಜನರನ್ನು ಎಲ್ಲಿಗೆ ಒಯ್ಯುತ್ತದೆ ಎಂಬುದು ಈಗ ರಹಸ್ಯವೇನೂ ಅಲ್ಲ. ಜೀವನಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿವೆ. ಆದರೂ ಸರಕಾರ ಕೈಕಟ್ಟಿಕೊಂಡು ಕುಳಿತಿದೆ. ಸರಕಾರದ ನಿಷ್ಕ್ರಿಯತೆಗೆ ಪ್ರಧಾನಿ ವಾಜಪೇಯಿ ತಮ್ಮ ಸ್ವಾತಂತ್ರ್ಯದ ದಿನದಲ್ಲಿ ಮುಂದೊಡ್ಡಿದ ಕಾರಣ ತೀರಾ ಹಾಸ್ಯಾಸ್ಪದವಾದುದು. ಯಾವುದೇ ಪ್ರಧಾನಿ ; ಅತ್ಯಂತ ಜನವಿರೋಧಿ ಪ್ರಧಾನಿ ಕೂಡ, ಇಂಥ ಸಬೂಬನ್ನು ಮುಂದೊಡ್ಡಿರಲಿಲ್ಲ. ಭಾಷಣದಲ್ಲಿ ವಾಜಪೇಯಿ ಹೇಳಿದ್ದಿದು...

- 'ನೀವೆಲ್ಲರೂ, ವಿಶೇಷವಾಗಿ ಸೋದರಿಯರು ಕೆಲವು ಸಾಮಗ್ರಿಗಳ ಬೆಲೆಯೇರಿಕೆಯ ನೋವನ್ನು ಅನುಭವಿಸುತ್ತಿರುವಿರೆಂದು ನನಗೆ ಗೊತ್ತು. ನಾನು ನಿಮ್ಮ ಸಮಸ್ಯೆಗಳನ್ನು ಬಲ್ಲೆ. ಇದಕ್ಕೆ ಸರಕಾರಕ್ಕಿಂತ ಪ್ರಕೃತಿಯನ್ನು ಹೆಚ್ಚಾಗಿ ದೂರಬೇಕು' (ಒತ್ತು ನಮ್ಮದು). ಆಹಾ ! ರಾಷ್ಟ್ರ ಆಳುವ ಪರಿಯೇ!!

ಅದೇದಿನ ಸಂಜೆ ಖಾಸಗೀ ಚಾನೆಲೊಂದರ ಕಾರ್ಯಕ್ರಮದಲ್ಲಿ ತಾನು ಬಿಜೆಪಿಗೆ ಮತ ನೀಡಿದೆನೆಂದ ಮಹಿಳೆಯೊಬ್ಬಳ ಪ್ರತಿಕ್ರಿಯೆ ಹೀಗಿತ್ತು - "ಫೆಬ್ರವರಿಯಲ್ಲಿ ಐದು ಕೆ.ಜಿ. ಆಲೂಗೆಡ್ಡೆಗೆ 16 ರೂ. ಕೊಟ್ಟಿದ್ದೆ. ಈಗ ಒಂದು ಕೆ.ಜಿ.ಗೆ ಅಷ್ಟು ಕೊಡಬೇಕಾಗಿದೆ"!

ಲಂಗುಲಗಾಮಿಲ್ಲದ ಬೆಲೆಯೇರಿಕೆ ಒಂದೆಡೆಯಾದರೆ ಪಡಿತರ ವ್ಯವಸ್ಥೆಯ ಪುನರುಜ್ಜೀವನ ಯೋಚನೆಯೇ ಬಿ.ಜೆ.ಪಿ. ಬಳಿ ಇಲ್ಲ. ಅದಕ್ಕೆ ಬದಲು ಸಕ್ಕರೆ ಉದ್ಯಮದ ಮೇಲಿನ ನಿಯಂತ್ರಣವನ್ನು ತೆಗೆದುಹಾಕಲು ಅದು ಮುಂದಾಗಿದೆ. ಇದರಿಂದ ಸಕ್ಕರೆ ಬಡವರು ಹಾಗೂ ಬಹುತೇಕ ಮಧ್ಯಮವರ್ಗದವರ ಕೈಗೆಟುಕದಂತಾಗುತ್ತದೆ. ಇದು ಸ್ವಾತಂತ್ರ್ಯದ ಸ್ವರ್ಣ ಜಯಂತಿಯ ಬೆನ್ನಲ್ಲಿ ಬಿ.ಜೆ.ಪಿ. ನೇತೃತ್ವದ ಸರಕಾರ ಕೊಟ್ಟ ಇನ್ನೊಂದು ಕೊಡುಗೆಯಾಗಿದೆ!

ದಿವ್ಯ ನಿರ್ಲಕ್ಷ್ಯ

ಸಂಕಷ್ಟದ ಸುಳಿಯಲ್ಲಿ ಸಿಲುಕಿರುವ ರೈತಾಪಿ ಜನತೆ ಬಗ್ಗೆಯೂ ಪ್ರಧಾನಿಯವರದು ದಿವ್ಯ ನಿರ್ಲಕ್ಷ್ಯ. ದೇಶದ ವಿವಿಧ ಭಾಗಗಳಲ್ಲಿನ ರೈತರ ಆತ್ಮಹತ್ಯೆಯನ್ನು ಪ್ರಸ್ತಾವಿಸಿದ ಪ್ರಧಾನಿ, 'ಆಹಾರ ಒದಗಿಸುವವರಿಗೆ(ರೈತರು) ದೇವರು ಹರ್ಷ ನೀಡಲಿ' ಎಂದು ಹಾರೈಸಿದರು!

ಜಾತ್ಯಾತೀತತೆಯ ಮೌಲ್ಯಗಳಿಗೆ ಬದ್ಧರಾಗಿರುವುದಾಗಿ ದೊಡ್ಡ ದನಿಯಲ್ಲಿ ಮಾತನಾಡಿದ ಪ್ರಧಾನಿ, ಶ್ರೀಕೃಷ್ಣ ಆಯೋಗದ ವರದಿ ಬಗ್ಗೆಯಾಗಲೀ ಮುಂಬಯಿ ಗಲಭೆಗಳ ತಪ್ಪಿತಸ್ಥರನ್ನು ಬಂಧಿಸುವ ಅನಿವಾರ್ಯತೆ ಬಗ್ಗೆಯಾಗಲೀ ಮಾತನಾಡದಿರುವುದು ಯಾಕೆಂದು ಅರ್ಥವಾಗುವಂಥದ್ದೇ.

ಭೂ ಸುಧಾರಣೆ ದೇಶದ ಪ್ರಗತಿಗೆ ಒಂದು ಮಹತ್ವದ ಅಂಶವಾಗಿದ್ದರೂ ವಾಜಪೇಯಿಯವರ ಲಿಖಿತ ಭಾಷಣದಲ್ಲಿ ಅದರ ಪ್ರಸ್ತಾಪವೇ ಇಲ್ಲ. ಈ ಅನಿವಾರ್ಯವಾದ ಭೂ ಸುಧಾರಣೆಗಳ ಅಂಶದ ಬಗ್ಗೆ ಆಗಸ್ಟ್ 14ರಂದು ಪ್ರಸಾರವಾದ ರಾಷ್ಟ್ರಪತಿಯವರ ಸಂದರ್ಶನ ಕಾರ್ಯಕ್ರಮದಲ್ಲಿ ಪ್ರಸ್ತಾಪವಾಗಿದೆ. ಆದರೆ ಪ್ರಧಾನಿ ಭಾಷಣದಲ್ಲಿ ಅದು ಇಲ್ಲವೇ ಇಲ್ಲ.

ದೂರದೃಷ್ಟಿ ಇಲ್ಲದ ಧೋರಣೆ


ಸ್ವಾತಂತ್ರ್ಯ ಸಿಕ್ಕಿದಂದಿನಿಂದ ದೇಶ ಮಾಡಿದ ಸಾಧನೆಗಳನ್ನೂ ಪೋಖ್ರಾನ್ -II ನಂತರ ವಿಜ್ಞಾನಿಗಳ ಸಾಧನೆಗಳನ್ನೂ ತಮ್ಮ ಭಾಷಣದಲ್ಲಿ ಪ್ರಧಾನಿ ಹೇಳಿದರು. ವಾಸ್ತವವಾಗಿ ಕಳೆದ 51 ವರ್ಷಗಳಲ್ಲಿ ಭಾರತ ಅನೇಕ ಸಾಧನೆಗಳನ್ನು ಮಾಡಿದೆ. ಅದನ್ನು ಯಾರೂ ನಿರಾಕರಿಸಲಾಗದು. ಆದರೆ ಒಂದು ಮುಖ್ಯ ಅಂಶವೆಂದರೆ, ಆಳುವ ವರ್ಗಗಳು ಅನುಸರಿಸಿದ ಗುತ್ತೇದಾರಿ ಪರ, ಭೂಮಾಲಿಕ ಪರ, ಸಾಮ್ರಾಜ್ಯಶಾಹಿ ಪರ ನೀತಿಗಳಿಂದಾಗಿ ಬಹುಸಂಖ್ಯಾತ ಜನರು ಈ ಸಾಧನೆಯ ಫಲವನ್ನು ಅನುಭವಿಸಿಲ್ಲ. ಪರ್ಯಾಯ-ಜನಪರ ನೀತಿಗಳಿದ್ದಿದ್ದರೆ ಅದು ಸಾಧ್ಯವಾಗುತ್ತಿತ್ತು.

ಉದಾಹರಣೆ, ಗ್ರಾಮೀಣ ಜನರ ಸಂಕಷ್ಟಗಳನ್ನು ಕಡಿಮೆ ಮಾಡುವಲ್ಲಿ ಭೂ ಸುಧಾರಣೆ ಅತ್ಯಂತ ಮಹತ್ವದ ಸಾಧನವೆನ್ನುವುದು ನಿರಾಕರಿಸಲಾಗದ ಸಂಗತಿ. ಬಡವರ ಖರೀದಿಸುವ ಶಕ್ತಿ ಹೆಚ್ಚಿ ತೀವ್ರಗತಿಯ ಕೈಗಾರಿಕೀಕರಣಕ್ಕೂ ಇದು ದಾರಿ ಮಾಡುತ್ತದೆ. ಆದರೆ ನಮ್ಮ ಆಳುವ ವರ್ಗಗಳು ತೀವ್ರ ಸ್ವರೂಪದ ಭೂ ಸುಧಾರಣೆಗಳಿಗೆ ಕೈಹಾಕಿಲ್ಲ. ದೇಶದ ಭವಿಷ್ಯದ ಮೇಲೆ ಅದರ ಘೋರ ಪರಿಣಾಮವನ್ನು ಕಾಣುತ್ತಿದ್ದೇವೆ.

ದೇಶದಲ್ಲಿ ಸ್ವಲ್ಪ ಮಟ್ಟಿಗಿನ ಕೈಗಾರಿಕೀಕರಣ ಆಗಿಲ್ಲ ಎಂದೇನೂ ಅಲ್ಲ. ಇದರಲ್ಲಿ ಹಿಂದಿನ ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳ ಗಣನೀಯ ಪಾತ್ರವೂ ಇದೆ. ಆದರೂ ಭೂಮಾಲಿಕರ ಮೇಲ್‌ಗೈಯಿಂದಾಗಿ ಈ ನಿಟ್ಟಿನಲ್ಲಿ ಹೆಚ್ಚಿನದನ್ನು ಸಾಧಿಸಲು ಆಗಲಿಲ್ಲ. ಅದರ ಪರಿಣಾಮದಿಂದಾಗಿ ಬಡತನ, ಹಸಿವು, ಆರೋಗ್ಯ ಸೌಲಭ್ಯಗಳ ಕೊರತೆ, ಕುಡಿಯುವ ನೀರಿನ ಅಭಾವ, ಅನಕ್ಷರತೆ, ಶಿಕ್ಷಣದ ಅಭಾವ, ಹೆಚ್ಚುತ್ತಿರುವ ನಿರುದ್ಯೋಗ ಇತ್ಯಾದಿ ಇತ್ಯಾದಿ ಅನೇಕಾನೇಕ ಸಮಸ್ಯೆಗಳು ನಮ್ಮ ಅದ್ಭುತ ಸಾಧನೆಗಳ ಹೊರತಾಗಿಯೂ ಬಗೆಹರಿಯದೆ ಉಳಿದಿವೆ.

ಭೂ ಸುಧಾರಣೆ ದೇಶದ ಪ್ರಗತಿಗೆ ಒಂದು ಮಹತ್ವದ ಅಂಶವಾಗಿದ್ದರೂ ವಾಜಪೇಯಿಯವರ ಲಿಖಿತ ಭಾಷಣದಲ್ಲಿ ಅದರ ಪ್ರಸ್ತಾವವೇ ಇಲ್ಲ. ಈ ಅನಿವಾರ್ಯವಾದ ಭೂ ಸುಧಾರಣೆಗಳ ಅಂಶದ ಬಗ್ಗೆ ಆಗಸ್ಟ್ 14ರಂದು ಪ್ರಸಾರವಾದ ರಾಷ್ಟ್ರಪತಿಯವರ ಸಂದರ್ಶನ ಕಾರ್ಯಕ್ರಮದಲ್ಲಿ ಪ್ರಸ್ತಾಪವಾಗಿದೆ. ಆದರೆ ಪ್ರಧಾನಿ ಭಾಷಣದಲ್ಲಿ ಅದು ಇಲ್ಲವೇ ಇಲ್ಲ. ದೂರದೃಷ್ಟಿ ಇಲ್ಲದ ಧೋರಣೆ ಸರಕಾರದಲ್ಲಿ ಬೇರೂರಿ ಬಿಟ್ಟಿದೆ.

ದೂರದೃಷ್ಟಿಯ ಕೊರತೆಯಿಂದಾಗಿ ಸಮಸ್ಯೆಗಳು ಉಲ್ಬಣಿಸಿವೆ. ಭ್ರಷ್ಟಾಚಾರ ವಿಚಾರದಲ್ಲೂ ಬಿ.ಜೆ.ಪಿ. ನೇತೃತ್ವದ ಸರಕಾರ ದ್ವಿಮುಖ ಧೋರಣೆಯನ್ನು ಅನುಸರಿಸುತ್ತಿದೆ. ಮಿತ್ರ ಪಕ್ಷಗಳ ಸಮಯಸಾಧಕತನದ ಒತ್ತಡಗಳು ಒಂದೆಡೆಯಾದರೆ ಸಾರ್ವಜನಿಕ ಬೊಕ್ಕಸದಿಂದ ತಮ್ಮ ಜೇಬನ್ನು ತುಂಬಿಸಿಕೊಳ್ಳುವ ಬಿ.ಜೆ.ಪಿ.ಯ



ಪ್ರಧಾನಿಯವರ ಭಾಷಣ ಹಾಗೂ ರಾಷ್ಟ್ರಪತಿ ಸಂದರ್ಶನದ ವ್ಯತ್ಯಾಸವೆಂದರೆ ಈ ಭಾಷಣ ಪೂರ್ಣ ಹತಾಶೆಯಿಂದ ಕೂಡಿತ್ತು. ಜನಸಮೂಹದಲ್ಲಿ ಯಾವುದೇ ಉತ್ಸಾಹ ತುಂಬುವಲ್ಲಿ ವಿಫಲವಾಗಿತ್ತು. ಆದರೆ, ರಾಷ್ಟ್ರಪತಿಯವರ ಸಂದರ್ಶನ, ಕೋಮುವಾದವೂ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸಲು ದೇಶದ ಜನತೆ ತಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಬಹುದು ಎಂಬ ಆಶಾಭಾವನೆಯನ್ನು ಉದ್ದೀಪಿಸಿತು.



ವಾಜಪೇಯಿ ಸರಕಾರದ ಐದು ತಿಂಗಳು

ಆಶ್ವಾಸನೆ	ನಿರ್ವಹಣೆ
1. ಮಹಿಳೆಯರಿಗೆ ಅಧಿಕಾರದ ಸಂಕಲ್ಪ	ಮಹಿಳಾ ಮೀಸಲು ಮಸೂದೆ ಮಂಡನೆ ವಿಫಲ.
2. ಉತ್ತಾರಾಂಚಲ, ವನಾಂಚಲ ಮತ್ತು ಚತ್ತೀಸ್‌ಗಢ್ ಹೊಸ ರಾಜ್ಯಗಳ ರಚನೆ ;	ಉಧಮ್ ಸಿಂಗ್ ನಗರ ವಿವಾದದಿಂದ ಉತ್ತರಾಂಚಲ ನೆನೆಗುದಿಗೆ ; ದೆಹಲಿ : ರಾಷ್ಟ್ರೀಯ ರಾಜ್ಯ ಸ್ಥಾನಮಾನ, ರಾಜಧಾನಿ ಕೇಂದ್ರದ ವ್ಯಾಪ್ತಿಯಲ್ಲಿ.
3. ಭಯದಿಂದ ಸ್ವಾತಂತ್ರ್ಯ	ಜಮ್ಮು-ಕಾಶ್ಮೀರ, ಹಿಮಾಚಲಪ್ರದೇಶಗಳಲ್ಲಿ ಹತ್ಯೆಗಳು ಗುಜರಾತಿನಲ್ಲಿ ಅಲ್ಪಸಂಖ್ಯಾತರ ಮೇಲೆ ವಿ.ಹೆಚ್.ಪಿ. ಹಲ್ಲೆಗಳು, ಮುಂಬಯಿ ದೆಹಲಿಯೆಲ್ಲಿ ಕೊಲೆಗಳ ಮುಂದುವರಿಕೆ.
4. ಭ್ರಷ್ಟಾಚಾರದಿಂದ ವಿಮುಕ್ತಿ	ಅಧಿಕಾರಿಗಳ ವರ್ಗಕ್ಕಾಗಿ ಪ್ರಧಾನಿಗೆ ಆಪ್ತರಾದ ವ್ಯಕ್ತಿಗಳಿಗೆ ಭಾರೀ ಮೊತ್ತದ ಲಂಚ ನೀಡಿಕೆ ಎಂದು ಮಿತ್ರ ಪಕ್ಷ ಅಣ್ಣಾ ಡಿ.ಎಂ.ಕೆ. ಆರೋಪ
5. ಸ್ಥಿರ, ಸಮರ್ಥ ಸರಕಾರ	ಬಿ.ಜೆ.ಪಿ. ಮತ್ತು ಮಿತ್ರಪಕ್ಷಗಳ ಮಧ್ಯೆ ದಿನ ನಿತ್ಯ ಸಂಘರ್ಷ.
6. ಹಸಿವಿನಿಂದ ಮುಕ್ತಿ	ತರಕಾರಿಗಳ ಬೆಲೆ ಗಗನಕ್ಕೆ (ಟೊಮಾಟೋ ಕೆ.ಜಿ.ಗೆ.40 ರೂ., ಈರುಳ್ಳಿ -24, ಆಲೂಗಡ್ಡೆ 16ರೂ.)

ಆರ್ಥಿಕತೆ ಸೂಚಿ : ರಫ್ತು ಕುಸಿತ ಶೇಕಡ 8(ಏಪ್ರಿಲ್-ಜೂನ್) ಹಣದುಬ್ಬರ(ಸಗಟು ದರಕ್ಕೆ) ಶೇ. 8, (ಚಿಲ್ಲರೆ ದರಕ್ಕೆ) ಶೇ. 10ಕ್ಕಿಂತ ಹೆಚ್ಚು ; ವಿದೇಶಿ ವಿನಿಮಯ ದರ ಡಾಲರಿಗೆ 43 ರೂಪಾಯಿಗಿಂತ ಹೆಚ್ಚು, ಕಳೆದ ಐದು ತಿಂಗಳಲ್ಲಿ ಸ್ಟಾಕ್ ಮಾರ್ಕೆಟ್‌ಗಳ ನಷ್ಟ 1000 ಪಾಯಿಂಟ್(ಬಿ.ಎಸ್.ಇ. ಇಂಡೆಕ್ಸ್)

ಸೌಜನ್ಯ : ದಿ ಹಿಂದೂ 23.8.98



ತೆಲುಗು ದೈನಿಕ 'ಪ್ರಜಾಶಕ್ತಿ'ಯಲ್ಲಿನ ಒಂದು ವ್ಯಂಗ್ಯ ಚಿತ್ರ

ಕೆಲವು ಉನ್ನತ ನಾಯಕರ ಹಪಾಪಿತನವೂ ಇದಕ್ಕೆ ಕಾರಣವಾಗಿದೆ. ಜಾರಿ ನಿರ್ದೇಶಕ ಎಂ.ಕೆ. ಬೇಜ್‌ಬರುವಾ ಅವರ ವರ್ಗಾವಣೆ ಪ್ರಕರಣ ಇತ್ತೀಚಿನ ಉದಾಹರಣೆ ಯಾಗಿದ್ದು ಇದು ಬಿ.ಜೆ.ಪಿ. ಕಿರೀಟಕ್ಕೆ ಸೇರಿದ ಇನ್ನೊಂದು ಗರಿಯಾಗಿದೆ!

ಐದು ತಿಂಗಳ ಅವಧಿಯಲ್ಲಿ ಛಿದ್ರಕಾರಿಗಳು ಹಾಗೂ ಭಯೋತ್ಪಾದಕ ಶಕ್ತಿಗಳ ಬೆದರಿಕೆ ಹೆಚ್ಚಿದೆ. ಅಷ್ಟೇ ಅಲ್ಲದೆ, ಸ್ವತಃ ಬಿ.ಜೆ.ಪಿ. ನಾಯಕರು ಹಾಗೂ ಕಾರ್ಯಕರ್ತರ ಅಲ್ಪಸಂಖ್ಯಾತ ವಿರೋಧಿ ಚಟುವಟಿಕೆಗಳು ದೇಶದ ಏಕತೆಗೆ ಹಾಗೂ ನಾಗರಿಕರು ಸಾಮೂಹಿಕವಾಗಿ ಬಾಳುವ ಶಾಂತಿಯುತ ವಾತಾವರಣಕ್ಕೆ ಅಪಾಯವೊಡ್ಡಿದೆ.

ಆದರೆ, ಬಿ.ಜೆ.ಪಿ. ಕತೆಯ ಅತ್ಯಂತ ದುರಂತಮಯ ಅಧ್ಯಾಯವೆಂದರೆ 'ಸಮರ್ಥ ಹಾಗೂ ಸ್ಥಿರ ಸರಕಾರದ' ಅದರ ಘೋಷಣೆ ಮಣ್ಣು ಮುಕ್ಕಿರುವುದು. ಪೂರ್ಣ ಅಸಮರ್ಥ ಹಾಗೂ ಅಸ್ಥಿರ ಸರಕಾರ ದೇಶಾದ್ಯಂತ ಅಪಹಾಸ್ಯಕ್ಕೆ ಈಡಾಗಿದೆ.

ಬಿ.ಜೆ.ಪಿ.ಯ ದೂರದೃಷ್ಟಿಯಿಲ್ಲದ ಪರಮಾಣು ನೀತಿ ಪೋಖ್ರಾನ್ ಪರೀಕ್ಷೆಗಳಲ್ಲಿ ಅನಾವರಣಗೊಂಡಿದೆ. ಅದು ರಾಜಕೀಯ ಅಸ್ಥಿರತೆಗೆ ಇನ್ನಷ್ಟು ಇಂಬು ಕೊಟ್ಟಿದೆ. ಅಂತರ್‍ರಾಷ್ಟ್ರೀಯ ರಂಗದಲ್ಲಿ ಭಾರತದ ಪ್ರತಿಷ್ಠೆಯನ್ನು ಕುಗ್ಗಿಸಿದೆ.

ಅಸಂತೃಪ್ತಿಗೆ ರಾಷ್ಟ್ರಪತಿ ದನಿ

ಇಂಥ ಸನ್ನಿವೇಶದಲ್ಲಿ ಭಾರತದ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಸರಕಾರಿ ಕೃಪಾಪೋಷಿತ ಭಾಷಣವನ್ನು ಓದದಿರಲು ನಿರ್ಧರಿಸಿದ್ದು ಒಂದು ಮಹತ್ವದ ವಿದ್ಯಮಾನ. ದಶಕಗಳಿಂದ ಅನುಸರಿಸಿಕೊಂಡು ಬರಲಾದ ಸಂಪ್ರದಾಯವನ್ನು ಮುರಿಯುವ ಈ ಅಭೂತಪೂರ್ವ ನಿರ್ಧಾರಕ್ಕೆ ಕಾರಣವೇನೇ ಇರಬಹುದು, ಈಗ ಅನುಸರಿಸಲಾಗುತ್ತಿರುವ ನೀತಿಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ರಾಷ್ಟ್ರದ ಮುಖ್ಯಸ್ಥರು ಇಷ್ಟಪಡುತ್ತಿಲ್ಲ ಎಂಬ ಭಾವನೆ ಸಾರ್ವಜನಿಕರಲ್ಲಿ ಬಂದಿದೆ. ಬಹುಶಃ ಈ ಕಾರಣಕ್ಕಾಗಿಯೇ 'ದಿ ಹಿಂದೂಸ್ತಾನ್ ಟೈಮ್ಸ್' ಆಗಸ್ಟ್ 15ರ ಸಂಚಿಕೆಯಲ್ಲಿ ಈ ಶಿರೋನಾಮೆಯನ್ನು ನೀಡಿತು - "ರಾಷ್ಟ್ರಪತಿಯಿಂದ ಬಿ.ಜೆ.ಪಿ. ಸಿದ್ಧಾಂತದ ಕಟು ಟೀಕೆ'.

ರಾಷ್ಟ್ರಪತಿಯವರ ಸಾಂಪ್ರದಾಯಕ ಭಾಷಣದ ಬದಲು ಕೆಲವು ದಿನಗಳ ಮುಂಚೆ 'ಫ್ರಂಟ್‌ಲೈನ್' ಸಂಪಾದಕ ಎನ್. ರಾಮ್ ಅವರಿಗೆ ನೀಡಿದ ಕೆ.ಆರ್. ನಾರಾಯಣನ್ ಸಂದರ್ಶನ ದೂರದರ್ಶನದಲ್ಲಿ ಪ್ರಸಾರ ಮಾಡಲಾಯಿತು. ಆಕಾಶವಾಣಿ ಯಲ್ಲಿಯೂ ಬಿತ್ತರಗೊಂಡಿತು.

ಪರಿಶಿಷ್ಟ ಜಾತಿ, ಜನಾಂಗಗಳು ಮತ್ತು ಇತರ ದುರ್ಬಲ ವರ್ಗಗಳ ಜನರ ಕಷ್ಟಕೋಟಲೆ ನಿವಾರಣೆಗೆ ಸತತ ಕ್ರಮಗಳು, ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ. 33 ಮೀಸಲಾತಿ ಮೊದಲಾದ ಅಂಶಗಳನ್ನು ರಾಷ್ಟ್ರಪತಿ ತಮ್ಮ ಸಂದರ್ಶನದಲ್ಲಿ ಪ್ರತಿಪಾದಿಸಿದ್ದರ ಜೊತೆಗೆ ಸಮಗ್ರ ಭೂ ಸುಧಾರಣೆಯ ಅವಶ್ಯಕತೆಯನ್ನು ಒತ್ತಿಹೇಳಿದ್ದು ಮಹತ್ವಪೂರ್ಣವಾಗಿದೆ.

ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ಹೇಳಿದ ರಾಷ್ಟ್ರಪತಿ ಕೆ.ಆರ್. ನಾರಾಯಣನ್, ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿ ಮತ್ತು ಹೆಚ್ಚಿನ ಸಮಾನತೆಯ ವಾತಾವರಣದಲ್ಲಿ ಮಾತ್ರವೇ ಸಂಸದೀಯ ಪ್ರಜಾಪ್ರಭುತ್ವದ ಉಳಿವು ಸಾಧ್ಯ ಎಂದು ಅಭಿಪ್ರಾಯಪಟ್ಟರು.

> **ಬಿ.ಜೆ.ಪಿ. ಕತೆಯ ಅತ್ಯಂತ ದುರಂತಮಯ ಅಧ್ಯಾಯವೆಂದರೆ 'ಸಮರ್ಥ ಹಾಗೂ ಸ್ಥಿರ ಸರಕಾರದ' ಅದರ ಘೋಷಣೆ ಮಣ್ಣು ಮುಕ್ಕಿರುವುದು. ಪೂರ್ಣ ಅಸಮರ್ಥ ಹಾಗೂ ಅಸ್ಥಿರ ಸರಕಾರ ದೇಶಾದ್ಯಂತ ಅಪಹಾಸ್ಯಕ್ಕೆ ಈಡಾಗಿದೆ.**

ಭಾರತೀಯ ಸಂವಿಧಾನದಲ್ಲಿ ಉದ್ಧರಿಸಲಾದ ಜಾತ್ಯಾತೀತತೆಯ ಆದರ್ಶದ ಬಗ್ಗೆ ರಾಷ್ಟ್ರಪತಿ ಪ್ರಸ್ತಾವಿಸಿದ್ದು ಇನ್ನೂ ಮಹತ್ವಪೂರ್ಣವಾದುದು.

ಬಾಬರಿ ಮಸೀದಿಯನ್ನು ಧ್ವಂಸ ಮಾಡಿದಾಗ, ಇದು ಮಹಾತ್ಮ ಗಾಂಧಿ ಹತ್ಯೆ ನಂತರ ಭಾರತ ಕಂಡ ಅತಿದೊಡ್ಡ ದುರಂತವಾಗಿದೆ ಎಂದು ನಾರಾಯಣನ್ ಹೇಳಿದ್ದರು. ಆಗ ಅವರು ಉಪರಾಷ್ಟ್ರಪತಿ ಆಗಿದ್ದರು. ಇದೀಗ, ಕೋಮುವಾದದ ಪಿಡುಗನ್ನು ನಿಯಂತ್ರಿಸಬಹುದು ಎಂದು ಒತ್ತು ನೀಡಿ ಹೇಳುವಾಗ ರಾಷ್ಟ್ರಪತಿಯವರಲ್ಲಿ 'ಈ ಮುಂಚಿನ (ಅಯೋಧ್ಯೆ) ದುರಂತವನ್ನು ನಾವು ನಿಯಂತ್ರಿಸಬಹುದಿತ್ತು' ಎಂಬ ಭಾವನೆ ಬಲವಾಗಿತ್ತು.

ಭಾರತೀಯ ಸಮಾಜವನ್ನು ಕೋಮುವಾದದ ನೆಲೆಯಲ್ಲಿ ತೆಗೆದುಕೊಂಡು ಹೋಗಲಾಗದು. ಹಾಗಾಗಿ ಕೋಮುವಾದದ ಮೂಲಕ ಅಣಿನೆರೆಯಿಸುವಿಕೆ ಭಾರತದಲ್ಲಿ ಯಶಸ್ವಿಯಾಗಲಾರದು ಎಂದು ಕೆ.ಆರ್. ನಾರಾಯಣ್ ಹೇಳುವಾಗ ಅವರು ಭಾರತದ ಬಹುದೊಡ್ಡ ಜನವಿಭಾಗದ ಭಾವನೆಗಳಿಗೆ ದನಿಕೊಟ್ಟಂತಿತ್ತು. ವಿದೇಶಿ ನೀತಿ ವಿಚಾರದಲ್ಲಿ ಅವರು ಜನತೆಯ ಭಾವನೆಗಳಿಗೆ ಸ್ಪಂದಿಸಿದರು.

ಬಿ.ಜೆ.ಪಿ. ನಾಯಕತ್ವದ ಸರಕಾರದ ನೀತಿಗಳು ದೇಶವನ್ನು ಎಂಥ ಪರಿಸ್ಥಿತಿಗೆ ಒಯ್ದಿದೆ ಎಂದರೆ ರಾಷ್ಟ್ರದ ಅಧಿಪತಿ ಕೂಡ, (ಸಾಂವಿಧಾನಿಕ ಔಚಿತ್ಯದ ಮಿತಿಯಲ್ಲೇ ಆದರೂ) ಆ ನೀತಿಗಳಿಂದ ದೂರವಿರಲು ಬಯಸಿದರು.

ಪ್ರಧಾನಿಯವರ ಭಾಷಣ ಹಾಗೂ ರಾಷ್ಟ್ರಪತಿ ಸಂದರ್ಶನದ ವ್ಯತ್ಯಾಸವೆಂದರೆ ಈ ಭಾಷಣ ಪೂರ್ಣ ಹತಾಶೆಯಿಂದ ಕೂಡಿತ್ತು. ಜನಸಮೂಹದಲ್ಲಿ ಯಾವುದೇ ಉತ್ಸಾಹ ತುಂಬುವಲ್ಲಿ ವಿಫಲವಾಗಿತ್ತು.

ಆದರೆ, . ರಾಷ್ಟ್ರಪತಿಯವರ ಸಂದರ್ಶನ, ಕೋಮುವಾದವೂ ಸೇರಿದಂತೆ ಹಲವು ಸಮಸ್ಯೆಗಳನ್ನು ಎದುರಿಸಲು ದೇಶದ ಜನತೆ ತಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಬಹುದು ಎಂಬ ಆಶಾಭಾವನೆಯನ್ನು ಉದ್ದೀಪಿಸಿತು.

ಹಾಗಿದ್ದರೂ ಇದು ತಂತಾನೆ ನಡೆಯಬಹುದಾದ ಪ್ರಕ್ರಿಯೆಯೇನೂ ಅಲ್ಲ. ಇದು ಸಾಧಿತವಾಗಲು ಎಡ, ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಜನಸಮೂಹವನ್ನು ಹೋರಾಟದ ಕಣಕ್ಕಿಳಿಸಲು ಬಹಳ ಶ್ರಮಪಡಬೇಕು. ಅತಿ ಮಹತ್ವದ ಈ ಕರ್ತವ್ಯ ನಿರ್ವಹಣೆಯಲ್ಲಿ ನಾವು ವಿಫಲರಾದರೆ ವರ್ಗ ಶಕ್ತಿಗಳ ಸಮತೋಲನದಲ್ಲಿ ಯಾವುದೇ ಬದಲಾವಣೆಯನ್ನು ತರಲಾಗದು. ಈ ದಿಸೆಯಲ್ಲಿ ಅತ್ಯಂತ ದೊಡ್ಡ ಜವಾಬ್ದಾರಿ ಎಡ ಪಕ್ಷಗಳ ಮೇಲಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಜನರ ಕನಸನ್ನು ಒಂದಲ್ಲ ಒಂದು ದಿನ ನನಸು ಮಾಡುವತ್ತ ಮುನ್ನಡೆಯಬೇಕು.

ಇಪ್ಪತ್ತೊಂದನೇ ಶತಮಾನ ಪರಮಾಣು ಮುಕ್ತ ಶತಮಾನವಾಗಲಿ

ಭಾರತ, ಪಾಕಿಸ್ತಾನ ಶಾಂತಿ ಕಾರ್ಯಾಚರಣೆಗೆ ಹಿರೋಷಿಮಾದ ಸಂದೇಶ


ಅಣು ಬಾಂಬ್ ಮತ್ತು ಜನಜನಕ ಬಾಂಬ್ ವಿರುದ್ಧ ವಿಶ್ವ ಸಮ್ಮೇಳನದ ಸಂಘಟನಾ ಸಮಿತಿ ಭಾರತ ಮತ್ತು ಪಾಕಿಸ್ತಾನದಲ್ಲಿನ ಅಣ್ವಸ್ತ್ರ-ವಿರೋಧಿ ಶಾಂತಿ ಕಾರ್ಯಾಚರಣೆಗಳಿಗೆ ಈ ಆಗಸ್ಟ್ 6ರಂದು ಈ ಕೆಳಗಿನ ಸಂದೇಶವನ್ನು ಕಳಿಸಿದೆ.

1998ರ ಹಿರೋಷಿಮಾ ಮತ್ತು ನಾಗಾಸಾಕಿ ದಿನಗಳ ಸಂದರ್ಭದಲ್ಲಿ ಅಣುಬಾಂಬಿನಿಂದ ನರಳಿದ ಮೊದಲ ನಗರ ಹಿರೋಷಿಮಾದಿಂದ ನಮ್ಮ ಅತ್ಯಂತ ಹಾರ್ದಿಕ ಸೌಹಾರ್ದ ಶುಭಾಶಯಗಳನ್ನು ಕಳಿಸುತ್ತಿದ್ದೇವೆ. ಭಾರತ ಉಪಖಂಡದಲ್ಲಿ ಅಪಾಯಕಾರಿ ಬೆಳವಣಿಗೆಯ ನಡುವೆ ಶಾಂತಿಗಾಗಿ, ಅಣ್ವಸ್ತ್ರಗಳ ವಿರುದ್ಧ ಹಾಗೂ ತಿಕ್ಕಾಟಗಳ ಶಾಂತಿಯುತ ಇತ್ಯರ್ಥಕ್ಕಾಗಿ ನಿಮ್ಮ ಕಾರ್ಯಾಚರಣೆಗಳು ವಿಶ್ವದಾದ್ಯಂತ ಜನಗಳ ನಡುವೆ ಆಶಾಭಾವನೆ ಮತ್ತು ಧೈರ್ಯ ತಂದಿವೆ.

ಭಾರತೀಯ ಮತ್ತು ಪಾಕಿಸ್ತಾನೀ ಸರಕಾರಗಳು ಬಿಜೆಪಿ ಪರಮಾಣು ಪರೀಕ್ಷಣೆಗಳು ವಿಶ್ವದ ಜನಗಳಲ್ಲಿ ಒಂದು ಆತಂಕಕರ ಭಾವನೆ ಮೂಡಿಸಿವೆ. ಯಾವುದೇ ದೇಶ ಯಾವುದೇ ಹಿನ್ನೆಲೆ ಯಲ್ಲಿ ಪರಮಾಣು ಅಸ್ತ್ರಗಳನ್ನು ಅಭಿವೃದ್ಧಿಪಡಿಸಿದ್ದರೂ ಅದನ್ನು ಎಂದಿಗೂ ಸಮರ್ಥಿಸಿಕೊಳ್ಳಲಾಗದು. ಆ ಕ್ಷಣದಲ್ಲಿ 2 ಲಕ್ಷ ಜನಗಳ ಪ್ರಾಣಹಾನಿ, ನಂತರ ಈಗಲೂ 3 ಲಕ್ಷ ಮಂದಿ ನರಳಾಡುತ್ತಿರು ವುದು ಅಣುಬಾಂಬಿಗೊಳಗಾದ ಹಿರೋಷಿಮಾ ಮತ್ತು ನಾಗಾಸಾಕಿಯ ವಾಸ್ತವತೆಗೆ ಕಣ್ಣುಕುಕ್ಕುವ ಒಂದು ಸಾಕ್ಷಿ. ಈ ಪ್ರಸಕ್ತ ಬೆಳವಣಿಗೆ ಕೆಲವೇ ಸೀಮಿತ ದೇಶಗಳು ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿರುವುದನ್ನು ಕಾನೂನು ಬದ್ಧ ಗೊಳಿಸುವ ವ್ಯವಸ್ಥೆಯಾಗಿ ಪರಮಾಣು ಪ್ರಸರಣ ನಿಷೇಧ ಸಂಧಿ (ಎನ್.ಪಿ.ಟಿ.) ಮೂಲಭೂತ ವೈರುಧ್ಯಗಳನ್ನು, ದಿವಾಳಿಯನ್ನು ಎದುರಿಸುತ್ತಿದೆ ಎಂಬುದನ್ನು ತೋರಿಸಿದೆ. ಬೇರೆ ದೇಶಗಳು ಪರಮಾಣು ಅಸ್ತ್ರಗಳನ್ನು ಹೊಂದಬಾರದೆಂದು ಹೇಳುವ ಪರಮಾಣು ಶಸ್ತ್ರಾಸ್ತ್ರ ಹೊಂದಿದ ದೇಶಗಳು ತಾವು ಪರಮಾಣು ಶಸ್ತ್ರಾಸ್ತ್ರಗಳನ್ನು ಕೈಬಿಡಬೇಕೆಂದು ಕೇಳುವುದು ಸಹಜ. ಈಗಿನ ಸನ್ನಿವೇಶ ವಿಶ್ವಾದ್ಯಂತ ಜನತೆ ಪರಮಾಣು ಶಸ್ತ್ರಾಸ್ತ್ರಗಳ ಸಂಪೂರ್ಣ ನಿರ್ಮೂಲನಕ್ಕಾಗಿ ಕಾರ್ಯಾ ಚರಣೆಗಿಳಿಯಬೇಕಾದ ಆಗ್ರಹವನ್ನುಂಟು ಮಾಡಿದೆ.

ಈಗ ಹಿರೋಷಿಮಾ ಮತ್ತು ನಾಗಾಸಾಕಿಯಲ್ಲಿ ಸೇರುತ್ತಿರುವ 1998ರ ಅಣು ಮತ್ತು ಹೈಡ್ರೋಜನ್ ಬಾಂಬ್‌ಗಳ ವಿರುದ್ಧ ವಿಶ್ವಸಮ್ಮೇಳನದಲ್ಲಿ ಭಾರತ ಮತ್ತು ಪಾಕಿಸ್ತಾನದ ಪರಮಾಣು-ವಿರೋಧಿ ಶಾಂತಿ ಆಂದೋಲನಗಳ ಪ್ರತಿನಿಧಿಗಳು ಸಕ್ರಿಯವಾಗಿ ಭಾಗವಹಿಸುತ್ತಿದ್ದು ಈ ಸಮ್ಮೇಳನ ಆಗಸ್ಟ್ 4ರಂದು ಒಂದು ಘೋಷಣೆಯನ್ನು ಅಂಗೀಕರಿಸಿದೆ. 21ನೇ ಶತಮಾನವನ್ನು ಪರಮಾಣು- ಮುಕ್ತ ಶತಮಾನವನ್ನಾಗಿ ಮಾಡಲು ಅದು ವಿಶ್ವಾದ್ಯಾಂತ ಕಾರ್ಯಾಚರಣೆಗೆ ಕರೆ ನೀಡಿದೆ. ಇದಕ್ಕಾಗಿ ಈ ಆಗಸ್ಟ್‌ನಿಂದ 2000ನೇ ಇಸ್ವಿಯ ಅಂತ್ಯದವರೆಗಿನ ಅವಧಿ 21ನೇ ಶತಮಾನ ಪರಮಾಣು-ಮುಕ್ತ ಶತಮಾನವಾಗಿಸಲು ಅಂತರ‍್ರಾಷ್ಟ್ರೀಯ ಜಂಟಿ ಕಾರ್ಯಾ ಚರಣೆಗಳ ಅವಧಿಯಾಗಬೇಕು ಎಂದು ನಿಗದಿ ಪಡಿಸಿದೆ. 1998ರ ಹಿರೋಷಿಮಾ ನಾಗಾಸಾಕಿ ದಿನಗಳಂದು ನಿಮ್ಮ ಕಾರ್ಯಾಚರಣೆಗಳು ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯಾಗಿ ಯಶಸ್ವಿಯಾಗುತ್ತದೆ ಎಂದು ಆಶಿಸುತ್ತೇವೆ.

ಈ ವರ್ಷದ ಆಗಸ್ಟ್ 6 ರಂದು ಹಿರೋಶಿಮಾದಲ್ಲಿ ಅಣುಬಾಂಬಿನ ವಿನಾಶದ ಸ್ಮಾರಕದಲ್ಲಿ ಸಾವಿರಾರು ಜನ ಆ ಭಯಾನಕ ಅನುಭವ ಎಂದೂ ಎಲ್ಲೂ ಮರುಕಳಿಸದಿರಲಿ ಎಂದು ಬಿಳಿ ಪಾರಿವಾಳಗಳನ್ನು ಹಾರಿಸುತ್ತಿರುವ ಒಂದು ಚಿತ್ರ



ದೇಶದೊಳಗೆ

ವಿಶ್ವ

ಕ್ರಿಕೆಟಿಗಳ ಕನಸು ಛಿದ್ರ; ಪ್ರಾಣ ಹರಣ.....

ಹೆಸರು ಕಾಜಲ್ ದೇವವರ್ಮ. ವಯಸ್ಸು ಕೇವಲ 15. ಆಕೆ ಹೊತ್ತಿದ್ದ ಕನಸು ರಾಷ್ಟ್ರಮಟ್ಟದ ಕ್ರಿಕೆಟ್ ತಾರೆ ಆಗಬೇಕೆಂದು. ವಿಶೇಷವಾಗಿ ವಿಕೆಟ್ ಕೀಪಿಂಗ್‌ನಲ್ಲಿ ಆಕೆ ಪ್ರತಿಭಾವಂತೆ ಆಗಿದ್ದಳು. ಆದರೆ..........

ಆಗಸ್ಟ್ 24 ರ ಭಾನುವಾರ ರಾತ್ರಿ.......... ತನ್ನ ಕನಸನ್ನು ಕನಸಾಗಿಯೇ ಉಳಿಸಿಕೊಂಡು ಆಕೆ ಇನ್ನಿಲ್ಲವಾದಳು. ಮತಿಹೀನ ಉಗ್ರಗಾಮಿಗಳ ಗುಂಡಿಗೆ ಆಕೆ ಬಲಿಯಾದಳು.

ಇದು ಉದಯೋನ್ಮುಖ ಕ್ರಿಕೆಟ್ ಪಟು ಕಾಜಲ್‌ಳ ದುರಂತ ಕತೆ. ತ್ರಿಪುರಾ ರಾಜಧಾನಿ ಅಗರ್ತಲಾದಿಂದ 25 ಕಿ.ಮಿ. ದೂರದಲ್ಲಿರುವ ಚಂಪಕನಗರದಲ್ಲಿ ನಿಷೇಧಿತ ಎನ್.ಎಲ್.ಎಫ್.ಟಿ.ಯ (ತ್ರಿಪುರಾ ರಾಷ್ಟ್ರೀಯ ವಿಮೋಚನಾ ರಂಗ) ಭಯೋತ್ಪಾದಕರು ಪ್ರಯಾಣಿಕ ಬಸ್ಸೊಂದರ ಮೇಲೆ ಆಕ್ರಮಣ ಮಾಡಿ ಗುಂಡಿನ ಸುರಿಮಳೆಗರೆದು ಕಾಜಲ್ ಹಾಗೂ ಇತರ ಇಬ್ಬರನ್ನು ಕೊಂದು ಹಾಕಿದರು.

ಮಧ್ಯಮ ವರ್ಗದ ಬುಡಕಟ್ಟು ಕುಟುಂಬವೊಂದರಲ್ಲಿ ಜನಿಸಿದ ಕಾಜಲ್, ತ್ರಿಪುರಾ ಮಹಿಳಾ ಕ್ರಿಕೆಟ್ ತಂಡದ ಪ್ರಮುಖ ಸದಸ್ಯರಲ್ಲಿ ಒಬ್ಬಳು. ಖಿರೋಡ್ ದೇವವರ್ಮ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯಲ್ಲಿ ಆಡಲು ಹೋಗಿದ್ದ ಸಂದರ್ಭದಲ್ಲಿ ಆಕೆ ಬಲಿಯಾದಳು. ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ನಡುವಿನ ಒಗ್ಗಟ್ಟನ್ನು ಬಲಪಡಿಸಲು ಕೊಡುಗೆ ಸಲ್ಲಿಸಿದ್ದಕ್ಕಾಗಿ ರಾಷ್ಟ್ರಪ್ರಶಸ್ತಿ ಗಳಿಸಿದ್ದ ಖಿರೋಡ್ ದೇವವರ್ಮ ಕೂಡ ಕಳೆದ ವರ್ಷ ಜುಲೈ 9 ರಂದು ಉಗ್ರಗಾಮಿಗಳ ಗುಂಡಿಗೆ ಬಲಿಯಾಗಿದ್ದರು.

ದೇವವರ್ಮ ಸ್ಮಾರಕ ಟೂರ್ನಿಯಲ್ಲಿ ಭಾಗವಹಿಸಿ ಪ್ರಶಸ್ತಿ ಗೆದ್ದ ತಂಡದ ಹಾಗೂ ಸಾಂಸ್ಕೃತಿಕ ತಂಡದ ಸದಸ್ಯರು ವಿಜಯೋತ್ಸವ ಆಚರಿಸಿ ಹಾಡಿ ನಲಿಯುತ್ತಿದ್ದಾಗ ಭಯೋತ್ಪಾದಕರು ಅವರ ಮೇಲೆ ಸುರಿಸಿದ ಗುಂಡಿನ ಮಳೆಗೆ ಕಾಜಲ್ ದೇವವರ್ಮ, ಉನುಸ್ ಮಿಯಾನ್ ಮತ್ತು ಮಾಲಿನಿ ದೇವವರ್ಮ ಮೃತಪಟ್ಟರು. 11 ಜನರು ಗಾಯಗೊಂಡರು.

ಭಯೋತ್ಪಾದಕರು ಆಕ್ರಮಣ ನಡೆಸಿದ ಈ ಜಾಗದಲ್ಲಿ ಹಿಂದೆ ಸೇನೆಯ ಕಾವಲಿತ್ತು. ಆದರೆ ಎರಡು ತಿಂಗಳ ಹಿಂದೆ ಕೇಂದ್ರ ಸರಕಾರ ಇಲ್ಲಿಂದ ಸೇನೆಯನ್ನು ವಾಪಸ್ ಕರೆಸಿಕೊಂಡಿತ್ತು. ಇದರಿಂದಾಗಿ ಈ ಪ್ರದೇಶದಲ್ಲಿ ಭದ್ರತೆಯೇ ಇಲ್ಲವಾಗಿದೆ ಎಂದು ಯು.ಎನ್.ಐ. ಸುದ್ದಿ ಸಂಸ್ಥೆ ವರದಿ ಮಾಡಿದೆ.

ಆರು ಪ್ರಯಾಣಿಕರ ಹತ್ಯೆ

ಇದಕ್ಕೆ ಮುನ್ನ, ಐ.ಎನ್.ಎಸ್. ನಿಂದ ಬಂದ ವರದಿಯಂತೆ ಇನ್ನೊಂದು ಪ್ರಕರಣದಲ್ಲಿ ಎನ್.ಎಲ್.ಎಫ್.ಟಿಯ ಉಗ್ರರು ಕಂಚನಪುರದಿಂದ ಅಗರ್ತಲಾಕ್ಕೆ ಹೊರಟಿದ್ದ ಬಸ್ಸೊಂದರ ಆರು ಪ್ರಯಾಣಿಕರನ್ನು ಕೊಂದು 12 ಜನರನ್ನು ಗಾಯಗೊಳಿಸಿದ್ದಾರೆ. ಇಡೀ ದೇಶ ಸ್ವಾತಂತ್ರ್ಯ ಸ್ವರ್ಣ ಜಯಂತಿಯ ಸಮಾರೋಪ ಸಮಾರಂಭದ ಸಂಭ್ರಮದಲ್ಲಿದ್ದಾಗ ಈ ಬಸ್ಸಿನ ಪ್ರಯಾಣಿಕರು ದೇಶದ್ರೋಹಿ ಉಗ್ರಗಾಮಿಗಳ ಗುಂಡಿನ ಮಳೆಯನ್ನು ಎದುರಿಸಿ ಹಲವರು ಪ್ರಾಣತೆತ್ತರು.

ಆಗಸ್ಟ್ 15 ರ ಬೆಳಿಗ್ಗೆ 6.30 ಕ್ಕೆ ಕಂಚನಪುರದಿಂದ ಹೊರಟ ರಾಜ್ಯ ಸಾರಿಗೆ ಸಂಸ್ಥೆಯ ಈ ಬಸ್ಸು ಹತ್ತೇ ನಿಮಿಷದಲ್ಲಿ, ಅಂದರೆ 6.40 ರ ಹೊತ್ತಿಗೆ ರಸ್ತೆಯಲ್ಲಿ ಕಾದು ನಿಂತಿದ್ದ ಎನ್.ಎಲ್.ಎಫ್.ಟಿ. ರಾಕ್ಷಸರ ಗುಂಡಿನ ಮಳೆಯನ್ನು ಎದುರಿಸಿತು.

ಮುಗ್ಧ ಪ್ರಯಾಣಿಕರ ಮೇಲೆ ಉಗ್ರಗಾಮಿಗಳು ನಡೆಸಿದ ಈ ಅಮಾನುಷ ಆಕ್ರಮಣವನ್ನು ಸಿಪಿಐ(ಎಂ) ತ್ರಿಪುರಾ ರಾಜ್ಯ ಕಾರ್ಯದರ್ಶಿ ಮಂಡಳಿ ಕಟುವಾಗಿ ಖಂಡಿಸಿದೆ. ರಾಜ್ಯದ ತೀರಾ ಒಳಪ್ರದೇಶದ ಉಪವಿಭಾಗಕ್ಕೆ ರಾಜ್ಯರಾಜಧಾನಿಯೊಂದಿಗೆ ವಾಹನ ಸಂಪರ್ಕ ಕಲ್ಪಿಸುವ ಯೋಜನೆಯನ್ನು ಅಸ್ತವ್ಯಸ್ತಗೊಳಿಸುವ ಉಗ್ರಗಾಮಿಗಳ ಯತ್ನ ಇದಾಗಿದೆ ಎಂದು ಅದು ಹೇಳಿದೆ. ಉಗ್ರಗಾಮಿಗಳು ದಾಳಿಗೆ ಆಯ್ದುಕೊಂಡ ಸಮಯ ಕೂಡ ಅವರ ರಾಷ್ಟ್ರವಿರೋಧಿ ಧೋರಣೆಗೆ ಹಿಡಿದ ಕನ್ನಡಿಯಾಗಿದೆ.

ಕೇಂದ್ರದ ಹೊಣೆ

ರಾಜ್ಯದಲ್ಲಿ ಹೆಚ್ಚುವರಿ ಕೇಂದ್ರೀಯ ಭದ್ರತಾ ಪಡೆಗಳನ್ನು ನಿಯೋಜಿಸುವ ವಿಚಾರದಲ್ಲಿ ಕೇಂದ್ರ ಸರ್ಕಾರ ದೀರ್ಘ ಸಮಯದಿಂದ ಮೀನಾಮೇಷ ಎಣಿಸುತ್ತಿರುವುದರ ನೇರ ಪರಿಣಾಮ ಇದಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಘಟನೆ ಬಗ್ಗೆ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರಕಾರ ಏಕಪಕ್ಷೀಯವಾಗಿ ಹಿಂತೆಗೆದುಕೊಂಡ ಪಡೆಗಳನ್ನು ಮತ್ತೆ ಕಳಿಸಲು ವಿಳಂಬ ಮಾಡುತ್ತಿರುವುದನ್ನು ಕೇಂದ್ರ ಗೃಹ ಸಚಿವರ ಗಮನಕ್ಕೆ ತಂದು ಅದನ್ನು ಖಂಡಿಸಿದರು.

ತ್ರಿಪುರಾದ ಭದ್ರತಾ ಅವಶ್ಯಕತೆಗಳ ಬಗ್ಗೆ ತಾವು ಹಲವು ಬಾರಿ ಕೇಂದ್ರ ಗೃಹಖಾತೆಯೊಂದಿಗೆ ನಡೆಸಿದ ಮಾತುಕತೆಗಳನ್ನು ಮುಖ್ಯಮಂತ್ರಿ ನೆನಪಿಸಿದರು. ಸಮಸ್ಯೆಯ ಪರಿಹಾರಕ್ಕೆ ನೆರವು ನೀಡುವ ಕುರಿತ ಆಶ್ವಾಸನೆಯನ್ನು ನೆನಪಿಗೆ ತಂದರು.

ಅಸ್ಸಾಂ ಕಗ್ಗೊಲೆಗಳು-ಸಿಪಿಐ(ಎಂ) ಆತಂಕ

ಭಯೋತ್ಪಾದಕ ಚಟುವಟಿಕೆಗಳ ಹೆಚ್ಚಳ ಮತ್ತು ರಾಜ್ಯದ ಹಲವು ಭಾಗಗಳಲ್ಲಿ ಕೊಲೆ ಹಾಗೂ ಪ್ರತೀಕಾರ ಕೊಲೆ ಪ್ರಕರಣಗಳು ಹೆಚ್ಚುತ್ತಿರುವುದಕ್ಕೆ ಸಿಪಿಐ(ಎಂ) ಅಸ್ಸಾಂ ರಾಜ್ಯ ಸಮಿತಿ ಗಂಭೀರ ಕಳವಳ ವ್ಯಕ್ತಪಡಿಸಿದೆ.

ಮೋಯ್ನ ಮಹಂತ ಮತ್ತು ತಪನ್ ದತ್ತಾ, 'ಉಲ್ಫಾ' ಅಧ್ಯಕ್ಷರ ಅಣ್ಣ ಡಿಂಬಾ ರಾಜ್ ಕೋನ್ವಾರ್ ಹಾಗೂ 'ಉಲ್ಫಾ'ದ ಪ್ರಚಾರ ಕಾರ್ಯದರ್ಶಿಯ ಕುಟುಂಬದ ನಾಲ್ಕು ಸದಸ್ಯರ ಕಗ್ಗೊಲೆಗಳು ಖಂಡನಾರ್ಹ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹೇಮೇನ್ ದಾಸ್ ಹೇಳಿದ್ದಾರೆ.

ಅದೇ ರೀತಿ ತೇಕೆರ್ ಗುರಿಯಲ್ಲಿರುವ ಭಾರತೀಯ ತೈಲ ನಿಗಮದ(IOC) ಡಿಪೋ ಸ್ಫೋಟ ಮತ್ತು ತಂಗ್ಲಾ ಪ್ರದೇಶದ ಸುಭಾಷ್ ಪಲ್ಲಿ ಎಂಬಲ್ಲಿ ಮುಗ್ಧ ಜನರ ಹತ್ಯೆಯಂಥ ಉಗ್ರಗಾಮಿ ಚಟುವಟಿಕೆಗಳು ಕೂಡ ಖಂಡನಾರ್ಹವೇ ಎಂದು ದಾಸ್ ಹೇಳಿದ್ದಾರೆ.

ಕೊಲೆ ಮತ್ತು ಪ್ರತೀಕಾರದ ಕೊಲೆ ಸಹಿತ ಯಾವುದೇ ರೀತಿಯ ಉಗ್ರಗಾಮಿ ಹಿಂಸಾಚಾರದಿಂದ ಜನತೆಗೆ ಏನೂ ಒಳಿತಾಗುವುದಿಲ್ಲ. ಅದ್ದರಿಂದ ಪರಿಸ್ಥಿತಿ ಇನ್ನಷ್ಟು ಜಟಿಲವಾಗುತ್ತದೆ. ಹಗೆತನದ ಕೊಲೆಗಳು ಹೆಚ್ಚುತ್ತವೆ ಅಷ್ಟೆ ಎಂದು ಪಕ್ಷ ಹೇಳಿದೆ. ಉಗ್ರಗಾಮಿ ಸಂಘಟನೆಯಾದ 'ಉಲ್ಫಾ'ದ ಮುಖಂಡರ ಬಂಧುಗಳ ಕಗ್ಗೊಲೆ ಒಂದು ಅಶುಭ ಚಿಹ್ನೆ ಎಂದು ಅಭಿಪ್ರಾಯ ಪಟ್ಟಿದೆ.

ಹೇಯ ಕೊಲೆಗಳಿಗೆ ಕಾರಣರಾದವರನ್ನು ಬಂಧಿಸಬೇಕು. ಹಿಂಸೆಯನ್ನು ಮಟ್ಟಹಾಕಲು ಹಾಗೂ ಜನರಿಗೆ ಭದ್ರತೆ ಒದಗಿಸಲು ಸರಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಪಕ್ಷ ಒತ್ತಾಯಿಸಿದೆ. ○

ಸೀತಾಮರಿ ಪೋಲೀಸ್ ದೌರ್ಜನ್ಯ

ಬಿಹಾರದ ಸೀತಾಮರಿ ಜಿಲ್ಲಾಧಿಕಾರಿ ಕಚೇರಿ ಮುಂದೆ ನಡೆದ ಗೋಲಿಬಾರಿನಲ್ಲಿ ಐದು ಜನರು ಮೃತಪಟ್ಟ ಕುರಿತು 'ಐಕ್ಯರಂಗ'ದ ಹಿಂದಿನ ಸಂಚಿಕೆಯಲ್ಲಿ ಓದಿರುತ್ತೀರಿ. ಇದೀಗ ಐ.ಎನ್.ಎಸ್. ನಿಂದ ಲಭ್ಯವಾಗಿರುವ ಮಾಹಿತಿ ಪ್ರಕಾರ ಮೃತರಲ್ಲಿ ಇಬ್ಬರು ಸಿಪಿಐ(ಎಂ) ಕಾರ್ಯಕರ್ತರು ಎಂದು ಗೊತ್ತಾಗಿದೆ.

ಆಗಸ್ಟ್ 11 ರಂದು ಗೋಲಿಬಾರ್ ನಡೆದಿತ್ತು. ಜಿಲ್ಲಾಧಿಕಾರಿ ಕಚೇರಿ ಮುಂದೆ ಜನತಾದಳ ಮಾತ್ರವಲ್ಲದೆ ಸಿಪಿಐ (ಎಂ)ಪ್ರದರ್ಶನವೂ ಇತ್ತು. ಬೆಲೆಯೇರಿಕೆ, ಕೇಂದ್ರ ಬಿಜೆಪಿ ನೇತೃತ್ವದ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ರಾಜ್ಯಾದ್ಯಂತ ನಡೆದ ಆಂದೋಲನದ ಅಂತಿಮ ಘಟ್ಟವಾಗಿ ಆಗಸ್ಟ್ 11 ರಂದು ಎಲ್ಲಾ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಸಿಪಿಐ(ಎಂ) ಪ್ರದರ್ಶನವನ್ನು ಹಮ್ಮಿಕೊಂಡಿತ್ತು.

ಸುಮಾರು 5000 ಜನರಿದ್ದ ಮೆರವಣಿಗೆ ಸೀತಾಮರಿ ಜಿಲ್ಲಾಧಿಕಾರಿ ಕಚೇರಿ ಬಳಿ ಬಂದಿತ್ತು. ಅದೇ ವೇಳೆಗೆ ಜನತಾದಳ ಮೆರವಣಿಗೆಯೂ ಅಲ್ಲಿ ತಲುಪಿತು. ಇದರಿಂದ ಸ್ವಲ್ಪಗೊಂದಲ ಉಂಟಾಯಿತು. ಸ್ವಲ್ಪವೇ ಹೊತ್ತಿನಲ್ಲಿ ಅದು ನಿವಾರಣೆಯಾಗಿ ಉಭಯ ಪಕ್ಷಗಳು ಪ್ರತ್ಯೇಕ ಸಭೆಗಳನ್ನು ಆರಂಭಿಸಿದವು.

ಆದರೆ, ಎರಡೂ ಸಭೆಗಳ ಕಲಾಪ ಮುಂದುವರಿದಿದ್ದಾಗ ಮಧ್ಯಾಹ್ನ ಸುಮಾರು ಒಂದು ಗಂಟೆ ಹೊತ್ತಿಗೆ ಅಲ್ಲಿ ಪ್ರತ್ಯಕ್ಷನಾದ ಜಿಲ್ಲಾ ಪೋಲೀಸ್ ಅಧಿಕಾರಿ ಯಾವುದೇ ಕಾರಣವಿಲ್ಲದೆ ಅಮಾನುಷ ಲಾಠಿಪ್ರಹಾರಕ್ಕೆ ಆಜ್ಞೆ ನೀಡಿದ. ಆನಂತರ ಕಲ್ಲೆಸೆತದ ಕಾರಣ ಮುಂದೊಡ್ಡಿ ಪೋಲೀಸರು ಎಚ್ಚರಿಕೆಯನ್ನೂ ನೀಡದೆ ಯದ್ವಾತದ್ವಾ ಗುಂಡು ಹಾರಿಸಲು ಆರಂಭಿಸಿದರು. ಗುಂಡೇಟಿನಿಂದ ಮೂವರು ಸ್ಥಳದಲ್ಲೇ ಸತ್ತರು. ಇಬ್ಬರು ಗಾಯಾಳುಗಳು ಆಮೇಲೆ ಕೊನೆಯುಸಿರೆಳೆದರು.

ಮೃತರಲ್ಲಿ ಇಬ್ಬರು ಸಿಪಿಐ(ಎಂ) ಸದಸ್ಯರಾದ ಕಾ. ರಾಮ್‌ತ್ಯಾರಿ ದೇವಿ ಹಾಗೂ ಕಾ. ಉಮಾ ಮಂಡಲ್. ಪಕ್ಷದ ಮೂವರು ಸದಸ್ಯರು ಕಾಣೆಯಾಗಿದ್ದಾರೆ. ಗಂಭೀರ ವಾಗಿ ಗಾಯಗೊಂಡವರು ಹಾಗೂ ಪೋಲೀಸರು ಬಂಧಿಸಿದವರಲ್ಲಿಯೂ ಅನೇಕ ಜನರು ಸಿಪಿಐ(ಎಂ) ಕಾರ್ಯಕರ್ತರಿದ್ದಾರೆ. ಗೋಲಿಬಾರಿನಲ್ಲಿ ಗಾಯಗೊಂಡ ಪಕ್ಷದ ಸದಸ್ಯೆ ಮಂಜುದೇವಿ ಅವರ ಕಾಲನ್ನು ಕತ್ತರಿಸಿ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

ರಾಜ್ಯದ ಆರ್.ಜೆ.ಡಿ. ಸರಕಾರದ ಆಡಳಿತ ಯಂತ್ರ ಬೇಕಂತಲೇ ಶಾಂತಿಯುತ ಪ್ರದರ್ಶನಕಾರರ ಮೇಲೆ ಗೋಲಿಬಾರ್ ನಡೆಸಿ ಐದು ಜನರ ಪ್ರಾಣಹರಣ ಮಾಡಿರುವುದು ಸ್ಪಷ್ಟವಾಗಿದೆ. ಪ್ರವಾಹ ಸಂತ್ರಸ್ತರ ರಕ್ಷಣೆ ಹಾಗೂ ಪರಿಹಾರದಲ್ಲಿ ತಾನು ಪೂರ್ಣವಾಗಿ ವಿಫಲವಾಗಿರುವುದರಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ರಾಜ್ಯ ಸರಕಾರ ಇಂಥ ಹೇಯ ಕೃತ್ಯಕ್ಕೆ ಇಳಿಯಿತು ಎಂದು ಗೋಲಿಬಾರ್ ಸ್ಥಳಕ್ಕೆ ಭೇಟಿ ನೀಡಿ ಸಾರ್ವಜನಿಕರೊಂದಿಗೆ ಚರ್ಚಿಸಿದ ಸಿಪಿಐ(ಎಂ) ನಿಯೋಗ ಅಭಿಪ್ರಾಯಪಟ್ಟಿದೆ.

ಯಶಸ್ವಿ ಬಂದ್

ಗೋಲಿಬಾರ್ ಪ್ರತಿಭಟಿಸಿ ಸಿಪಿಐ(ಎಂ) ನೀಡಿದ ಸೀತಾಮರಿ ಜಿಲ್ಲೆ ಬಂದ್(ಆಗಸ್ಟ್ 13) ಹಾಗೂ ಆರು ಎಡಪಕ್ಷಗಳು ಮತ್ತು ಜನತಾದಳ ನೀಡಿದ ಬಿಹಾರ ರಾಜ್ಯ ಬಂದ್ ಆಗಸ್ಟ್ 18 ರಂದು ಯಶಸ್ವಿಯಾಗಿ ನಡೆದವು.

ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಗಣೇಶ್ ಶಂಕರ ವಿದ್ಯಾರ್ಥಿ, ಶಾಸಕ ಪಕ್ಷ ಗುಂಪಿನ ನಾಯಕ ರಾಮದೇವ್ ವರ್ಮಾ ಮತ್ತಿತರ ಹಲವು ನಾಯಕರನ್ನು ಬಂದ್ ವೇಳೆ ಬಂಧಿಸಲಾಯಿತು. ರಾಜ್ಯದ ಹಲವು ಕಡೆ ರೈಲು ಸಂಚಾರ ಅಸ್ತವ್ಯಸ್ತಗೊಂಡಿತು. ದೂರ ಪ್ರಯಾಣದ ಬಸ್ ಸಂಚಾರ ಸ್ಥಗಿತಗೊಂಡಿತು. ಸಿಪಿಐ(ಎಂ) ಶಾಸಕ ಕಾ. ರಾಜೇಂದ್ರ ಸಿಂಗ್ ಅವರ ಮೇಲೆ ಶಸ್ತ್ರಸಜ್ಜಿತರು ಹಲ್ಲೆ ಮಾಡಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ರಾಮನಾಥ ಗಾಯಗೊಂಡಿದ್ದಾರೆ.

ಮಹಾರಾಷ್ಟ್ರ ಬಿಕ್ಕಟ್ಟು: ಉಲ್ಬಣ - ಶಮನ!

ಕೊಳಗೇರಿ ನಿವಾಸಿಗಳ ವಸತಿಯೋಜನೆ ಸಂಬಂಧದಲ್ಲಿ ಮಹಾರಾಷ್ಟ್ರದ ಆಳುವ ಶಿವಸೇನೆ - ಬಿಜೆಪಿ ಕೂಟದಲ್ಲಿ ಬಿರುಕು ಉಂಟಾಗಿದ್ದನ್ನು ಐಕ್ಯರಂಗ (ಆಗಸ್ಟ್ 24-30) ವರದಿ ಮಾಡಿತ್ತು.

ಈ ವಿವಾದ ಎಷ್ಟರ ಮಟ್ಟಿಗೆ ಮುಂದುವರಿಯಿತೆಂದರೆ, ಮಹಾರಾಷ್ಟ್ರ ಸಚಿವ ಸಂಪುಟದ ಸಭೆಯನ್ನು ಬಿಜೆಪಿ ಮಂತ್ರಿಗಳು ಬಹಿಷ್ಕರಿಸಿದರು. ಇದರಿಂದಾಗಿ ಸಂಪುಟ ಸಭೆಯನ್ನೇ ರದ್ದು ಪಡಿಸಬೇಕಾಯಿತು.

ಶಿವಸೇನೆ-ಬಿಜೆಪಿ ಕೂಟ ಆಡಳಿತಕ್ಕೆ ಬಂದಾಗಿನಿಂದ ಸಂಪುಟ ಸಭೆ ರದ್ದಾದ ಮೊದಲ ಪ್ರಕರಣ ಇದು. ಅದರಲ್ಲೂ ಮಿತ್ರಕೂಟದ ಜಟಾಪಟಿಯಿಂದಾಗಿಯೇ ಸಂಪುಟ ಸಭೆ ರದ್ದಾಗಿದ್ದುದು ಬಿಕ್ಕಟ್ಟು ಉಲ್ಬಣಿಸಿದ್ದರ ಸಂಕೇತವಾಗಿತ್ತು.

ಆದರೆ ಶಿವಸೇನೆ ಮುಖ್ಯಸ್ಥ ಬಾಳಾಠಾಕ್ರೆ ಮಧ್ಯಪ್ರವೇಶಿಸಿ ಎರಡೂ ಪಕ್ಷಗಳ ಮಧ್ಯೆ 'ಕದನ ವಿರಾಮ' ಏರ್ಪಡಿಸಿದ್ದಾರೆ. ಇದು ತಾತ್ಕಾಲಿಕವಾದುದು ಎಂದು ಬೇರೆ ಹೇಳಬೇಕಾಗಿಲ್ಲ. ಬಿಕ್ಕಟ್ಟು ಇನ್ನು ಯಾವಾಗ, ಯಾವ ರೂಪದಲ್ಲಿ ಸ್ಫೋಟಗೊಳ್ಳುತ್ತದೋ ಹೇಳಲಾಗುವುದಿಲ್ಲ. ○

ಚಳುವಳಿ ತೀವ್ರಗೊಳಿಸಲು ಕಾಲೇಜು ಅಧ್ಯಾಪಕರ ನಿರ್ಧಾರ

ಆಗಸ್ಟ್ 11ರಿಂದ ದೇಶಾದ್ಯಂತ ಅನಿರ್ದಿಷ್ಟ ಮುಷ್ಕರಕ್ಕಿಳಿದಿರುವ ಸುಮಾರು ನಾಲ್ಕು ಲಕ್ಷ ವಿಶ್ವವಿದ್ಯಾಲಯ ಮತ್ತು ಕಾಲೇಜು ಅಧ್ಯಾಪಕರು ಕೇಂದ್ರ ಸರಕಾರದ ಬೆದರಿಕೆಯನ್ನೂ ಲೆಕ್ಕಿಸದೆ ತಮ್ಮ ಹೋರಾಟವನ್ನು ನಿರ್ಧರಿಸಿದ್ದಾರೆ. ಆಗಸ್ಟ್ 24ರಂದು ನವದೆಹಲಿಯಲ್ಲಿ ಸಭೆ ಸೇರಿದ ಅಖಿಲ ಭಾರತ ವಿಶ್ವವಿದ್ಯಾಲಯ ಮತ್ತು ಕಾಲೇಜು ಅಧ್ಯಾಪಕರ ಒಕ್ಕೂಟ (AIFUCTO)ದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಚಳುವಳಿಯನ್ನು ತೀವ್ರಗೊಳಿಸಲು ಕರೆ ನೀಡಿದೆ.

ಕೇಂದ್ರ ಸರಕಾರ ವಿಶ್ವವಿದ್ಯಾಲಯ ಅನುದಾನ ಆಯೋಗ(ಯು.ಜಿ.ಸಿ.)ದ ಶಿಫಾರಸುಗಳನ್ನು ಬದಿಗೊತ್ತಿ ಜುಲೈ 27ರಂದು ಜ್ಯಾರಿಗೊಳಿಸಿದ ನೋಟಿಫಿಕೇಶನ್ ವಿರುದ್ಧ ಈ ಪ್ರತಿಭಟನಾ ಕಾರ್ಯಾಚರಣೆ ಆರಂಭವಾಗಿತ್ತು. ಇದಕ್ಕೆ ಮೊದಲು ಆಗಸ್ಟ್ 4ರಂದು ದೇಶಾದ್ಯಂತ ಅಧ್ಯಾಪಕರ ಎಚ್ಚರಿಕೆಯ ಮುಷ್ಕರ ಸಂಪೂರ್ಣ ಯಶಸ್ವಿಯಾದರೂ ಸರಕಾರ ಕಿವುಡಾಗಿಯೇ ಉಳಿಯಿತು. ಆಗಸ್ಟ್ 16ರಂದು ಕೇಂದ್ರ ಮಾನವ ಸಂಪನ್ಮೂಲ ಮಂತ್ರಿ ಎಂ.ಎಂ. ಜೋಷಿಯವರು ಕಾಲೇಜು ಅಧ್ಯಾಪಕರ ಸಂಘಟನೆಗಳ ಮುಖಂಡರೊಂದಿಗೆ ನಡೆಸಿದ ಮಾತುಕತೆಯಲ್ಲಿ ಅಧ್ಯಾಪಕರ ಬೇಡಿಕೆಗಳಲ್ಲಿ ಕೆಲವನ್ನು ಒಪ್ಪಿಕೊಂಡರೂ ಅವರ ಪ್ರಮುಖ ಬೇಡಿಕೆಗಳ ಬಗ್ಗೆ ತನ್ನ ಹಠಮಾರಿತನವನ್ನು ಬಿಡಲಿಲ್ಲ. ಅಲ್ಲದೆ ಸಣ್ಣ ಪುಟ್ಟ ಬೇಡಿಕೆಗಳ ಈಡೇರಿಕೆಯನ್ನೂ ಕೇಂದ್ರ ಸಂಪುಟದ ಮುಂದಿಡುವ ಮೊದಲು ಮುಷ್ಕರವನ್ನು ಹಿಂತೆಗೆದುಕೊಳ್ಳಬೇಕು ಎಂದು ಶರತ್ತು ಹಾಕಿದರು. ಅಧ್ಯಾಪಕರ ಸಂಘಟನೆಗಳು ಇದಕ್ಕೆ ಒಪ್ಪಲಿಲ್ಲ.

ಸರಕಾರದ ಈ ಹಠಮಾರಿತನದ ಹಿನ್ನೆಲೆಯಲ್ಲಿ ಆಗಸ್ಟ್ 24ರಂದು ಸಭೆ ಸೇರಿದ ಅಖಿಲ ಭಾರತ ಒಕ್ಕೂಟದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಧರಣಿ ಸತ್ಯಾಗ್ರಹಗಳನ್ನು ನಡೆಸಲು, ಸೆಪ್ಟಂಬರ್ 1ರಂದು ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ ಪ್ರತಿಭಟನಾ ರ್‍ಯಾಲಿ ನಡೆಸಲು ಹಾಗೂ ನಂತರ 'ಜೈಲ್ ಭರೋ' ಚಳುವಳಿ ನಡೆಸಲು ಕರೆ ನೀಡಿದೆ. ಸೆಪ್ಟಂಬರ್ 5ರ ಶಿಕ್ಷಕರ ದಿನದಂದು ಕಪ್ಪು ಬ್ಯಾಡ್ಜ್ ಧರಿಸಿ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗಳೆದುರು ಧರಣಿ ನಡೆಸಲು ಕರೆ ನೀಡಿದೆ.

ಕರ್ನಾಟಕದ ವಿಶ್ವವಿದ್ಯಾಲಯ ಹಾಗೂ ಕಾಲೇಜು ಅಧ್ಯಾಪಕರ ಒಕ್ಕೂಟ (FUCTAK) ಆಗಸ್ಟ್ 27ರಂದು ರಾಜ್ಯದ ಎಲ್ಲಾ ಪ್ರಮುಖ ಪಟ್ಟಣಗಳಲ್ಲಿ ಸಾಮೂಹಿಕ ಧರಣಿಗಳನ್ನು ನಡೆಸಲು ನಿರ್ಧರಿಸಿದೆ. ಆಗಸ್ಟ್ 29ರಂದು ಬೆಂಗಳೂರಿನಲ್ಲಿ ಈ ಒಕ್ಕೂಟದ ಮಹಾಮಂಡಳಿಯ ಸಭೆ ನಡೆಯಲಿದ್ದು ಮುಂದಿನ ಕಾರ್ಯಾಚರಣೆಯ ಯೋಜನೆಯನ್ನು ರೂಪಿಸಲಾಗುವುದು ಎಂದು ತಿಳಿಸಿರುವ ಒಕ್ಕೂಟದ ಮುಖಂಡರು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಬೆದರಿಕೆಗಳಿಗೆ ಮಣಿಯದೆ ಹೋರಾಟ ಮುಂದುವರೆಸಲು ಕರೆ ನೀಡಿದ್ದಾರೆ.

ಬೀಡಿ ಕಾರ್ಮಿಕರಿಗೆ ಪಾಸ್‌ಬುಕ್ ನೀಡಿಕೆ ಪ್ರಾವಿಡೆಂಟ್ ಫಂಡ್ ಕಾರ್ಯಾಲಯದ ಒಪ್ಪಿಗೆ

ಬೀಡಿ ಕಾರ್ಮಿಕರಿಗೆ ಪಾಸ್‌ಬುಕ್‌ಗಳನ್ನು/ಗುರುತುಪತ್ರಗಳನ್ನು ನೀಡುವ ಪ್ರಶ್ನೆಯನ್ನು ಜುಲೈ 8 ಹಾಗೂ 9ರಂದು ನವದೆಹಲಿಯಲ್ಲಿ ಸಭೆ ಸೇರಿದ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರುಗಳ ಸಮ್ಮೇಳನದಲ್ಲಿ ಚರ್ಚಿಸಲಾಯಿತು. ಪಾಸ್ ಬುಕ್‌ಗಳನ್ನು ಹೇಗೆ ನೀಡುವುದು, ಅವುಗಳ ನಿರ್ವಹಣೆ ಹೇಗೆ ಮಾಡುವುದು ಇತ್ಯಾದಿ ವಿಧಿ-ವಿಧಾನಗಳನ್ನು ಭವಿಷ್ಯ ನಿಧಿ ಸಂಘಟನೆಯ ಕೇಂದ್ರ ಕಛೇರಿ ಪರಿಶೀಲಿಸುತ್ತಿದ್ದು ಆ ವಿವರಗಳು ದೊರೆತ ಕೂಡಲೇ ಕರ್ನಾಟಕ ಪ್ರಾದೇಶಿಕ ಕಾರ್ಯಾಲಯದ ವ್ಯಾಪ್ತಿಯಲ್ಲಿ ಅದನ್ನು ಜ್ಯಾರಿಗೆ ತರಲಾಗುವುದು ಎಂದು ಪ್ರಾದೇಶಿಕ ಪಿ.ಎಫ್. ಕಮಿಶನರ್ ಪ್ರಾದೇಶಿಕ ಸಮಿತಿಯ ಸಿಐಟಿಯು ಪ್ರತಿನಿಧಿಗಳಿಗೆ ತಿಳಿಸಿದ್ದಾರೆ.

ಸಿಐಟಿಯು ಪ್ರತಿನಿಧಿಗಳಾದ ಕೆ.ವಿ. ಶ್ರೀನಿವಾಸ್ ಆಯುಕ್ತರಿಗೆ ಬರೆದ ಪತ್ರದಲ್ಲಿ ಎತ್ತಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಈ ವಿಷಯ ತಿಳಿಸಿದ್ದಾರೆ. ಉಡುಪಿ, ಶಿವಮೊಗ್ಗ, ರಾಯಚೂರು, ಚಿಕ್ಕಮಗಳೂರು, ತುಮಕೂರು ಹಾಗೂ ಬಳ್ಳಾರಿಯಲ್ಲಿ ಉಪ ಪ್ರದೇಶ ಕಛೇರಿಗಳನ್ನು ತೆರೆಯುವ ಬಗ್ಗೆ ಮುಂದಿನ ಪ್ರಾದೇಶಿಕ ಸಮಿತಿಯ ಸಭೆಯಲ್ಲಿ ಮಂಡಿಸಲಾಗುವುದು ಎಂದು ಆಯುಕ್ತರು ತಿಳಿಸಿದ್ದಾರೆ.

ಬೆಂಗಳೂರಿನ ಕೆ.ಆರ್. ಪುರಂ ಹಾಗೂ ಬೊಮ್ಮನಹಳ್ಳಿಗಳಲ್ಲಿ ಲೆಕ್ಕಪತ್ರ ಉಪ ಕಛೇರಿಗಳನ್ನು ಸದ್ಯದಲ್ಲೇ ತೆರೆಯಲಾಗುವುದು ಎಂದೂ ಅವರು ಹೇಳಿದ್ದಾರೆ.

ಪಿ.ಎಫ್. ಚಂದಾದಾರರಿಗೆ ನೀಡುವ ವಾರ್ಷಿಕ ಸ್ಲಿಪ್‌ಗಳನ್ನು ತಯಾರಿಸುವ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ. 31-3-1998ರ ವರೆಗೆ ಬಾಕಿಯಿದ್ದ ಸುಮಾರು ಎರಡು ಲಕ್ಷ ಸ್ಲಿಪ್‌ಗಳನ್ನು ತಯಾರಿಸಲಾಗಿದ್ದು ಈ ಕೆಲಸವನ್ನು ಸೆಪ್ಟಂಬರ್ ಅಂತ್ಯದೊಳಗೆ ಮುಗಿಸಲಾಗುವುದು ಎಂದೂ ಆಯುಕ್ತರು ತಿಳಿಸಿದ್ದಾರೆ.

ಪಿ.ಎಫ್. ಕಛೇರಿಯಲ್ಲಿ ಭ್ರಷ್ಟಾಚಾರದ ಬಗ್ಗೆ ಎತ್ತಿದ ಪ್ರಶ್ನೆಗೆ ಉತ್ತರಿಸುತ್ತಾ ಪ್ರಾದೇಶಿಕ ಆಯುಕ್ತರಿಗೆ ದೂರುಗಳು ಬಂದಾಗಲೆಲ್ಲಾ ಜಾಗೃತಿ ವಿಭಾಗ (ವಿಜಿಲೆಂಸ್ ವಿಂಗ್) ಸೂಕ್ತ ಕ್ರಮ ಕೈಗೊಳ್ಳುತ್ತದೆ ಎಂದು ತಿಳಿಸಿದ್ದಾರೆ. ○

ಲೋಕಸಂಚಾರ

ಶರತ್ ಚಂದ್ರ

ಅಫಘಾನ್-ಸೂಡಾನ್ ಮೇಲೆ ಅಮೆರಿಕದ ಕ್ಷಿಪಣಿ ಧಾಳಿ : ಪ್ರತಿ-ಭಯೋತ್ಪಾದಕ ಕೃತ್ಯ

ಕೆನ್ಯಾ ಹಾಗೂ ತಾಂಜಾನಿಯಾಗಳ ರಾಜಧಾನಿಗಳಲ್ಲಿ ಅಮೆರಿಕದ ರಾಯಭಾರ ಕಚೇರಿಗಳಲ್ಲಿ ಬಾಂಬ್ ದಾಳಿಗೆ ವಿಚಿತ್ರ ಪ್ರತೀಕಾರವಾಗಿ ಅಮೆರಿಕಾ ಅಫಘಾನ್-ಸೂಡಾನ್‌ನ ಕೆಲವು ಪ್ರದೇಶಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಈ ಎರಡೂ ದೇಶಗಳ ಮೇಲೆ ಅರೇಬಿಯನ್ ಹಾಗೂ ಕೆಂಪು ಸಮುದ್ರದಲ್ಲಿ ಇರುವ ಅಮೆರಿಕನ್ ಯುದ್ಧ ಹಡಗುಗಳಿಂದ ಹಾಗೂ ಯುದ್ಧ ವಿಮಾನಗಳಿಂದ 75 ಕ್ಕೂ ಹೆಚ್ಚು ಟೊಮೊಹಾಕ್ ಕ್ರೂಸ್ ಕ್ಷಿಪಣಿಗಳನ್ನು ಎಸೆಯಲಾಯಿತು. ಈ ದಾಳಿಯಲ್ಲಿ 27 ಜನ ಸತ್ತು, 50 ಜನ ಗಾಯಗೊಂಡಿದ್ದು, ನೂರಾರು ಜನ ಕಾಣೆಯಾಗಿದ್ದಾರೆ. ಒಂದು ಕ್ಷಿಪಣಿ ತಪ್ಪಿನಿಂದ ಪಾಕಿಸ್ತಾನದ ಪ್ರದೇಶದ ಮೇಲೆ ಬಿತ್ತು ಎಂದು ಪಾಕಿಸ್ತಾನದ ವಕ್ತಾರರು ಮೊದಲಲ್ಲಿ ಹೇಳಿದ್ದು, ಕೆಲವು ಗಂಟೆಯಲ್ಲಿ ಈ ಹೇಳಿಕೆಯನ್ನು ಹಿಂತೆಗೆದುಕೊಳ್ಳಲಾಯಿತು. ಎರಡು ಸ್ವತಂತ್ರದೇಶಗಳ ಸಾರ್ವಭೌಮತೆಯ, ಅಂತರ್‍ರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ ಮತ್ತು 'ಸರ್ಕಾರಿ ಭಯೋತ್ಪಾದನೆ' ಯ ನಗ್ನ ಪ್ರದರ್ಶನವಾದ ಈ ದಾಳಿಗೆ ಅಮೆರಿಕನ್ ಸರ್ಕಾರ ಕುಂಟು ನೆವ ತೋರಿಸಿದೆ. ಕೆನ್ಯಾ ಹಾಗೂ ತಾಂಜನಿಯಾದ ರಾಜಧಾನಿಗಳಲ್ಲಿ ನಡೆದ ಅಮೆರಿಕನ್ ರಾಯಭಾರ ಕಚೇರಿಗಳ ಬಾಂಬ್ ದಾಳಿಯ ಹಿಂದೆ ಅಮೆರಿಕನ್ ಗುಪ್ತಚರರ ಪ್ರಕಾರ ಸೌದಿ ಅರೇಬಿಯಾದ ಒಸಾಮಾ ಬಿನ್ ಲಾಡೆನ್ ಕೈವಾಡ ಇದೆ. ಆತನ ಮುಖ್ಯ ನೆಲೆ ಅಫಘಾನಿಸ್ತಾನದಲ್ಲಿ ಇರುವುದು. ಅಲ್ಲಿ ಆತ ಭಯೋತ್ಪಾದಕರಿಗೆ ತರಬೇತಿ ಶಿಬಿರಗಳನ್ನು ನಡೆಸುತ್ತಿದ್ದಾನೆ. ಹಲವು ಅರಬ್ ದೇಶಗಳಲ್ಲಿ ಆತನ ಆಸ್ತಿ ಇದೆ. ಬಾಂಬ್ ದಾಳಿಗೆ ಒಳಗಾದ ಸೂಡಾನ್‌ನ ರಾಜಧಾನಿಯ ಪ್ರದೇಶದಲ್ಲಿ ಆತನ ರಾಸಾಯನಿಕ ತಯಾರಿಕಾ ಕಾರ್ಖಾನೆ ಇದೆ. ಇದು ಅಮೆರಿಕದ ಅಧಿಕೃತ ಸಮಜಾಯಿಷಿ, ಈ ಬರ್ಬರ ದಾಳಿಗೆ.

ಸೂಡಾನ್ ಸರ್ಕಾರ ಈ ಅಮೆರಿಕನ್ ದಾಳಿಗೆ ತೀವ್ರವಾಗಿ ಪ್ರತಿಭಟಿಸಿದ್ದು, ಅಮೆರಿಕದ ಜತೆ ರಾಜತಾಂತ್ರಿಕ ಸಂಬಂಧ ಕಡಿದುಕೊಂಡಿದೆ. ಅಮೆರಿಕನ್ ದಾಳಿಗೆ ಬಲಿಯಾಗಿದ್ದು ಔಷಧಿ ತಯಾರಿಸುವ ಕಾರ್ಖಾನೆ, ಅಮೆರಿಕ ಹೇಳುವಂತೆ ರಾಸಾಯನಿಕಗಳನ್ನು ತಯಾರಿಸುವ ಕಾರ್ಖಾನೆ ಅಲ್ಲ ಎಂದು ವಿಡಿಯೋ ಪುರಾವೆ ಮೂಲಕ ಹೇಳಿದೆ. ಸೂಡಾನ್ ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ದೂರು ಕೊಟ್ಟಿದ್ದು ವಿಶ್ವಸಂಸ್ಥೆಯ ಪ್ರತಿನಿಧಿಗಳೇ ಅಮೇರಿಕನ್ ದಾಳಿಯ ಬಗ್ಗೆ ತನಿಖೆ ಮಾಡಲಿ ಎಂದು ಹೇಳಿದೆ. ಅಫಘಾನಿಸ್ತಾನದಲ್ಲಿ ಈ ಹಿಂದೆ ಅಮೆರಿಕದ ಬೆಂಬಲದಿಂದಲೇ ಇರುವ ತಾಲಿಬಾನ್ ಸರ್ಕಾರ ಬಿನ್ ಲಾಡೆನ್ ಪೂರ್ವಏಶ್ಯನ್ ಬಾಂಬ್ ದಾಳಿಯ ಹಿಂದಿರುವ ವ್ಯಕ್ತಿ ಎಂಬುದಕ್ಕೆ ಯಾವುದೇ ಪುರಾವೆ ಇಲ್ಲ, ಅಮೆರಿಕನ್ನರ ಸಂಶಯದ ಮೇಲೆ ಆತನನ್ನು ಹಿಡಿದು ಕೊಡುವ ಪ್ರಶ್ನೆ ಇಲ್ಲ ಎಂದಿದೆ. ಅಫಘಾನಿಸ್ತಾನದ ಬಿನ್ ಲಾಡೆನ್‌ನ ಮುಖ್ಯ ನೆಲೆ ಹಾಗೂ ತರಬೇತಿ ಶಿಬಿರ ಎಂದು ಹೇಳಲಾದ ಪ್ರದೇಶಕ್ಕೆ ಬಾಂಬ್ ದಾಳಿಯಲ್ಲಿ, ಬಿನ್ ಲಾಡೆನ್‌ಗೆ ಏನೂ ಆಗಿಲ್ಲ, ಆತ ಸುರಕ್ಷಿತವಾಗಿದ್ದಾನೆ ಎಂತಲೂ ತಾಲಿಬಾನ್ ಮೂಲಗಳು ತಿಳಿಸಿವೆ.

ಅಮೆರಿಕದ ನಾಟೋ ಸಹಚರರಾದ ಜರ್ಮನಿ, ಬ್ರಿಟನ್ ಅದರ ಮಿಲಿಟರಿ ಕಾರ್ಯಾಚರಣೆಗೆ ಬೆಂಬಲ ನೀಡಿವೆ. ಆಸ್ಟ್ರೇಲಿಯಾ, ನ್ಯೂಝಿಲ್ಯಾಂಡ್, ಇಸ್ರೇಲ್‌ಗಳೂ ಕ್ಷಿಪಣಿ ದಾಳಿಯನ್ನು 'ಭಯೋತ್ಪಾದಕತೆಯ ವಿರುದ್ಧ ಪ್ರತಿದಾಳಿ' ಎಂದು ಬೆಂಬಲಿಸಿವೆ. ರಶ್ಯಾದ ಅಧ್ಯಕ್ಷ ಯೆಲ್ಸಿನ್ ಇದನ್ನು ಅತಿಕ್ರಮಣ ಎಂದು ಕರೆದು ಖಂಡಿಸಿದರೆ, ವಿದೇಶ ಮಂತ್ರಿ ಇಂತಹ ದಾಳಿಯ ಬದಲು ಮಾತುಕತೆ, ಒತ್ತಾಯಗಳಿಗೆ ಕಾಯಬೇಕಾಗಿತ್ತು ಎಂದು ಹೇಳಿದ್ದಾರೆ. ಚೀನಾ, ಜಪಾನ್‌ಗಳು ಅಮೆರಿಕದ ನಿಲುವನ್ನು ಖಂಡಿಸದೆ, ಬೆಂಬಲಿಸದೆ ತಟಸ್ಥ ನಿಲುವನ್ನು ತಳೆದಿವೆ. ಚೀನಾ ಈ ವಿಷಯದಲ್ಲಿ ವಿಶ್ವಸಂಸ್ಥೆ ಅಂತರ್‍ರಾಷ್ಟ್ರೀಯ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ಹೇಳಿದೆ. ಜಪಾನ್ ದಾಳಿಯ ಹಾಗೂ ಅದರ ಕಾರಣದ ವಿವರಗಳನ್ನು ಅಧ್ಯಯನ ಮಾಡಿದ ಮೇಲೆ ಪ್ರತಿಕ್ರಿಯಿಸುವುದಾಗಿ ಹೇಳಿದೆ. ಅರಬ್ ಲೀಗ್ ಹಾಗೂ ಪಾಕಿಸ್ತಾನಗಳು, ಅಮೆರಿಕದ ಕ್ರಮವನ್ನು 'ಸಾರ್ವಭೌಮತ್ವ ಉಲ್ಲಂಘಿಸುವುದು' ಎಂದು ಖಂಡಿಸಿವೆ. ವಿಶ್ವಸಂಸ್ಥೆ ಮಹಾಕಾರ್ಯದರ್ಶಿ 'ಎಲ್ಲಾ ರೀತಿಯ ಭಯೋತ್ಪಾದನೆಯನ್ನು ಖಂಡಿಸುವ' ಜಾಣ ಮಾತುಗಳಿಂದ ಜಾರಿಕೊಂಡಿದ್ದಾರೆ. ಭಾರತ ಸರ್ಕಾರ ಸಹ ಅಮೆರಿಕದ ಕ್ರಮವನ್ನು ನೇರವಾಗಿ, ಬಲವಾಗಿ ಖಂಡಿಸದೆ ಅಂತರ್‍ರಾಷ್ಟ್ರೀಯ ಭಯೋತ್ಪಾದನೆ ವಿರುದ್ಧ ಕ್ರಮಕ್ಕೆ ಅಂತರ್‍ರಾಷ್ಟ್ರೀಯ ಸಹಕಾರ ಬೇಕು ಎಂದಿದೆ. ಪಾಕಿಸ್ತಾನ, ಸೂಡಾನ್ ಸೇರಿದಂತೆ ಹಲವು ಅರಬ್ ದೇಶಗಳಲ್ಲಿ ಭಾರಿ ಅಮೆರಿಕನ್-ವಿರೋಧಿ ಪ್ರದರ್ಶನಗಳು ನಡೆದಿವೆ. ಹಲವು ಕಡೆ ಅಮೆರಿಕದ ಧ್ವಜವನ್ನು, ಕ್ಲಿಂಟನ್ ಪ್ರತಿಕೃತಿಗಳನ್ನು ಸುಡಲಾಯಿತು.

ಪರಿಸ್ಥಿತಿಯ ವ್ಯಂಗ್ಯ ಹೇಗಿದೆ ಎಂದರೆ, ಅಫಘಾನಿಸ್ತಾನದಲ್ಲಿ ಮುಸ್ಲಿಂ ಮೂಲಭೂತವಾದಿ ಗುಂಪುಗಳನ್ನು ಹುಟ್ಟುಹಾಕಿದ್ದು, ಅವುಗಳಿಗೆ ಧನಸಹಾಯ, ತರಬೇತಿ, ಶಸ್ತ್ರಾಸ್ತ್ರ ನೀಡಿದ್ದು ಅಮೆರಿಕವೇ. ಇದಕ್ಕಾಗಿ ಪಾಕಿಸ್ತಾನದ ನೆಲೆಗಳನ್ನು ಬಳಸಿಕೊಳ್ಳಲಾಗಿತ್ತು. ಅಫಘಾನಿಸ್ತಾನದ ತಾಲಿಬಾನ್ ಅಮೆರಿಕ-ಪಾಕಿಸ್ತಾನಗಳ ಹಿತಾಸಕ್ತಿ ಕಾಪಾಡುವ ಅವೆರಡರ ಪಾಪದ ಶಿಶು. ಅಫಘಾನ್‌ನಲ್ಲಿ ಸೋವಿಯತ್ ಸೈನ್ಯ ಹಾಗೂ ಆಗಿನ ಅಫಘಾನಿಸ್ತಾನದ ಪ್ರಜಾಸತ್ತಾತ್ಮಕ ಸರ್ಕಾರದ ವಿರುದ್ಧ ಹೋರಾಡುವವರಿಗೆ, ಸೌದಿ ಅರೇಬಿಯಾದ ಸಂಘಟನೆಗಳ ಮೂಲಕ ಧನಸಹಾಯ ಮಾಡಿಸಿದ್ದು ಅಮೆರಿಕವೇ. ಅವರಲ್ಲಿ ಕೆಲವರು ಅಮೆರಿಕದ ವಿರುದ್ಧವೇ ತಿರುಗಿ ಬಿದ್ದಾಗ ಮಾತ್ರ 'ಇವರೆಲ್ಲರು ಭಯೋತ್ಪಾದಕರು' ಎಂದು ಬೊಬ್ಬೆ ಹೊಡೆಯುವುದು ಹಾಸ್ಯಾಸ್ಪದ. ಇಂತಹ ಭಯೋತ್ಪಾದಕರನ್ನೇ ಭಾರತದ ಕಾಶ್ಮೀರದ ಮೇಲೆ ಹರಿಯಬಿಟ್ಟಿರುವುದು ಪಾಕಿಸ್ತಾನ-ಅಮೆರಿಕಗಳ ಜಂಟಿ ಕಾರ್ಯಾಚರಣೆಯೆ.

ಅದೇನೇ ಇರಲಿ, ಅಂತರ್‍ರಾಷ್ಟ್ರೀಯ ಭಯೋತ್ಪಾದನೆಯ ವಿರುದ್ಧ ಹೋರಾಡುವ ಅಂತರ್‍ರಾಷ್ಟ್ರೀಯ ಸಹಕಾರ ಅಗತ್ಯ. ಭಯೋತ್ಪಾದಕರು ಯಾವುದಾದರೂ ದೇಶದಲ್ಲಿ ಅಡಗಿದ್ದರೆ, ಆ ದೇಶದ ಸರ್ಕಾರ ಅವರನ್ನು ಹಿಡಿದುಕೊಡಲು ಬೇಕಾದ ಪುರಾವೆ ಒದಗಿಸುವುದು, ಮಾತುಕತೆ ನಡೆಸುವುದು ಅಗತ್ಯ ಎಂಬ ಪ್ರಾಥಮಿಕ ಅಂತರ್‍ರಾಷ್ಟ್ರೀಯ ಕಾನೂನು ಪಾಲಿಸುವುದು ಅಗತ್ಯ. ಇದನ್ನು ಉಲ್ಲಂಘಿಸಿರುವ ಅಮೆರಿಕವನ್ನು, ಅಂತರ್‍ರಾಷ್ಟ್ರೀಯ ಭಯೋತ್ಪಾದಕ ದೇಶ ನಂ.1 ಎಂದು ಕರೆಯಬೇಕು ಅಷ್ಟೆ.

ರಶ್ಯನ್ ರೂಬಲ್ ಅಪಮೌಲ್ಯ ಆರ್ಥಿಕ ರಾಜಕೀಯ ಬಿಕ್ಕಟ್ಟು ತೀವ್ರ

ಹಲವು ದಿನಗಳಿಂದ ಚಲಾವಣೆಯಲ್ಲಿರುವ ವದಂತಿಗಳನ್ನು ಪುಷ್ಟೀಕರಿಸುತ್ತಾ ರಶ್ಯನ್ ಸರ್ಕಾರ ದೇಶದ ನಾಣ್ಯ ರೂಬಲ್‌ನ ಅಪಮೌಲ್ಯವನ್ನು ಅಧಿಕೃತವಾಗಿ ಘೋಷಿಸಿದೆ. ಎರಡು ದಿನ ಹಿಂದೆಯಷ್ಟೆ, ಈ ವದಂತಿಗಳನ್ನು ನಿರಾಕರಿಸುತ್ತಾ ಅಧ್ಯಕ್ಷ ಯೆಲ್ಸಿನ್ ರೂಬಲ್ ಅಪಮೌಲ್ಯ ಮಾಡುವುದಿಲ್ಲ ಎಂದು ಘೋಷಿಸಿದ್ದರು. ರಶ್ಯನ್ ಸೆಂಟ್ರಲ್ ಬ್ಯಾಂಕ್‌ನ ಘೋಷಣೆಯಿಂದ ರೂಬಲ್ ಸುಮಾರು ಶೇಕಡಾ 50 ರಷ್ಟು ಅಪಮೌಲ್ಯಗೊಂಡಂತಾಗಿದೆ. ಸರ್ಕಾರ ಇದರ ಜತೆಗೆ 90 ದಿನಗಳವರೆಗೆ ವಿದೇಶಿ ಸಾಲ ಮರುಪಾವತಿ, ದೇಶಿಯ ಸಾಲ ಮರುಪಾವತಿಯನ್ನು ಸ್ಥಗಿತಗೊಳಿಸಿದೆ. ಇವೆರಡು ಕ್ರಮಗಳಿಂದ ರಶ್ಯನ್ ಸರ್ಕಾರ ದೇಶದೊಳಗೂ, ಅಂತರ್‍ರಾಷ್ಟ್ರೀಯವಾಗಿ ಎಲ್ಲಾ ಆರ್ಥಿಕ 'ವಿಶ್ವಾಸಾರ್ಹತೆ' ಕಳೆದುಕೊಂಡಿದೆ. ತೀವ್ರ ಆರ್ಥಿಕ, ರಾಜಕೀಯ ಬಿಕ್ಕಟ್ಟಿಗೆ ಹಾದಿಮಾಡಿಕೊಟ್ಟಿದೆ.

ಅಪಮೌಲ್ಯ ನೇರವಾಗಿ ಸಾಮಾನ್ಯ ರಶ್ಯನರನ್ನು ಹಿಂಡಿ ಹಿಪ್ಪೆ ಮಾಡುತ್ತದೆ. ಆಹಾರ ಮತ್ತು ನಿತ್ಯ ಬಳಕೆ ವಸ್ತುಗಳ ಅರ್ಧದಷ್ಟು ರಶ್ಯಾಕ್ಕೆ ಆಮದಾಗುತ್ತದೆ ಎಂದು ನೆನಪಿಸಿಕೊಂಡರೆ, ಇವುಗಳ ಬೆಲೆ ನೇರವಾಗಿ ಏರುತ್ತದೆ ಎಂಬ ಬಗ್ಗೆ ಸಂಶಯವೇ ಇಲ್ಲ. ರೂಬಲ್ ಅಪಮೌಲ್ಯ ದಾರಿ ಮಾಡಲಿರುವ ಹಣದುಬ್ಬರ, ಈಗಾಗಲೇ ತೀವ್ರ ಸಂಕಷ್ಟ ಎದುರಿಸುತ್ತಿರುವ ರಶ್ಯನರನ್ನು ರೊಚ್ಚಿಗೆಬ್ಬಿಸಲಿದೆ.

ಇದಲ್ಲದೆ ನೂರಾರು ರಶ್ಯನ್ ಬ್ಯಾಂಕುಗಳು, ಕೆಲವು ದೊಡ್ಡವೂ ಸೇರಿ ಸರ್ಕಾರದ ಈ ಎರಡು ನಿರ್ಧಾರಗಳಿಂದ ದಿವಾಳಿಯಾಗುವ ಸಾಧ್ಯತೆ ಇದೆ. ಇದು ರಶ್ಯದ ಆರ್ಥಿಕ, ಬ್ಯಾಂಕಿಂಗ್, ಸುಧಾರಣೆಗಳನ್ನು ಏರುಪೇರು ಮಾಡಬಹುದು. ಈ ಸುಧಾರಣೆಗಳು ಐಎಂಎಫ್ ಸಾಲದ ಪಾವತಿಗೆ ಶರತ್ತುಗಳಲ್ಲಿ ಒಂದು. ರೂಬಲ್ ಅಪಮೌಲ್ಯ ರಶ್ಯದ ರಫ್ತಿಗೆ ಉತ್ತೇಜನ ನೀಡಬಹುದಿತ್ತು. ಆದರೆ ರಶ್ಯದ ರಫ್ತು ಮುಖ್ಯವಾಗಿ ತೈಲ. ಈ ತೈಲದ ಅಂತರ್‍ರಾಷ್ಟ್ರೀಯ ಮಾರುಕಟ್ಟೆ ಬೆಲೆ ಕುಸಿದಿದೆ.

ಈವರೆಗೆ ರೂಬಲ್‌ನ ಸುಭದ್ರತೆ, ಹಣದುಬ್ಬರದ ನಿಯಂತ್ರಣದ ಮೇಲೆ ಕೇಂದ್ರೀಕರಿಸಿ ರಶ್ಯದ ಸರ್ಕಾರ ಉಳಿಸಿಕೊಂಡಿದ್ದ ಅಲ್ಪಸ್ವಲ್ಪ ಜನರ ವಿಶ್ವಾಸವೂ ಆವಿಯಾಗಲಿದೆ. ಅಲ್ಲದೆ ಕಳೆದ ಐದು ವರ್ಷಗಳಲ್ಲಿ ಯೆಲ್ಸಿನ್ ಸರ್ಕಾರ ಅನುಸರಿಸುತ್ತಾ ಬಂದ ಆರ್ಥಿಕ ನೀತಿ ತನ್ನ ಎಲ್ಲಾ ನಂಬಿಕಸ್ತನವನ್ನು ಕಳೆದುಕೊಳ್ಳಲಿದೆ. ಕೇಂದ್ರೀಕೃತ ಆರ್ಥಿಕವನ್ನು 'ಚಲನಶೀಲ ಮಾರುಕಟ್ಟೆ ಆರ್ಥಿಕ'ದಲ್ಲಿ ಬದಲಾಯಿಸಲು ಹೊರಟ ಆರ್ಥಿಕ ನೀತಿಯ ದಿವಾಳಿತನದ ಬಗ್ಗೆ ಈಗ ಯಾರಿಗೂ ಸಂಶಯ ಉಳಿದಿಲ್ಲ. ಇದರ ರಾಜಕೀಯ, ಆರ್ಥಿಕ ಪರಿಣಾಮ ಅಗಾಧ.

ರಶ್ಯದ ಪಾರ್ಲಿಮೆಂಟು ಈಗಾಗಲೇ ಅಧ್ಯಕ್ಷ ಯೆಲ್ಸಿನರನ್ನು ರಾಜಿನಾಮೆ ಕೊಡುವಂತೆ ಒತ್ತಾಯಿಸಿದೆ. ಇಲ್ಲದಿದ್ದರೆ ಅಧ್ಯಕ್ಷರ ಮೇಲೆ ದೋಷಾರೋಪಣೆ ಹೊರಡಿಸುವುದಾಗಿ ಹೇಳಿದೆ. ಕಮ್ಯುನಿಸ್ಟ್ ನಾಯಕ ಅಧ್ಯಕ್ಷ ಯೆಲ್ಸಿನರ ಸರ್ಕಾರ ವಜಾ ಮಾಡಿ, ಪಾರ್ಲಿಮೆಂಟಿನಲ್ಲಿ ಬಹುಮತ ಇರುವ ಪಕ್ಷಗಳ 'ರಾಷ್ಟ್ರೀಯ ಸರ್ಕಾರ' ರಚಿಸಬೇಕೆಂದು ಕರೆ ನೀಡಿದ್ದಾರೆ. ಈ ಸರ್ಕಾರ ಬದಲಿ ಆರ್ಥಿಕ ನೀತಿಗಳನ್ನು, ಅಧ್ಯಕ್ಷರ ದೋಷಾರೋಪಣೆಗೆ ನೇಮಿಸಿದ್ದ ಸಮಿತಿಯ ಮುಂದೆ ಯೆಲ್ಸಿನ್ ವಿರುದ್ಧ ಸಾಕ್ಷ್ಯ ನೀಡಲು ತಾನು ಸಿದ್ಧ ಎಂದು ಮಾಜಿ ಸೋವಿಯತ್ ಅಧ್ಯಕ್ಷ ಗೋರ್ಬಚೆವ್‌ರ ಹೇಳಿಕೆ ಗಾಳಿ ಯಾವ ಕಡೆ ಬೀಸುತ್ತಿದೆ ಎಂಬುದರ ಸೂಚಕ. ಯೆಲ್ಸಿನ್ ಮೇಲೆ ಸೋವಿಯತ್ ಒಕ್ಕೂಟವನ್ನು ಒಡೆಯುವ ಪಿತೂರಿ, ಚೆಚೆನ್ಯಾದ ಮೇಲೆ ಯುದ್ಧ ಹೂಡುವ ಬಗ್ಗೆ ದೋಷಾರೋಪಣೆ ಹಾಕಲಾಗಿದೆ.

ರಶ್ಯಾ ತಿರುವಿನ ಬಳಿ ನಿಂತಿದೆ - ಈ ಬಿಕ್ಕಟ್ಟಿನ ಪರಿಹಾರ ಅಧ್ಯಕ್ಷ ಯೆಲ್ಸಿನ್ ಸರ್ಕಾರದ ಪತನದಲ್ಲೂ ಆಗಬಹುದು. ಅಥವಾ 1993 ರಂತೆ ಸಶಸ್ತ್ರ ಆಂತರಿಕ ಹೋರಾಟದಲ್ಲೂ ಕೊನೆಗೊಳ್ಳಬಹುದು.

ಬೋತಾಗೆ ಜೈಲು ಅಥವಾ ದಂಡ

ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ಹಾಗೂ ವರ್ಣಬೇಧ ವ್ಯವಸ್ಥೆಯ ಅತ್ಯಂತ ಕ್ರೂರ ಆಳ್ವಿಕೆಗೆ ಕುಖ್ಯಾತರಾಗಿದ್ದ ಬೋತಾರಿಗೆ ದೇಶದ ಸತ್ಯಶೋಧನಾ ಕಮಿಷನ್ ಎರಡು ವರ್ಷ ಜೈಲು ವಾಸ ಅಥವಾ 10 ಸಾವಿರ ರ್‍ಯಾಂಡ್ ದಂಡ ವಿಧಿಸಿದೆ.

ಈ ಶಿಕ್ಷೆ ವರ್ಣಭೇದ ಆಳ್ವಿಕೆ ಅವಧಿಯ ಅತ್ಯಾಚಾರಗಳ ಬಗ್ಗೆ ತನಿಖೆ ನಡೆಸುತ್ತಿರುವ ಬಿಷಪ್ ಟುಟು ಅಧ್ಯಕ್ಷತೆಯ ಸತ್ಯಶೋಧನಾ ಕಮಿಷನ್‌ನ ಸಮನ್ಸ್ ತಿರಸ್ಕರಿಸಿ, ಉಲ್ಲಂಘಿಸಿದ್ದಕ್ಕೆ, 82 ವರ್ಷದ ಮಾಜಿ ಅಧ್ಯಕ್ಷನ ವಿರುದ್ಧ ಕಮಿಷನ್ ಮುಂದೆ ಭಾರಿ ಸಾಕ್ಷ್ಯ ಇದೆ. ಈ ಬಗ್ಗೆ ಕಮಿಷನ್‌ನ ತನಿಖೆಗೆ ಬರಬೇಕೆಂದು ಕಳಿಸಿದ ಹಲವಾರು ಸಮನ್ಸ್‌ಗಳನ್ನು ಬೋತಾ ತಿರಸ್ಕರಿಸಿದ್ದರು. ವರ್ಣಭೇದ ವಿರುದ್ಧದ ಹೋರಾಟಗಾರರು, ಜನಸಾಮಾನ್ಯರ ವಿರುದ್ಧ ಹಲವಾರು ದಮನಕಾರಿ ಅಪರಾಧಗಳನ್ನು ಕೈಗೊಳ್ಳಲು ಬೋತಾ ಸ್ವತಃ ಆಜ್ಞೆ ಮಾಡಿದ್ದಾಗಿ, ಹಲವಾರು ಮಾಜಿ ಸರ್ಕಾರಿ, ಅಧಿಕಾರಿಗಳು, ಮಿಲಿಟರಿ ಅಧಿಕಾರಿಗಳು ವರ್ಣಭೇದದ ವಿರುದ್ಧ ಹೋರಾಟಗಾರರು ಸಾಕ್ಷ್ಯ ನೀಡಿದ್ದಾರೆ.

ಆದರೆ ಬೋತಾನ ಮೇಲಿನ ಗುರುತರವಾದ ಆಪಾದನೆಗಳಿಗೆ ಹೋಲಿಸಿದರೆ, ಈ ಶಿಕ್ಷೆ ಏನೂ ಅಲ್ಲ. ಈ ಶಿಕ್ಷೆಗೂ ಬೋತಾ ಒಳಗಾಗುತ್ತಾರೆ ಎಂಬ ಯಾವ ಗ್ಯಾರಂಟಿ ಇಲ್ಲ. ಬೋತಾನ ವಕೀಲರು ಈಗಾಗಲೇ ಮೇಲಿನ ಕೋರ್ಟುಗಳಿಗೆ ಅಪೀಲು ಮಾಡಿದ್ದಾರೆ.

ದೇಶ ವಿರೋಧಿ ಟಾಟಾ-ಸಿಂಗಾಪುರ್ ಏರ್‌ಲೈನ್ಸ್ ವ್ಯವಹಾರ ಕಾರ್ಮಿಕ ಸಂಘಗಳ ವಿರೋಧ

ಭಾರತದ ವಿಮಾನಯಾನ ಉದ್ದಿಮೆಯ ಹಿತಾಸಕ್ತಿಗಳನ್ನು ರಕ್ಷಿಸಲು ಪ್ರಧಾನ ಮಂತ್ರಿಗಳು ಮಧ್ಯಪ್ರವೇಶಿಸಿ ಟಾಟಾ-ಸಿಂಗಾಪುರ್ ಏರ್‌ಲೈನ್ಸ್ ವ್ಯವಹಾರವನ್ನು ಸಾರಾಸಗಟು ತಿರಸ್ಕರಿಸಬೇಕು ಎಂದು ಐದು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಆಗ್ರಹಪಡಿಸಿವೆ. ಈ ವ್ಯವಹಾರ ಮಂಜೂರಾತಿ ನೀಡಲು ತೆರೆ-ಮರೆಯ ಪ್ರಯತ್ನಗಳು ನಡೆಯುತ್ತಿರುವುದನ್ನು ಅವು ಬಲವಾಗಿ ವಿರೋಧಿಸಿವೆ.

ಪ್ರಧಾನ ಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಈ ಸಂಘಟನೆಗಳ ಮುಖಂಡರು ಈ ಪ್ರಸ್ತಾವವನ್ನು ವಿದೇಶಿ ಹೂಡಿಕೆ ಪ್ರೋತ್ಸಾಹ ಮಂಡಳಿ (ಎಫ್.ಐ.ಪಿ.ಬಿ)ಗೆ ಒಪ್ಪಿಸುವ ಸರಕಾರದ ನಿರ್ಣಯದ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ.

"ಈ ಪ್ರಸ್ತಾವದಲ್ಲಿ ಸಿಂಗಾಪುರ್ ಏರ್‌ಲೈನ್ಸ್‌ಗೆ 40% ಇಕ್ವಿಟಿಗೆ ಸ್ಪಷ್ಟ ಅವಕಾಶವಿದ್ದು ಅದು ಟಾಟಾಗಳ ಮೂಲಕ ಭಾರತೀಯ ನಾಗರಿಕ ವಿಮಾನಯಾನ ಮಾರುಕಟ್ಟೆಯನ್ನು ವಶಪಡಿಸಿಕೊಳ್ಳ ಬಯಸುತ್ತಿದೆ. ಭಾರತ ಸರಕಾರ ಈ ಪ್ರಸ್ತಾವವನ್ನು ಒಪ್ಪಿಕೊಂಡರೆ ಅದು ಸಾರ್ವಜನಿಕ ವಲಯದ ನಾಗರೀಕ ವಿಮಾನಯಾನ ಉದ್ದಿಮೆಗೆ ವಿನಾಶಕಾರಿಯಾಗುತ್ತದೆ" ಎಂದು ಈ ಪತ್ರ ಹೇಳಿದೆ.

ಟಾಟಾಗಳು ಸರಕಾರ ನೀಡಿದ ಮಾರ್ಗದರ್ಶನ ಸೂತ್ರಗಳನ್ನು ಜ್ಯಾರಿ ಮಾಡುವಲ್ಲಿ ವಿಫಲರಾಗಿದ್ದರೂ ನಾಗರೀಕ ವಿಮಾನಯಾನ ಮಂತ್ರಾಲಯ ಈ ಪ್ರಸ್ತಾವವನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತಿರುವುದು ಟಾಟಾಗಳು ಮತ್ತು ನಾಗರೀಕ ವಿಮಾನಯಾನ ಮಂತ್ರಾಲಯದ ನಡುವೆ ಏನೋ ತೆರೆಮರೆಯ ಮಾತುಕತೆಗಳು ನಡೆದಿವೆ ಎಂಬುದರ ಸ್ಪಷ್ಟ ಸಂಕೇತ ನೀಡುತ್ತಿದೆ ಎಂದಿರುವ ಈ ಪತ್ರ "ದೇಶದ ಮತ್ತು ಸಾರ್ವಜನಿಕ ವಲಯದ ಏರ್‌ಲೈನ್ಸ್‌ಗಳ ಹಿತಾಸಕ್ತಿಗಳಿಗೆ ವಿರುದ್ಧವಾದ ಏನೋ ಗುಪ್ತ ವ್ಯವಹಾರ ಟಾಟಾಗಳೊಂದಿಗೆ ನಡೆದಿದೆ ಎಂಬ ಊಹಾಪೋಹಗಳಿವೆ" ಎಂದು ಪ್ರಧಾನ ಮಂತ್ರಿಗಳ ಗಮನಕ್ಕೆ ತಂದಿದೆ.

ಆದ್ದರಿಂದ ಪ್ರಧಾನಮಂತ್ರಿಗಳು ಮಧ್ಯಪ್ರವೇಶಿಸಿ ಭಾರತದ ಕಾರ್ಮಿಕ ಆಂದೋಲನ ಈ ಪತ್ರದಲ್ಲಿ ವ್ಯಕ್ತಪಡಿಸಿರುವ ಒಮ್ಮತಾಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಈ ಕಾರ್ಮಿಕ ಮುಖಂಡರು ಆಗ್ರಹಪಡಿಸಿದ್ದಾರೆ.

ಏಐಟಿಯುಸಿ, ಸಿಐಟಿಯು, ಬಿಎಂಎಸ್, ಹೆಚ್‌ಎಂಎಸ್ ಹಾಗೂ ಇಂಟಕ್ ಮುಖಂಡರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ

(ಐ.ಎನ್.ಎಸ್.)

ಆನೇಕಲ್‌ನಲ್ಲಿ ರೈತರ ಧರಣಿ

ಬಗರ್‌ಹುಕುಂ ಸಾಗುವಳಿ ಜಮೀನಿಗೆ ಹಕ್ಕುಪತ್ರ ಕೊಡದಿರುವುದು, ಪ್ರಭಾವೀ ವ್ಯಕ್ತಿಗಳಿಂದ ಭೂಕಬಳಿಕೆ, ದುಬಾರಿ ವಿದ್ಯುಚ್ಛಕ್ತಿ ದರ, ಕಳಪೆ ಬೀಜ ವಿತರಣೆ, ಗ್ರಾಮದಲ್ಲಿ ಕನಿಷ್ಟ ಸೌಲಭ್ಯಗಳ ಅಭಾವ ಇವನ್ನೆಲ್ಲಾ ಪ್ರತಿಭಟಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಆಗಸ್ಟ್ 22 ರಂದು ಆನೇಕಲ್ ತಾಲೂಕಿನ ತಹಶೀಲ್ದಾರ್ ಕಛೇರಿಯೆದುರು ಧರಣಿ ಸತ್ಯಾಗ್ರಹ ನಡೆಸಲಾಯಿತು. ಅದಕ್ಕೆ ಮೊದಲು ಒಂದು ಮೆರವಣಿಗೆಯನ್ನೂ ತೆಗೆಯಲಾಯಿತು. 200 ರೈತರು ಭಾಗವಹಿಸಿದ್ದರು.

ರೈತ ಸಂಘದಿಂದ ಬೇಡಿಕೆಗಳ ಮನವಿಯನ್ನು ಸ್ವೀಕರಿಸಿದ ತಹಶೀಲ್ದಾರರು ರೈತರ ಮೇಲೆ ದೌರ್ಜನ್ಯ ನಡೆಸುವ ವ್ಯಕ್ತಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದೆಂದು 3 ತಿಂಗಳೊಳಗೆ ಎಲ್ಲರಿಗೂ ಪಟ್ಟಾ ನೀಡುವುದಾಗಿಯೂ ಹೇಳಿದರು. ಅರೆಹಳ್ಳಿಯಲ್ಲಿ ಬಡವರಿಗೆ ವಸತಿ ನೀಡಲೆಂದು ಸರ್ಕಾರ ಸ್ವಾಧೀನ ಪಡಿಸಿಕೊಂಡಿದ್ದ ಜಮೀನಿನ ಬಗ್ಗೆ ಭೂಮಾಲಿಕರ ವಿರುದ್ಧ ತೀರ್ಮಾನವಾಗಿದ್ದರೂ ಮುಂದಿನ ಕ್ರಮ ಕೈಗೊಳ್ಳದಿರುವುದನ್ನು ಗಮನಕ್ಕೆ ತಂದಾಗ ಬಿ.ಡಿ.ಓ. ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಆದೇಶ ನೀಡಿದರು. ತಹಶೀಲ್ದಾರರ ಬಳಿ ಹೋದ ನಿಯೋಗದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಗನ್ನಾಥ್‌ರವರ ಜೊತೆಗೆ ವೆಂಕಟಾಚಲಯ್ಯ, ಶಾಮಣ್ಣ ರೆಡ್ಡಿ, ಶಿವರಾಂ ರೆಡ್ಡಿ, ಕೃಷ್ಣ ರೆಡ್ಡಿ, ಕಸುವಿನ ಸಂತೆಯ ಲಕ್ಷ್ಮಿಬಾಯಿ, ಮರಿಯಮ್ಮ ಮಹಮ್ಮದ್ ಖಾನ್, ಸುರೇಶ್ ನಾಯ್ಡು ಮತ್ತಿತರರು ಇದ್ದರು.

ನಂತರ ನಡೆದ ಸಭೆಯನ್ನುದ್ದೇಶಿಸಿ ಸಿಐಟಿಯು ಮುಖಂಡ ರಾಮಯ್ಯನವರೂ ಮಾತನಾಡಿದರು.

"ಅಂಬೇಡ್ಕರ್"

ಸನಾತನರಿಗೊಂದು ಸವಾಲ್?

ದೇಶದ ಪ್ರಸ್ತುತ ಸನ್ನಿವೇಶದಲ್ಲಿ ಕೋಮುವಾದ ತಾಂಡವ ನೃತ್ಯ ಮಾಡುತ್ತಿರುವಾಗ ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಆಗಸ್ಟ್ 20 ರಂದು ಸಿ.ಜಿ.ಕೆ. ಯವರ ನಿರ್ದೇಶನದಲ್ಲಿ 'ಅಂಬೇಡ್ಕರ್' ನಾಟಕವನ್ನು 'ರಂಗನಿರಂತರ' ಅಭಿನಯಿಸಿ ಪ್ರದರ್ಶನಗೊಳಿಸಿತು.

ಇತ್ತೀಚೆಗೆ ಮಹಾರಾಷ್ಟ್ರದಲ್ಲಿ 'ನಾಥೂರಾವ್ ಗೋಡ್ಸೆ' ನಾಟಕ ಪ್ರದರ್ಶನ ಗೊಂಡಿತು. ಗಾಂಧೀಜಿಯವರನ್ನು ಹತ್ಯೆ ಮಾಡಿದ ಗೋಡ್ಸೆಯನ್ನು ವೈಭವೀಕರಿಸುವ, ಕೋಮು ಸೌಹಾರ್ದತೆಯನ್ನು ಎತ್ತಿ ಹಿಡಿದ ಗಾಂಧೀಜಿಯ ಕೊಲೆಯನ್ನು ಸಮರ್ಥಿಸುವ ಈ ನಾಟಕ ಕೋಮುವಾದಿಗಳ ಅಟ್ಟಹಾಸ ವನ್ನು ಮೆರೆಸಿದೆ. ಇದೇ ಸಂದರ್ಭದಲ್ಲಿ 'ಅಂಬೇಡ್ಕರ್' ನಾಟಕ ಪ್ರದರ್ಶನಗೊಂಡು ಸನಾತನವಾದಿಗಳಿಗೆ ಸವಾಲಾಗಿ ರೂಪುಗೊಂಡಿದೆ.

ದಲಿತರ ಸಾಮಾಜಿಕ ಸಮಾನತೆಗಾಗಿ ತನ್ನನ್ನು ಅರ್ಪಿಸಿಕೊಂಡು ಜೀವನದುದ್ದಕ್ಕೂ ಹೋರಾಟ ನಡೆಸಿ ದಲಿತರ ಆಶಾಕಿರಣವಾದ ಡಾ|| ಬಿ.ಆರ್. ಅಂಬೇಡ್ಕರ್‌ರವರ ಜೀವನದ ಹಲವು ಪ್ರಮುಖ ಘಟನೆಗಳು ಈ ನಾಟಕದ ಕಥಾವಸ್ತುವಾಗಿದೆ-ಬಹಳ ಸುಸಂಬದ್ಧವಾಗಿ, ಪ್ರಸ್ತುತತೆಯಲ್ಲಿ ಈ ಘಟನೆಗಳು ನಾಟಕದಲ್ಲಿ ರೂಪಿತವಾಗಿವೆ.

"ನನ್ನ ಜನರಿಗೆ ಏನನ್ನೂ ಮಾಡಲಾಗಲಿಲ್ಲ" ವೆಂಬ ಕೊರಗಿನಿಂದಲೇ ಈ ನಾಟಕ ಆರಂಭ ವಾಗುತ್ತದೆ. 1927 ರಲ್ಲಿ ನಡೆದ ಚೌಡನಕೆರೆ ಸಾಮೂಹಿಕ ನೀರು ಮುಟ್ಟುವ ಹೋರಾಟ ದಲಿತರ ಸಾಮಾಜಿಕ ನ್ಯಾಯಕ್ಕಾಗಿ ನಡೆದ ಹೋರಾಟವಾಗಿದೆ. ಈ ಹೋರಾಟದಲ್ಲಿ ಅಂಬೇಡ್ಕರ್ ದಲಿತರ ಸ್ವಾಭಿಮಾನದ ಸಂಕೇತವಾಗಿ ಕವಲೊಡೆದಿದ್ದಾರೆ. ದಲಿತರ ಅಸಹಾಯಕ ಬದುಕು, ಅಂಧಶ್ರದ್ಧೆ, ವಯೋವೃದ್ಧನ ಪಾತ್ರದಲ್ಲಿ ಮೂಡಿ ಸಂಘಟಿತ ಹೋರಾಟಕ್ಕೆ ಕಿಡಿಯಾಗುತ್ತದೆ, ಸ್ಫೂರ್ತಿಯಾಗುತ್ತದೆ.

'ಮನುಧರ್ಮಶಾಸ್ತ್ರ'ವನ್ನು ಸುಟ್ಟು 'ಹಿಂದು ಧರ್ಮದಲ್ಲಿ ದಲಿತರು ಎಂದೂ ಒಂದಾಗಲಾರರು' ಎಂಬ ಕಟು ಸತ್ಯವನ್ನು ಅಂಬೇಡ್ಕರ್ ಸ್ಪಷ್ಟಪಡಿಸಿದ್ದಾರೆ.

ಲಾಹೋರಿನಲ್ಲಿ ಜಟಪಟ್ ತೊಡರ್ ಮಂಡಲ(ಜಾತಿವಿನಾಶಕ್ಕಾಗಿ ಸವರ್ಣೀಯ ಹಿಂದುಗಳು ಸ್ಥಾಪಿಸಿದ ಸಂಸ್ಥೆ) 1936 ರಲ್ಲಿ ಸಮ್ಮೇಳನ ನಡೆಸಲು ನಿರ್ಧರಿಸಿ, ಅಂಬೇಡ್ಕರ್‌ರವರನ್ನು ಈ ಸಮ್ಮೇಳನದ ಅಧ್ಯಕ್ಷ ಪದವಿಗೆ ಆಹ್ವಾನಿಸುತ್ತದೆ. ಈ ಸಮ್ಮೇಳನಕ್ಕೆ ಅಂಬೇಡ್ಕರ್ ಭಾಷಣ ತಯಾರಿಸಿ ಸದಸ್ಯರಾದ ಭಗವಾನ್‌ರಿಗೆ ನೀಡುತ್ತಾರೆ. 'ಜಾತಿ ವಿನಾಶ'ದ ಬಗ್ಗೆ ಈ ಲೇಖನದಲ್ಲಿ ಪ್ರಸ್ತಾಪಿಸಿ ವೇದಗಳ ಬಗ್ಗೆ ಟೀಕೆ ಮಾಡಿರುತ್ತಾರೆ. ಈ ಅಂಶವನ್ನು ತೆಗೆದು ಹಾಕಬೇಕೆಂದು ಕೆಲವು ಹಿಂದೂ ಪಟ್ಟಭದ್ರ ಹಿತಾಸಕ್ತಿಗಳು ಒತ್ತಾಯಿಸುತ್ತಾರೆ. ಲೇಖನದ ಸಾರಾಂಶ ಈ ರೀತಿ ಇದೆ

ಭಗವಾನ್‌ರಿಗೆ,

22 ರಂದು ನೀವು ಬರೆದ ಪತ್ರ ತಲುಪಿದೆ. ನನ್ನ ಭಾಷಣದಲ್ಲಿ ನಿರ್ದಿಷ್ಟ ಭಾಗಗಳನ್ನು ತೆಗೆಯಲಾಗದಿದ್ದರೆ ಸಮ್ಮೇಳನವನ್ನು ಮುಂದೂಡುವುದಾಗಿ ತಿಳಿಸಿದೆ. ಆದರೆ ಅಧ್ಯಕ್ಷ ಪದವಿಯ ಗೌರವಕ್ಕಾಗಿ ಅಧ್ಯಕ್ಷರ ಭಾಷಣದ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲಾರೆ. ಜಾತೀಯತೆಗೆ ತಳಹದಿಯಾದ ಧಾರ್ಮಿಕ ಭಾವನೆಗಳನ್ನು ನಿರ್ಮೂಲನ ಮಾಡದಿದ್ದರೆ, ಜಾತಿ ವಿನಾಶ ಸಾಧ್ಯವಿಲ್ಲ ಎಂದು ನನ್ನ ನಂಬಿಕೆ. ಅಂತರ್ ಜಾತಿ ವಿವಾಹ, ಸಹಪಂಕ್ತಿ ಭೋಜನ ವಾಗಲಿ ಜಾತಿ ವಿನಾಶಕ್ಕೆ ದಾರಿಯಾಗಲಾರದು. ಇದನ್ನೇ ನನ್ನ ಭಾಷಣದಲ್ಲಿ ವಿವರಿಸಿದ್ದೇನೆ. ನನ್ನ ಅಭಿಪ್ರಾಯ ಸ್ವಾತಂತ್ರ್ಯವನ್ನು ಮೊಟಕು ಮಾಡುವ ಅಧಿಕಾರ ನಿಮಗಿಲ್ಲ. ಅಧ್ಯಕ್ಷ ಪದವಿಗಾಗಿ ನನ್ನ ಸಂಕಲ್ಪವನ್ನು, ನಂಬಿಕೆಯನ್ನು ತೊರೆಯಲು ಸಿದ್ದನಿಲ್ಲ. ನೀವು ಹೇಳಿರುವಂತೆ ನನಗೆ ಶ್ರಮವಾಗಿದೆ ನಿಜ. ಆ ಶ್ರಮದಿಂದ ನನಗೆ ಲಾಭವೂ ಆಗಿದೆ.

ಇತಿ ನಿಮ್ಮವ
ಬಿ.ಆರ್.ಅಂಬೇಡ್ಕರ್

ಈ ನಿಲುವುಗಳು ಸನಾತನವಾದಿಗಳಿಗೆ ಕಸಿವಿಸಿ ಮಾಡಿತು. ಅಂಬೇಡ್ಕರ್‌ರನ್ನು ವ್ಯಂಗ್ಯವಾಡಿದರು. ಅಂಬೇಡ್ಕರ್ ನಿಲುವುಗಳನ್ನು ಪ್ರತಿಪಾದಿಸಿದ ಭಗವಾನ್‌ರನ್ನು ಹೀಯಾಳಿಸಿದರು. ಹಿಂದೂ ಕೋಮುವಾದಿಗಳಿಗೆ ಅಂಬೇಡ್ಕರ್ ಸವಾಲಾಗಿ ನಿಲ್ಲುತ್ತಾರೆ. ಅಂಬೇಡ್ಕರ್ ಪಾತ್ರದಲ್ಲಿ ಶ್ರೀಕಾಂತ ಕಕ್ಕೇರಿಯವರು ತುಂಬಾ ನಿಷ್ಠೆಯಿಂದ ಬಿಂಬಿತವಾಗಿದ್ದಾರೆ.

ಕಮ್ಯುನಲ್ ಅವಾರ್ಡ್-1932

ಮೊದಲನೆಯ ದುಂಡು ಮೇಜಿನ ಪರಿಷತ್ತಿಗೆ ಬ್ರಿಟಿಷ್ ಸರಕಾರ ಅಂಬೇಡ್ಕರ್- ಗಾಂಧೀಜಿಯವರನ್ನು ಆಹ್ವಾನಿಸುತ್ತದೆ. ಈ ಸಭೆಯಲ್ಲಿ ಅಂಬೇಡ್ಕರರು 'ಕಮ್ಯುನಲ್ ಅವಾರ್ಡ್' ಬಗ್ಗೆ ವಾದಿಸುತ್ತಾರೆ. ದಲಿತರಿಗೆ ರಾಜಕೀಯ ಪ್ರಾತಿನಿಧ್ಯ ಬೇಕು, ಇಂಡಿಯಾದಲ್ಲಿ ದಲಿತರನ್ನು ಸಮಾಜದಿಂದ ಹೊರಹಾಕಲಾಗಿದೆ, ದಲಿತರ ಏಳಿಗೆಗೆ ರಾಜಕೀಯ ಪ್ರಾತಿನಿಧ್ಯ ಅಗತ್ಯವೆಂದು ವಾದಿಸುತ್ತಾರೆ. ಆದರೆ ಗಾಂಧೀಜಿ ಅಂಬೇಡ್ಕರ್‌ರವರ ಈ ವಾದವನ್ನು ತಿರಸ್ಕರಿಸುತ್ತಾರೆ. ಅಂಬೇಡ್ಕರ್‌ರವರು ಈ ಹೇಳಿಕೆಯನ್ನು ಅತ್ಯುಗ್ರವಾಗಿ ಖಂಡಿಸಿ ಬೀಳ್ಕೊಡುತ್ತಾರೆ. ಗಾಂಧೀಜಿ ಈ ಕಾರಣದಿಂದ ಅನಿರ್ದಿಷ್ಟಕಾಲ ಉಪವಾಸ ಕೈಗೊಂಡು ಅಂಬೇಡ್ಕರರನ್ನು ಇಕ್ಕಟ್ಟಿಗೆ ಸಿಲುಕಿಸುತ್ತಾರೆ. ಅಂಬೇಡ್ಕರ್ ಇಂತಹ ಗಾಂಧೀಜಿಯವರ ನಿಲುವನ್ನು ಬ್ಲಾಕ್ ಮೇಲ್ ತಂತ್ರವೆಂದು, ಆಷಾಢಭೂತಿತನವೆಂದು, ನನ್ನನ್ನು ಜನರಿಂದ ಬೇರ್ಪಡಿಸುವ ತಂತ್ರ, ನನ್ನ ವಯಕ್ತಿಕ ತೇಜೋವಧೆ ಎಂದು ಬಣ್ಣಿಸುತ್ತಾರೆ. ಮಾಳವೀಯ, ನೆಹರು, ಗಾಂಧೀಜಿ ಹೆಂಡತಿ, ಮಗನ ಕೋರಿಕೆ ಈ ಎಲ್ಲವುಗಳ ಇಕ್ಕಟ್ಟಿಗೆ ಸಿಲುಕಿ ಪರಿತಪಿಸುತ್ತಾರೆ. ಕೊನೆಗೆ ಪ್ರಾಂತೀಯ ವಿಧಾನಸಭೆ ಮತ್ತು ಕೇಂದ್ರ ವಿಧಾನಸಭೆಗೆ ದಲಿತರಿಗೆ ಪ್ರಾತಿನಿಧ್ಯ ಪಡೆಯುವಲ್ಲಿ ಯಶಸ್ವಿಯಾಗಿ ಒಪ್ಪಂದಕ್ಕೆ ಬರುತ್ತಾರೆ.

ಸ್ವತಂತ್ರ ಭಾರತಕ್ಕೆ ಸಂವಿಧಾನ ಕರ್ತೃವಾಗಿ ಸಂವಿಧಾನ ಬರೆದು ಸಿದ್ಧಪಡಿಸಿ ರಾಷ್ಟ್ರಕ್ಕೆ ಅರ್ಪಿಸುತ್ತಾರೆ. ಇದೇ ಸಂದರ್ಭದಲ್ಲಿ 1951 ರಲ್ಲಿ ಹಿಂದ್ ಕೋಡ್ ಬಿಲ್ ಹಿಂದೂ ಧರ್ಮೀಯರಲ್ಲಿ ಸಮಾನತೆ, ಮಹಿಳೆಯರಿಗೆ ಸಮಾನ ಹಕ್ಕುಗಳು, ಅಂತರಜಾತಿ ವಿವಾಹ ಇತ್ಯಾದಿಗಳಿಂದ ಕೂಡಿದ ಈ ಮಸೂದೆ ಅತ್ಯಗತ್ಯವಾಗಿದೆ ಎಂದು ಅಂಬೇಡ್ಕರ್ ಈ ಕರಡನ್ನು ಸಂಸತ್ತಿನಲ್ಲಿ ಮಂಡಿಸುತ್ತಾರೆ. ಇದರಿಂದ ಸಂಪ್ರದಾಯವಾದಿಗಳು ಕುಪಿತಗೊಳ್ಳುತ್ತಾರೆ. ಕಾಂಗ್ರೆಸ್‌ನಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಪಕ್ಷವನ್ನೇ ಒಡೆಯುವ ಪರಿಸ್ಥಿತಿ ತರುತ್ತಾರೆ. ಆರ್ಯ ಸಮಾಜದವರು ಇದನ್ನು ವಿರೋಧಿಸುತ್ತಾರೆ. ಆದರೆ ಅಂಬೇಡ್ಕರ್ ತಮ್ಮ ನಿಲುವುಗಳನ್ನು ನಿಶ್ಚಲ,


ಗೋಪಾಲಕೃಷ್ಣ ಹರಳಹಳ್ಳಿ

ನಿರ್ಭಯವಾಗಿ ಪ್ರತಿಪಾದಿಸಿ ದೇಶದ ತುಂಬಾ ಪ್ರವಾಸ ಮಾಡಿ ಚರ್ಚಿಸುತ್ತಾರೆ. ಆದರೆ ಅಧಿಕಾರದ ಒತ್ತಡದಿಂದ ಹಿಂದೂ ಕೋಡ್ ಬಿಲ್‌ನ್ನು ನೆಹರುರವರು ಕಡೆಗಣಿಸುತ್ತಾರೆ. ಸಂಸತ್ತಿನ ಮಾನ್ಯತೆ ಪಡೆಯದೆ ಈ ಮಸೂದೆ ಮುರಿದು ಬೀಳುತ್ತದೆ. ಕಾಂಗ್ರೆಸ್‌ನ ಈ ನೀತಿಯಿಂದಾಗಿ ಅಂಬೇಡ್ಕರ್ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ.

ಮನುಷ್ಯರನ್ನು ವಿಭಜಿಸಿದ ಮತ್ತು ಇಂದಿಗೂ ವಿಭಜಿಸುತ್ತಿರುವ ಜಾತಿಪದ್ಧತಿಯ ಅಮಾನವೀಯತೆಯನ್ನು ಎಳೆಎಳೆಯಾಗಿ ಈ ನಾಟಕ ಬಿಡಿಸುತ್ತಾ ಹೋಗುತ್ತದೆ. ಗಾಂಧೀಜಿ-ಅಂಬೇಡ್ಕರ್‌ರವರ ಭಿನ್ನಾಭಿಪ್ರಾಯಗಳನ್ನು ವಿವರಿಸುತ್ತಲೇ ಸಮಾನತೆಗಾಗಿ ಅಂಬೇಡ್ಕರ್‌ರವರ ಹೋರಾಟ, ಕೋಮುವಾದದ ಬಗ್ಗೆ ಅಂಬೇಡ್ಕರ್‌ರವರ ವಸ್ತುನಿಷ್ಟ ನೀತಿ ನಿಲುವುಗಳನ್ನು ಸಿ.ಜಿ.ಕೃಷ್ಣಸ್ವಾಮಿ ತಮ್ಮ ನಾಟಕದಲ್ಲಿ ನಿರೂಪಿಸಿದ್ದಾರೆ.

ಇಂದಿನ ವಿಷಮ ಪರಿಸ್ಥಿತಿಯಲ್ಲಿ ಈ ನಾಟಕವನ್ನು ನಿರ್ದೇಶಿಸಿ, ಪ್ರದರ್ಶಿಸಿ ಭಾರತೀಯ ಸಮಾಜದಲ್ಲಿ ಅಂತರ್ಗತವಾದ ಅಸಮಾನತೆಯನ್ನು ಹಾಗೂ ಅದನ್ನು ಇಂದಿಗೂ ಮುಂದುವರೆಸಲು ಕಾರಣವಾದ ರಾಜಕಾರಣವನ್ನು ಬಯಲಿಗಿಟ್ಟ ನಿರ್ದೇಶಕ ಸಿ.ಜಿ.ಕೃಷ್ಣಸ್ವಾಮಿ ಹಾಗೂ ನಾಟಕದ ಕರ್ತೃ ಎಲ್.ಹನುಮಂತಯ್ಯನವರು ಪ್ರಗತಿಪರ ಜನರೆಲ್ಲರ ವಂದನೆಗೆ ಅರ್ಹರು. ಮುಂದಿನ ಪ್ರದರ್ಶನಗಳಲ್ಲಿ ನಾಟಕ ರಚನೆಯ ಹಾಗೂ ಅದರ ಪ್ರದರ್ಶನದ ಕೆಲವು ಕೊರತೆಗಳನ್ನು ತುಂಬಿಕೊಂಡರೆ ಸಾಮಾಜಿಕ ಚಳುವಳಿಗೆ ಒಂದು ಅತ್ಯುತ್ತಮ ಕೊಡುಗೆಯಾಗುತ್ತದೆ. ಉದಾಹರಣೆಗೆ ಚಳುವಳಿಯೆಂದರೆ ಭಾಷಣಗಳು ಎನ್ನುವಂತೆ ಭಾಷಣಗಳು ಹೇರಳವಾಗಿವೆ. ಹಿಂದು ಕೋಡ್ ಸಂಬಂಧ ಪಟ್ಟ ನಾಟಕದ ಅಂತಿಮ ಅಂಕ ಈ ಘಟನೆಯ ಪ್ರಾಮುಖ್ಯತೆಯನ್ನು ಬಿಂಬಿಸುವಂತೆ ಬೆಳೆಯಬೇಕಾಗಿದೆ.

ಇದು ಬರಿ ನಾಟಕವಾಗಿರದೆ ದಲಿತರ ದೈನಂದಿನ ಬದುಕಿಗೆ ಚುರುಕು ಮುಟ್ಟಿಸುವ-ಪ್ರಜ್ಞೆಯನ್ನು ಈ ನಾಟಕ ನೀಡುತ್ತ, ಕೊಳೆಗೇರಿಗಳಲ್ಲಿ, ಜನ ಸಾಮಾನ್ಯರ ಬಳಿಗೆ ಹೋಗುವ ಪ್ರಯತ್ನ ಆಗಬೇಕು. ಹಿಂದೂ ಕೋಮುವಾದಿಗಳಿಗೆ, ಸನಾತನವಾದಿಗಳಿಗೆ ಅಂಬೇಡ್ಕರ್ ಖಂಡಿತ ಸವಾಲಾಗಿದ್ದಾರೆ. ಅಂಬೇಡ್ಕರ್ ಭಾವಚಿತ್ರವಿಡಿದು ಅವರ ಜನ್ಮದಿನ ಆಚರಿಸಿ ಸ್ಮರಿಸುವ ಇಂದಿನ ಬಿಜೆಪಿ ಗಳು ನಾಚಿಕೆ ಪಡಬೇಕಾಗಿದೆ. ಅಧಿಕಾರ ಗಿಟ್ಟಿಸಿಕೊಳ್ಳಲು ಬಿಜೆಪಿ-ನಡೆಸುತ್ತಿರುವ ಇಂತಹ ಕುತಂತ್ರ ಬಯಲಾಗಬೇಕು.



3+1 = 0 ಎಂದು ಬರೆದರೆ ಬಹುಶಃ ನಿಮಗೆ ಸಿಗುವ ಅಂಕಿ ಕೂಡ ಸೊನ್ನೆಯೇ ಆಗಬಹುದು. ಆದರೆ ಯುದ್ಧ ದೇಶಗಳಲ್ಲಿ ಅಪಾರ ಸಹಾನುಭೂತಿ ಸಿಗುತ್ತದೆ. ನಿಮ್ಮ ದೇಶದಲ್ಲಿ ಮೂರಕ್ಕೆ ಒಂದು ಕೂಡಿದರೆ ನಾಲ್ಕಾಗುತ್ತದೆ. ಆದರೆ ಯುದ್ಧ ದೇಶಗಳಲ್ಲಿ ಹಾಗಲ್ಲ. ಮೂರಕ್ಕೆ ಒಂದು ಕೂಡಿದರೆ ಸೊನ್ನೆಯಾಗುತ್ತದೆ. ಗಣಿತ ಜಾಗತಿಕ ಸತ್ಯ. ಯಾವಾಗಲೂ ಸುಳ್ಳು ಹೇಳುವುದಿಲ್ಲ ಎಂದು ಸಾಬೀತಾಗಿ ರುವಾಗ ನೀವು ಒಂದು ಕ್ಷಣ ಬೆರಗಾಗಬಹುದು. ಆದರೆ ಇದು ವಿಚಿತ್ರ ಆದರೂ ಸತ್ಯ, ಕ್ರೂರ ವಾಸ್ತವ.

ತನ್ನ ತಂದೆ, ತಾಯಿ, ತಮ್ಮ ಮೂವರನ್ನೂ ಕೇವಲ ಒಂದು ಯುದ್ಧ ಬಾಂಬಿನಿಂದ ಕಳೆದುಕೊಂಡ ಈ ಏಕಾಕಿ ಬಾಲಕ ತಾನೇ ಕಂಡು ಹಿಡಿದ ಹೊಸ ಅಂಕಗಣಿತ ಇದು. **3+1 = 0** ಹೌದು! ಯುದ್ಧ ಒಮ್ಮೆ ನಿಮ್ಮ ಮನೆ ಬಾಗಿಲಿಗೆ ಬಂದರೆ ಸಾಕು, ಅದು ಜಗತ್ತಿನ ಅನೇಕ ಸತ್ಯಗಳನ್ನು ಬದಲು ಮಾಡುತ್ತದೆ.

3+1 = 0 ಈ 3 ರ ಸ್ಥಾನದಲ್ಲಿ ನೀವು ನೂರು ಇಟ್ಟರೂ ಅಷ್ಟೆ. ಲಕ್ಷ ಇಟ್ಟರೂ ಅಷ್ಟೆ. ಅದರ ಬದಿಗೆ ಒಂದೇ ಒಂದು ಬಾಂಬು ಇಡಿ. ನಿಮ್ಮ ಅಂಕಗಣಿತವೆಲ್ಲಾ ತಲೆಕೆಳಗಾಗುತ್ತದೆ. ಹಾಗೇ ನಿಮ್ಮ ಜೀವಗಳು ಕೂಡಾ....

- ಜಿ.ಎನ್.ಮೋಹನ್.

16ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯ

ಕನ್ನಡ ಅನುವಾದದಲ್ಲಿ ಸರಿಪಡಿಕೆ

ಸಿಪಿಐ(ಎಂ)ನ 16ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯದ ಕನ್ನಡ ಅನುವಾದದಲ್ಲಿ ಒಂದು ಮುದ್ರಣ ತಪ್ಪು ಕಂಡು ಬಂದಿದೆ. ಪುಟ 15 ರಲ್ಲಿನ 2.14 ರ 10ನೇ ಸಾಲಿನಲ್ಲಿ 'ಎಡಯೇತರ ಪಕ್ಷಗಳು' ಎಂದಿರಬೇಕಾದಲ್ಲಿ 'ಎಡಪಕ್ಷಗಳು' ಎಂದು ಮುದ್ರಣಗೊಂಡಿದೆ. ಆ ಭಾಗ ಹೀಗಿರಬೇಕು-" ....ಸಮಾನ ಕನಿಷ್ಟ ಕಾರ್ಯಕ್ರಮದ ಜನಪರ ಅಂಶಗಳನ್ನು ಅನುಷ್ಠಾನಕ್ಕೆ ತರುವಲ್ಲಿ ವಿಫಲತೆ, ಎಡಯೇತರ ಪಕ್ಷಗಳು ನಡೆಸುತ್ತಿದ್ದ ರಾಜ್ಯ ಸರಕಾರಗಳ ಧೋರಣೆಗಳ ನಕಾರಾತ್ಮಕ ಪರಿಣಾಮ ಮತ್ತು 1998 ರ ಚುನಾವಣೆಗಳನ್ನು ಎದುರಿಸುವಲ್ಲಿ ಸಾಮರಸ್ಯತೆ ಮತ್ತು ಐಕ್ಯತೆಯ ಅಭಾವದಿಂದಾಗಿ......"

16ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯಕ್ಕೆ ತಿದ್ದುಪಡಿಗಳನ್ನು ಕಳಿಸುವ ವಿಧಾನ

1. ಎಲ್ಲಾ ತಿದ್ದುಪಡಿಗಳಲ್ಲಿ ಪರಿಚ್ಛೇದ ಸಂಖ್ಯೆಯನ್ನು ತಪ್ಪದೇ ನಮೂದಿಸಬೇಕು.
2. ಪ್ರತಿಯೊಂದು ತಿದ್ದುಪಡಿಯನ್ನು ಪ್ರತ್ಯೇಕ ಹಾಳೆಯಲ್ಲಿ ಕಳಿಸಬೇಕು.
3. ಪ್ರತಿಯೊಂದು ತಿದ್ದುಪಡಿಯಲ್ಲಿ ಸಂಬಂಧಪಟ್ಟ ಸಂಗಾತಿಯ/ಘಟಕದ ಹೆಸರು, ಸಂಗಾತಿಯ ಘಟಕದ ಹೆಸರು ನಮೂದಿಸಿರಬೇಕು.
4. ಸದಸ್ಯರು/ಶಾಖೆ ಕಳಿಸಿದ ತಿದ್ದುಪಡಿಯ ಒಂದು ಪ್ರತಿಯನ್ನು ರಾಜ್ಯ ಸಮಿತಿಗೆ ಕಳುಹಿಸುವುದು, ತಿದ್ದಪಡಿ ಇಂಗ್ಲೀಷಿನಲ್ಲಿರಬೇಕಾಗುತ್ತದೆ. ಕನ್ನಡದಲ್ಲಿಯೂ ಕಳುಹಿಸಬಹುದು. ಆದರೆ ಅದನ್ನು ರಾಜ್ಯ ಸಮಿತಿಯ ಮೂಲಕವೇ ಕಳಿಸಬೇಕು.
5. ಎಲ್ಲಾ ತಿದ್ದುಪಡಿಗಳು ಕೇಂದ್ರ ಸಮಿತಿ ಕಚೇರಿಯನ್ನು ಸಪ್ಟಂಬರ್ 15,1998ರೊಳಗೆ ತಲುಪಬೇಕು.

ವಿಳಾಸ
Communist Party of India (Marxist)
Central Committee
A.K.Gopalan Bhavan
27-29,Bhai Vir Singh Marg
New Delhi -110 001

6. ಲಕೋಟೆಯ ಮೇಲೆ Amendments to Draft Political Resolution ಎಂದು ನಮೂದಿಸಿರಬೇಕು.



'ಭಾರತೀಯ ವಿಮೋಚನಾ ಸಮರ' ಬಿಡುಗಡೆ

ಶಿರಸಿಯಲ್ಲಿ 'ಚಿಂತನ-ಉತ್ತರ ಕನ್ನಡ' ಏರ್ಪಡಿಸಿದ್ದ ವಿಶೇಷ ಸಮಾರಂಭವೊಂದರಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಕಮ್ಯುನಿಸ್ಟ್ ಮುಂದಾಳು ಎಂ.ಎಸ್. ಧಾರೇಶ್ವರ್ ರವರು 'ಚಿಂತನ'ದ ಹೊಸ ಪ್ರಕಟಣೆ 'ಭಾರತೀಯ ವಿಮೋಚನಾ ಸಮರ' ವನ್ನು ಬಿಡುಗಡೆಗೊಳಿಸಿದ ಸಂದರ್ಭದ ಒಂದು ಚಿತ್ರ. 'ಚಿಂತನ'ದ ಸಿ.ಎನ್.ಹೆಗಡೆ ಹಾಗೂ ಸಿ.ಆರ್.ಶಾನಭಾಗ್ ಜೊತೆಗಿದ್ದಾರೆ.

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ.2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by P.Ramachandra Rao for Communist Party of India(Marxist), Karnataka State Committee, EDITOR: P.RAMACHANDRA RAO